No. MAG (3)/NPP/77/2017-18

RNI No. KARKAN-2012/53684/Dtd. 19-12-2013

ವಾಗ್ರಚನೆಯೆಂಬುದು ಕರ್ಣಾಟವಯ್ಯ

# ನೊಳಂಬವಾಣಿ

**NOLAMBAVANI** Kannada Quarterly

ಕನ್ನಡ ತ್ರೈಮಾಸಿಕ

ಸಂಪಾದಕರು : ಡಾ. ಬಿ.ಸಿ.ರಾಕೇಶ್

| Volume-16 | April, May, June 2026 | Rs. 25/- | Page - 56 | Issue-2 |
|---|---|---|---|---|
| ಸಂಪುಟ–16 | ಏಪ್ರಿಲ್, ಮೇ, ಜೂನ್ 2026 | ರೂ. 25/– | ಪುಟಗಳು – 56 | ಸಂಚಿಕೆ–2 |

## ನೊಳಂಬ ಸಂಸ್ಕೃತಿ ಅಧ್ಯಯನ ಪೀಠದ ಉದ್ಘಾಟನಾ ಸಮಾರಂಭ
## ತುಮಕೂರು ವಿಶ್ವವಿದ್ಯಾನಿಲಯ – 2026










ನೊಳಂಬ ಲಿಂಗಾಯತ ಸಂಘದ ನಿರ್ದೇಶಕರುಗಳು



ಚಿಕ್ಕಬಾಸೂರಿನಲ್ಲಿ ಶ್ರೀ ಗುರು ಸಿದ್ಧರಾಮೇಶ್ವರರ ದೇವಾಲಯ ನಿರ್ಮಾಣ ಕಾರ್ಯ ವೀಕ್ಷಣೆ ನಿರ್ದೇಶಕರುಗಳಿಂದ





"ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆಗೊರಚೆ ಚಿಪ್ಪು ಕಾಣಬಹುದು
ವಾರಿಧಿ ಮೈದೆಗೆದಡೆ
ರತ್ನ ಮುತ್ತುಗಳ ಕಾಣಬಹುದು
ಕೂಡಲ ಸಂಗನ ಶರಣರು ಮನದೆರೆದು
ಮಾತನಾಡಿದರೆ ಲಿಂಗವ ಕಾಣಬಹುದು." – ಬಸವಣ್ಣನವರು

ಸಂಪಾದಕರು :
ಡಾ. ರಾಕೇಶ್ ಬಿ.ಸಿ., ಎಂ.ಎ.,ಪಿಎಚ್.ಡಿ.,
ಸದಸ್ಯರು
ಕತ್ತಿಗೆ ಬಿ.ಚನ್ನಪ್ಪ, ಎಂ.ಎ., ಬಿ.ಇಡಿ.,
ಎಂ.ದಯಾನಂದಸ್ವಾಮಿ, ಎಂ.ಎ.,
(ಪತ್ರಿಕೋದ್ಯಮ ಡಿಪ್ಲೊಮ)
ಡಾ. ಟಿ.ಬಿ.ಬಸವರಾಜು, ಪಿಹೆಚ್.ಡಿ.,
ಎಸ್.ಎಂ.ಜಯದೇವ್, ಎಂ.ಎ.,
ಎಸ್.ಯೋಗಾನಂದ, ಎಂ.ಎ.ಬಿ.ಇಡಿ., ಕೆ.ಇ.ಎಸ್.
ಬಿ.ಆರ್.ಭುಜೇಂದ್ರ, ಎಂ.ಎ., ಬಿಪಿಇಡಿ., ಎಲ್.ಎಲ್.ಬಿ.,
ಆರ್.ರಂಗನಾಥ್, ಎಂ.ಎ.,
ಎ.ಬಿ.ಬಸವರಾಜು, ಬಿ.ಕಾಂ.,
ಎಂ.ಎಸ್.ಪ್ರಸಾದ್, ಎಂ.ಎ.,
ಸುಶೀಲಾ ಸದಾಶಿವಯ್ಯ, ಎಂ.ಎ.,
ಅಕ್ಷರ ವಿನ್ಯಾಸ :
ಸತೀಶ್ ಹೆಬ್ಬಾಕ
ಬೆನಕ ಗ್ರಾಫಿಕ್ಸ್, ತುಮಕೂರು.

**ಚಂದಾದರ**

| | | |
|---|---|---|
| ಬಿಡಿ ಸಂಚಿಕೆ | ರೂ. | 25/- |
| ಆಜೀವ ಸದಸ್ಯರು | ರೂ. | 2000/- |
| ಪೋಷಕರು | ರೂ. | 10,000/- |
| ಮಹಾಪೋಷಕರು | ರೂ. | 25,000/- |

("ನೊಳಂಬ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರು ಜವಾಬ್ದಾರರು
– ಸಂಪಾದಕರು)

Published From :
**B.K.CHANDRASHEKAR**
NOLAMBA ADHYAYANA KENDRA
NOLAMBA LINGAYATHA SANGHA (R)
# 1/A, 1st Cross, 3rd Stage, 4th Block,
Basaveshwara Nagar,
Bengaluru - 560 079. Karnataka.
Phone : 080-48148953
E-mail : nolambavani@gmail.com

Editor :
Dr. Rakesh B.C.
Cell : 9481910181

## ಒಳ ಪುಟಗಳಲ್ಲಿ........

01. ಸಂಪಾದಕೀಯ : ಡಾ. ಬಿ.ಸಿ.ರಾಕೇಶ್ 05
02. ಅಧ್ಯಕ್ಷರ ಆಶಯ ನುಡಿ : ಬಿ.ಕೆ. ಚಂದ್ರಶೇಖರ್, ಅಧ್ಯಕ್ಷರು. 06
03. ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು : ಕೆ.ಬಿ.ಶಿವಕುಮಾರ್ ಕಾರ್ಯದರ್ಶಿ 07
04. ಬಸವ ಸಂವಿಧಾನದಲ್ಲಿ ಕಾಯಕ ಮತ್ತು ಸಮೃದ್ಧತೆ : ಪ್ರೊ. ಟಿ.ಆರ್. ಚಂದ್ರಶೇಖರ 08
05. ಬಯಲರೋಗ ಮತ್ತು ಅಶ್ವಗಂಧ ಡಾ. ಬಿ.ಪಿ. ಮಂಜುನಾಥ 10
06. ಶ್ರೀ ಸಿದ್ಧರಾಮರ ಅಪ್ರಕಟಿತ ವಚನಗಳು : ಡಾ. ಎಸ್. ಗಂಗಾಂಬಿಕೆ 12
07. ನೊಳಂಬ ದೇವಾಲಯಗಳು : ಡಾ. ಸುಂಕಂ ಗೋವರ್ಧನ 13
08. ಆರೋಗ್ಯಾಮೃತ : ಶ್ರೀ ಶ್ರೀ ಬಸವಾನಂದಸ್ವಾಮಿಗಳು 16
09. ಸಿದ್ಧರಾಮರ ಕಾಯಕ ಮತ್ತು ಕೃಷಿ ಪ್ರಜ್ಞೆ : ಸುಶೀಲ ಸೋಮಶೇಖರ್ 19
10. ನೊಳಂಬ ರಾಣಿ ಚಾಮಲಾದೇವಿ : ಸುಶೀಲಾ ಸದಾಶಿವಯ್ಯ 21
11. ಅಣ್ಣನಿಗೆ ದೊರೆಯದ ಕೂಡಲ ಸಂಗಮದೇವ : ಡಾ. ಹಾಲಪ್ಪ ಹೆಚ್.ಕೆ. ಕುಂಟೆ 24
12. ಲಿಂಗಾಯತ ಮಠಗಳು : ಡಾ. ರಾಕೇಶ್ ಬಿ.ಸಿ 26
13. ಹುತಾತ್ಮ ಮಲ್ಲಪ್ಪ ಬೆಣಚಕ್ಕಿ : ಕತ್ತಿಗೆ ಚನ್ನಪ್ಪ 28
14. ಪರಿಸರ : ಆರ್. ರಾಜಪ್ಪ 29
15. ನೊಳಂಬರ ಕೆರೆಕಟ್ಟೆಗಳು : ಶಿವಕುಮಾರ್ ಎಸ್ 30
16. ಆರೋಗ್ಯಕ್ಕಾಗಿ ಆಯುರ್ವೇದ ಮಾಲಿಕೆ 6, 7 : ಅಭ್ಯಂಗದ ಸಂಪದ : ಡಾ|| ಶ್ರೀಪ್ರಸಾದ್ ಎಚ್.ಎಸ್. 33
17. ಇ-ಕೃಷಿ : ಭಾರತದ ವ್ಯವಸಾಯದಲ್ಲಿ ಡಿಜಿಟಲ್ ಕ್ರಾಂತಿ : ಡಾ. ಶಶಿಕುಮಾರ್ ಎಸ್. 35
18. ಶರಣರ ನುಡಿನಮನ : ಮಲ್ಲೇಶಪ್ಪ ಟಿ.ಎಸ್. 40
19. ಮರೆಯಾಗುತ್ತಿರುವ ಸಂಸ್ಕೃತಿ : ಆರ್. ರಂಗನಾಥ್ 41
20. ತುಮಕೂರು ವಿವಿಯಲ್ಲಿ ಲಿಂಗಾಯತ ನೊಳಂಬ ಸಂಸ್ಕೃತಿ ಅಧ್ಯಯನ ಪೀಠ ಉದ್ಘಾಟನೆ : ದಯಾನಂದಸ್ವಾಮಿ ಎಂ 42
21. ಉದ್ಯಮಿಯಾಗು ಉದ್ಯೋಗ ಕೊಡು : ನಾವಿನ್ಯತೆಯ ಉದ್ಯಮಶೀಲತಾ ಕಾರ್ಯಾಗಾರ : ಡಾ. ರಾಕೇಶ್ ಬಿ.ಸಿ 44
22. ನೊಳಂಬ ಲಿಂಗಾಯತ ಸಂಘ, ಬೆಂಗಳೂರು ಹಾಗೂ ಉಪಸಮಿತಿ, ಹಾವೇರಿ : ಸಿದ್ಧರಾಮಪ್ಪ ಅಜಗೊಂಡ್ರ 45
23. ಯುದ್ಧದ ಆಟ : ಶರಣ್ ಎಸ್.ಬಿ 47
24. ಸಮಾಜ ಸಂಘಟನೆ : ಎಂ.ಕೆ. ಸ್ವಾಮಿ 49
25. 108, 1008 ಮತ್ತು 1108 51
26. ನೊಣವಿನ ಕೆರೆ ಕಾಡುಸಿದ್ಧೇಶ್ವರ ಮಠ ಅಜ್ಜಯ್ಯ ಪಾಶುಪತ ಪರಂಪರೆ ತಿಪಟೂರು 52

**ಜಾಹಿರಾತು ವಿವರ**

| | |
|---|---|
| 1. ಕಪ್ಪು-ಬಿಳುಪು ಕಾಲು ಪುಟ | ರೂ. 2500/- |
| 2. ಕಪ್ಪು-ಬಿಳುಪು ಒಳ ಅರ್ಧಪುಟ | ರೂ. 4000/- |
| 3. ಒಳಪುಟ ಕಾಲುಪುಟ (ಮಲ್ಟಿ ಕಲರ್) | ರೂ. 4000/- |
| 4. ಕಪ್ಪು-ಬಿಳುಪು ಒಳ ಪೂರ್ಣಪುಟ | ರೂ. 6000/- |
| 5. ಒಳಪುಟ ಅರ್ಧಪುಟ (ಮಲ್ಟಿ ಕಲರ್) | ರೂ. 6000/- |
| 6. ಕಪ್ಪು-ಬಿಳುಪು ಸೆಂಟರ್ ಸ್ಪ್ರೆಡ್ | ರೂ. 10,000/- |
| 7. ಒಳಪುಟ ಪೂರ್ಣ ಪುಟ (ಮಲ್ಟಿ ಕಲರ್) | ರೂ. 12,000/- |
| 8. ರಕ್ಷಾಪುಟದ 2ನೇ/3ನೇ ಒಳಪುಟ (ಮಲ್ಟಿ ಕಲರ್) | ರೂ. 19,000/- |
| 9. ಸೆಂಟರ್ ಸ್ಪ್ರೆಡ್ ಪುಟ (ಮಲ್ಟಿ ಕಲರ್) | ರೂ. 20,000/-. |
| 10. ಹಿಂಬದಿ ರಕ್ಷಾ ಪುಟ (ಮಲ್ಟಿ ಕಲರ್) | ರೂ. 24,000/- |

# ನೊಳಂಬ ಲಿಂಗಾಯತ ಸಂಘದ ಕಾರ್ಯಚಟುವಟಿಕೆಗಳು










# ಸಂಪಾದಕೀಯ



ಎಂಥ ಹೆಮ್ಮರವೂ ಒಂದು ಕಾಲಕ್ಕೆ ಪುಟ್ಟಗಿಡವೇ ಆಗಿತ್ತು ಎಂಬುದನ್ನು ನಮ್ಮೆಲ್ಲಾ ಕೆಲಸಗಳ ಪ್ರಾರಂಭದಲ್ಲಿ ನೆನಪಿಸಿಕೊಳ್ಳೋಣ. ಪುಟ್ಟ ಪುಟ್ಟ ಸಾಧನೆ ಮಾಡುತ್ತಲೇ, ದೊಡ್ಡತನ ಪ್ರಾಪ್ತವಾಗುತ್ತದೆ. ಬದುಕಿನ ಅತ್ಯಂತ ಸಂಕಷ್ಟದ ಸಂದರ್ಭಗಳನ್ನು ಎದುರಿಸಿದಾಗಲೇ ನಮಗೆ ಇಷ್ಟೊಂದು ಶಕ್ತಿ ಇದೆ ಎನ್ನುವುದರ ಅರಿವಾಗುತ್ತದೆ.

ಸಂತೋಷವಾಗಿರುವುದು ತುಂಬ ಸರಳ. ಆದರೆ ಸರಳವಾಗಿರುವುದು ಮಾತ್ರ ತುಂಬಾ ಕಷ್ಟ. ಪ್ರಾಮಾಣಿಕವಾಗಿ ಬದುಕಿದವರಿಗೆ ಮನುಷ್ಯರು ಸಹಾಯ ಮಾಡಿದ್ದರೂ ನಾವು ನಂಬಿದ ದೇವರು ಸಹಾಯ ಮಡುತ್ತಾನೆ. ಶುದ್ಧಮನದಿಂದ ಬದುಕಿದವರಿಗೆ ಕ್ಷಣಕ್ಷಣ ನೋವು ತಿಂದರೂ ಕೊನೆಗೆ ಶಾಶ್ವತ ಸಂತೋಷವನ್ನು ಹೊಂದುತ್ತಾರೆ.

ನಾವೆಲ್ಲ ಸಮಾನ ಮನಸ್ಕರು, ಸಮಾಜದಲ್ಲಿ ಸೂಕ್ತ ಬದಲಾವಣೆ ಅಥವಾ ಇನ್ನಷ್ಟು ಕ್ಷೀಣವಾಗದಂತೆ ತಡೆಯಲು ಮತ್ತು ಪ್ರತಿ ನೊಳಂಬರಲ್ಲು ಸೂಕ್ತ ಬದಲಾವಣೆ ಅಥವಾ ಇನ್ನಷ್ಟು ಕ್ಷೀಣವಾಗದಂತೆ ತಡೆಯಲು ಮತ್ತು ಪ್ರತೀ ನೊಳಂಬರಲ್ಲಿ ಸಮಾಜದ ಮೇಲಿನ ಅಭಿಮಾನ, ಅಸ್ಮಿತೆ ಮತ್ತು ಜವಾಬ್ದಾರಿಯನ್ನು ಸ್ವಯಂಪ್ರೇರಣೆಯಿಂದ ನಿಸ್ವಾರ್ಥತೆಯಿಂದ ಸೇವಾ ಭಾವನೆಯಿಂದ ಮೂಡಿಸುವ ಉದ್ದೇಶದಿಂದ ಸಮಾಜ ಹಿಂದಿನ, ಪ್ರಚಲಿತ ಮತ್ತು ಮುಂದಿನ ಎಲ್ಲಾ ಒಳ್ಳೆಯ ಹಾಗು ಕೆಟ್ಟ ವಿಷಯಗಳಿಗೆ ನಾವೆಲ್ಲರೂ ಜವಾಬ್ದಾರರು. ಸವಾಜದ ಆಗು ಹೋಗುಗಳಿಂದ ಇಡೀ ಸವಾಜ ನಿರಂತರವಾಗಿ ದೂರವಾಗುತ್ತಿದ್ದರೆ, ಎಲ್ಲವನ್ನೂ ಕಳೆದುಕೊಳ್ಳುವುದು ನಿಶ್ಚಿತ. ನೊಳಂಬರ ಇತಿಹಾಸ ವೈಭವ ಕಲೆ ಮತ್ತು ವಾಸ್ತುಶಿಲ್ಪ ನಂದಿದಂಡ ಹೀಗೆಯೇ ಇಡೀ ರಾಜ್ಯಕ್ಕೆ ದೇಶಕ್ಕೆ ಇಡೀ ಸಮಾಜಕ್ಕೆ ದೇಶಕ್ಕೆ ಇಡೀ ಸಮಾಜಕ್ಕೆ ಅನೇಕ ನೊಳಂಬರ ಕಾಣಿಕೆಯನ್ನು ನೊಳಂಬ ಸಮಾಜಕ್ಕೆ ಪರಿಚಯಿಸುವ ಕೆಲಸವಾಗಬೇಕಾಗಿದೆ. ನಮ್ಮ ಇತಿಹಾಸ ನಮ್ಮ ರಾಜಮನೆತನ ನಮ್ಮ ಮಠಗಳು, ನಮ್ಮ ಪೀಠಗಳೂ, ನಮ್ಮ ಸಮಾಜದ ಇಂದಿನ ಪೀಳಿಗೆಗೆ ಕಿಂಚಿತ್ತು ಮಾಹಿತಿ ಇಲ್ಲ. ಮಾಹಿತಿ ನೀಡುವ ಪೋಷಕರಿಲ್ಲ. ಸಂಘ ಸಂಸ್ಥೆಗಳಲ್ಲಿ ಸಾಹಿತಿಗಳಲ್ಲಿ ಮದುವೆ ಮಾಡಿಸುವ ಅಯ್ಯರಿಲ್ಲ. ಆದರೆ ನಮ್ಮ ಮರ್ಯಾದೆಯನ್ನು ನಾವೇ ಕಳೆಯುವ ಇನ್ನೊಬ್ಬರನ್ನು ಪ್ರಶ್ನೆ ಮಾಡುವ, ಇನ್ನೊಬ್ಬರನ್ನು ತೇಜೋವಧೆ ಮಾಡುವ ನಮ್ಮವರನ್ನೇ ಕಾಲು ಎಳೆಯಲು ನಮ್ಮವರ ಏಳಿಗೆಯನ್ನು ಸಹಿಸಿಕೊಳ್ಳದ ಇನ್ನೊಬ್ಬರ ಬಾಲ ಬಡಿಯುವ ಸಮಾಜವನ್ನು ನಾವುಗಳು ಬೆಳೆಸುತ್ತಿದ್ದೇವೆ.

ರಾಜ್ಯದಲ್ಲಿ ಮತ್ತು ಬೇರೆ ಕಡೆ ವಾಸವಿರುವ ನೊಳಂಬ ಬಂಧುಗಳ ಸಕಲ ಕಾರ್ಯಕ್ರಮಗಳು, ಎಲ್ಲಾ ಮಠಗಳ ಪರಿಚಯ ನೊಳಂಬರ ಸಾಮಾಜಿಕ, ರಾಜಕೀಯ ನಾಯಕತ್ವ ವಿವಿಧ ಸಂಘ ಸಂಸ್ಥೆಗಳು ಮತ್ತು ಸಂಘಟನೆಗಳು ಸಮಾಜ ಬಂಧುಗಳ ಧ್ವನಿ ರಾಜ್ಯವ್ಯಾಪಿ ದೇಶಮಟ್ಟದಲ್ಲಿ ಪ್ರಸರಿಸುತ್ತಿದೆ. ಮಾರ್ಗದರ್ಶನ ಸಲಹೆ ನೀಡಲಾಗುತ್ತದೆ. ಇದಕ್ಕೆ ಪೂರಕವಾಗಿ ನೊಳಂಬ ಲಿಂಗಾಯತ ಸಂಘವು ನಾಡಿನಾದ್ಯಂತ ಹೊಸ


## ನಿನಗೆ ಕೇಡಿಲ್ಲದಂತೆ

ಮನ್ವಂತರಕ್ಕೆ ಸಾಕ್ಷಿಯಾಗಿದೆ ಅಲ್ಲದೆ ಅಂತರ್ಜಾಲದ ಮೂಲಕ ಸಮಾಜದ ಚಟುವಟಿಕೆಗಳು ನಿರಂತರವಾಗಿ ನಡೆಯುವುದನ್ನು ನೋಡಬಹುದು. ನೊಳಂಬ ಲಿಂಗಾಯತ ಸಂಘವು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಹೊಸ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಲ್ಲಿ ಸ್ಥಳಾವಕಾಶ, ಚಿಕ್ಕಬಾಸೂರಿನಲ್ಲಿರುವ ಶ್ರೀ ಗುರು ಸಿದ್ಧರಾಮೇಶ್ವರ ದೇವಾಲಯ ಅಲ್ಲದೆ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠ, ನೊಳಂಬವಾಣಿ ಮೂಲಕ ಸಮಾಜದ ಎಲ್ಲ ಬೆಳವಣಿಗೆಗಳನ್ನು ನಿರಂತರ ಪ್ರಸಾರ ಮಾಡುತ್ತಾ ಬಂದಿದೆ. ಮತ್ತು ಮಾರ್ಗದರ್ಶನ ನೀಡುತ್ತಿದೆ.

ನಾವುಗಳು ಮುಂದಿನ ಪೀಳಿಗೆಯನ್ನು ಬಲಿಷ್ಠ ಮತ್ತು ಸದೃಢಗೊಳಿಸಲು ಅವರಿಗೆ ಆಧುನಿಕ ಶಿಕ್ಷಣವನ್ನು ನೀಡಲು AI ತಂತ್ರಜ್ಞಾನ ಆಧಾರಿತ ಶಿಕ್ಷಣದ ಮಹತ್ವವನ್ನು ಕಲಿಸುವ ಜವಾಬ್ದಾರಿ ನಮ್ಮಗಳ ಮೇಲಿವೆ. ತಂತ್ರಜ್ಞಾನ ಆಧಾರಿತ ಶಿಕ್ಷಣದ ಜೊತೆಗೆ ಬಸವ ಪ್ರಣೀತ ಲಿಂಗಾಯತ ಧರ್ಮದ ಸರಳ ಆಚರಣೆ, ಜೀವನ ಶೈಲಿ ಇತಿಮಿತಿ ಆಹಾರ ಪದ್ಧತಿ, ಸಾಮಾಜಿಕ ಜವಾಬ್ದಾರಿ ಸಂಬಂಧಗಳ ಬೆಳವಣಿಗೆ ಮತ್ತು ಗೌರವ ಕೊಡುವುದನ್ನು ನಾವು ಮಕ್ಕಳಿಗೆ ಕಲಿಸುವತ್ತ ಗಮನ ಹರಿಸೋಣ ಎಂದು. ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನಾವುಗಳು ಮುನ್ನಡೆಯೋಣ.

**ಡಾ. ರಾಕೇಶ್ ಬಿ.ಸಿ., ಸಂಪಾದಕರು**

# ಅಧ್ಯಕ್ಷರ ಆಶಯ ನುಡಿ



ಆತ್ಮೀಯರೇ.

**ನಕ್ಕಷ್ಟು ದಿನ ನಿನದು. ಅತ್ತ ದಿನ ನಿನದಲ್ಲ.**
**ನೀ ನಗುವ ಹೂವಾಗು ಜಗದ ವನದಲ್ಲಿ ....**
**ಹೂ ಬಿಡದ ಲತೆಗಾರು, ನೀರೆರೆವರಾರಿಲ್ಲಿ.**
**ನಗುತಲಿರು ಜನ ನಗಲಿ**
**ನಗುತಲಿರು ಮನ ನಗಲಿ ಮುದ್ದು ರಾಮ...**

ಎಂಬ ಸಾಲುಗಳು ಮತ್ತೆ ಮತ್ತೆ ಸ್ಮರಿಸಿಕೊಳ್ಳುವ ಹೊತ್ತಿನಲ್ಲಿ ನಾವಿದ್ದೇವೆ. ಎಲ್ಲ ಸಮಾಜದ ಬಂಧುಗಳೇ ಎಲ್ಲರೂ ಕ್ಷೇಮವೆಂದು ಭಾವಿಸುತ್ತಾ ಮುಂಬರುವ ದಿನಗಳಲ್ಲಿ ಈ ಬಾರಿ ರಾಜ್ಯ ಮತ್ತು ದೇಶದಲ್ಲಿ ಮುಂಗಾರು ಮಳೆಯ ಅಭಾವವಿರುದಾಗಿ ಹವಮಾನ ಇಲಾಖೆ ಮುನ್ಸೂಚಿಸಿರುವುದರಿಂದ ರಾಜ್ಯ ರಾಜ್ಯಗಳ ನಡುವೆ ನೀರಿಗಾಗಿ ಹೋರಾಟಗಳು, ಕ್ಷಾಮ, ಆಹಾರ ಉತ್ಪಾದನೆಗಳು ಕಡಿಮೆಯಾಗಿ ಇವೆಲ್ಲವೂ ಸಹ ಜನಜೀವನದ ಮೇಲೆ ಪರಿಣಾಮ ಬೀರುವುದರಿಂದ ದೇಶದ ಆರ್ಥಿಕ ಪರಿಸ್ಥಿತಿಯು ಸಹ ವ್ಯತ್ಯಾಸವಾಗುವ ಸಂಭವಗಳು ಹೆಚ್ಚಾಗಿರುತ್ತದೆ. ಆದುದರಿಂದ ನಾವಲ್ಲರು ಜಾಗರೂಕರಾಗಿ ನೀರನ್ನ ಎಲ್ಲಾ ಕ್ಷೇತ್ರಗಳಲ್ಲಿಯೂ ಮಿತವಾಗಿ ಉಪಯೋಗಿಸುತ್ತಾ ಸದ್ಬಳಕೆ ಮಾಡಿಕೊಳ್ಳುವದು ನಮ್ಮೆಲ್ಲರ ಜವಬ್ದಾರಿಯಾಗಿರುತ್ತದೆ.

ನಮ್ಮ ಸಂಘದ ನಿಗದಿತ ಕಾರ್ಯಕಾರಿ ಸಮಿತಿಯ ಅವಧಿಯು ಮುಗಿಯುತ್ತಾ ಬಂದಿದೆ. 2021–22ರ ಅವಧಿಯು ಕರೋನ ರೋಗಕ್ಕೆ ಒಳಪಟ್ಟ ಪ್ರಯುಕ್ತ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆಯಲು ಸಾಧ್ಯವಾಗಿರುವುದಿಲ್ಲ. ತದಾದ ವರ್ಷಗಳಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ ವಾಣಿಜ್ಯ ಸಂಕೀರ್ಣವನ್ನು ಸುಮಾರು 2,75,00,000/– ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿ ಮಾಹೆಯಾನ 6,85,000/–ರೂ ಗಳು ಬಾಡಿಗೆ ಬರುತ್ತಿರುವುದರಿಂದ ಸಂಘದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಲು ಸಹಾಯಕವಾಗಿರುತ್ತದೆ. ಅಲ್ಲದೆ ಬೆಂಗಳೂರಿನ ಮಹಾಲಕ್ಷ್ಮಿಪುರಂನಲ್ಲಿರುವ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದ ಪಕ್ಕದಲ್ಲಿರುವ ಸುಮಾರು 520 ಚದುರ ಮೀಟರ್ ನಿವೇಶನವನ್ನು ಬಿಡಿಎ ನಿಂದ ಪಡೆದು ಅದಕ್ಕೆ 67 ಲಕ್ಷ ರೂಗಳನ್ನು ಪಾವತಿ ಮಾಡಿ ಸ್ವಾಧೀನವನ್ನು ಪಡೆಯಲಾಗಿರುತ್ತದೆ.

ತಿಪಟೂರಿನಲ್ಲಿ ಸಂಘವು ಪ್ರಾರಂಭವಾಗಿ ಸಂಘದ ಹೆಸರಿಗೆ ಯಾವುದೇ ನಿವೇಶನವಿಲ್ಲದ ಕೊರತೆಯನ್ನು ಈಗ ಸರ್ಕಾರದ ವತಿಯಿಂದ 1 ಎಕರೆ ಜಮೀನು ಮಂಜೂರು ಮಾಡಿಕೊಳ್ಳುವ ಮೂಲಕ ನಿವಾರಿಸಿದೆ. ನಂತರ ಚಿಕ್ಕಮಗಳೂರು ಜಿಲ್ಲೆ ಕಡೂರಿನಲ್ಲಿ ಸುಮಾರು 4 ರಿಂದ 5 ಕೋಟಿ ಹಣ ಖರ್ಚು ಮಾಡಿ ಒಂದು ಸಮುದಾಯ ಭವನವನ್ನು ನಿರ್ಮಾಣ ಮಾಡುತ್ತಿದ್ದು ಕೆಲವೇ ತಿಂಗಳ ಸಮಯದಲ್ಲಿ ಲೋಕಾರ್ಪಣೆ ಮಾಡಲಾಗು ವುದು ಅದಕ್ಕೆ ಸಂಘದ ವತಿಯಿಂದ 2 ಕೋಟಿ ರೂಗ ಳನ್ನು ನೀಡಲಾಗಿರುತ್ತದೆ. ಬಹಳ ದಿನಗಳಿಂದ ಸ್ಥಗಿತವಾಗಿದ್ದ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಉದ್ಘಾಟನೆ ಮಾಡಲಾಗಿದ್ದು ಸಂಘದ ವತಿಯಿಂದ 10 ಲಕ್ಷ ರೂಗಳನ್ನು ಹಾಗು ಸಮಾಜ ಬಾಂಧವರಿಂದ, ಮಠಾಧೀಶರಿಂದ ಹಾಗು ಸಂಘ–ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆದು 26 ಲಕ್ಷ ರೂಗಳನ್ನು ವಿಶ್ವವಿದ್ಯಾನಿಲಯದಲ್ಲಿ ಖಾಯಂ ಠೇವಣಿ ಇಡಲಾಗಿರುತ್ತದೆ. ಇದಲ್ಲದೆ ಮೈಸೂರಿನ ಬಾಲಕರ ವಿದ್ಯಾರ್ಥಿನಿಲಯದ 3ನೇ ಮಹಡಿಯನ್ನು ಸುಮಾರು 1 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದು, ಮೈಸೂರಿಗೆ ಬರುವಂತ ವಿದ್ಯಾರ್ಥಿಗಳಿಗೆ ಅನುಕೂಲವನ್ನು ಕಲ್ಪಿಸಲಾಗಿರುತ್ತದೆ. ತುರುವೇಕೆರೆಯಲ್ಲಿ ಸಮುದಾಯ ಭವನಕ್ಕಾಗಿ ಸಂಘದ ವತಿಯಿಂದ 40 ಲಕ್ಷ ರೂಗಳನ್ನು ನೀಡಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿರುತ್ತದೆ. ಇದರ ಜೊತೆಗೆ ತಿಪಟೂರು, ಬೆಂಗಳೂರು ಹಾಗು ಹೊಸದುರ್ಗ ತಾಲ್ಲೂಕಿನ ಹೊಳಲ್ಕೆರೆಗಳಲ್ಲಿ ಶ್ರೀ ಗುರು ಸಿದ್ಧರಾಮೇಶ್ವರ ಜಯಂತಿಯನ್ನು ಆಚರಿಸಿ ಸಮಾಜ ಬಾಂಧವರ ಮೆಚ್ಚುಗೆಗೆ ಸಂಘವು ಪಾತ್ರವಾಗಿದೆ. ನಮ್ಮ ಸಂಸ್ಥೆಗೆ ಕೆಲವೇ ದಿನಗಳಲ್ಲಿ ಚುನಾವಣೆ ನಡೆಯಲಿದ್ದು ಹೊಸ ಕಾರ್ಯಕಾರಿ ಸಮಿತಿಗೆ ಸಮಾಜ ಮುಖಿ ಕೆಲಸ ಮಾಡುವರನ್ನು ಸಮಾಜ ಬಾಂಧವರು ಚುನಾಯಿಸಬೇಕಾಗಿರುತ್ತದೆ. ಮುಂದೆ ಚುನಾಯಿತರಾಗಿ ಬರುವ ಕಾರ್ಯಕಾರಿ ಸಮಿತಿಯು ಇನ್ನು ಹೆಚ್ಚಿನಮಟ್ಟದ ಅಭಿವೃದ್ಧಿ ಕಾರ್ಯಗಳನ್ನು ಮಾಡಲೆಂದು ಆಶಿಸುತ್ತೇನೆ. ಈ ಕಾರ್ಯಕಾರಿ ಸಂಘದ ಅಭಿವೃದ್ಧಿ ಕೆಲಸಗಳಿಗೆ ಸಹಕರಿಸಿದ ನಮ್ಮ ಸಮಾಜದ ರಾಜಕೀಯ ಮುಖಂಡರಿಗೂ, ಅಧಿಕಾರ ವರ್ಗದವರಿಗೂ, ದಾನಿಗಳಿಗೂ, ಸಮಾಜ ಬಾಂಧವರಿಗೂ ಸಂಘವು ಅಭಾರಿಯಾಗಿರುತ್ತದೆ ಎಂದು ತಿಳಿಸುತ್ತಾ ತಮ್ಮೆಲ್ಲರಿಗೂ ವಂದನೆಗಳು.

**ಶ್ರೀ ಬಿ.ಕೆ.ಚಂದ್ರಶೇಖರ್**, ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

# ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1. ದಿ20.04.2026ರಂದು ಸಾಂಸ್ಕೃತಿಕ ನಾಯಕ ಭಕ್ತಿಭಂಡಾರಿ ಗುರು ಬಸವೇಶ್ವರ ಜಯಂತಿಯನ್ನು ನೊಳಂಬ ಲಿಂಗಾಯತ ಸಂಘ (ರಿ) ಅಧ್ಯಕ್ಷರ ಸಮ್ಮುಖದಲ್ಲಿ ಸಮಾಜದ ಗಣ್ಯರೆಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸಲಾಯಿತು.

2. ದಿ. 14.05.2026ರಂದು ನೊಳಂಬರ ಸಂಸ್ಕೃತಿ, ಕಲೆ, ಕೃಷಿಗಳ ಬಗ್ಗೆ ಮುಂದಿನ ಪೀಳಿಗೆಗೆ ಸಂಶೋಧನೆ ಮಾಡಲು ತುಮಕೂರು ವಿಶ್ವವಿದ್ಯಾನಿಲಯದಲ್ಲಿ **"ನೊಳಂಬ ಸಂಸ್ಕೃತಿ ಅಧ್ಯಯನ ಪೀಠ"**ವನ್ನು ಸ್ಥಾಪಿಸಲಾಯಿತು. ಸಮಾಜದ ಮುಖಂಡರುಗಳಾದ ತಿಪಟೂರು ಶಾಸಕರಾದ ಕೆ.ಷಡಕ್ಷರಿ, ಮಾಜಿ ಮಂತ್ರಿಗಳಾದ ಜೆ.ಸಿ. ಮಾಧುಸ್ವಾಮಿ, ತುಮಕೂರು ನಗರದ ಶಾಸಕರಾದ ಜ್ಯೋತಿ ಗಣೇಶ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷರಾದ ಬಿ.ಕೆ. ಚಂದ್ರಶೇಖರ್, ನಿಕಟಪೂರ್ವ ಅಧ್ಯಕ್ಷರಾದ ಎಸ್.ಆರ್. ಪಾಟೀಲ್, ಕಾರ್ಯದರ್ಶಿ ಕೆ.ಬಿ.ಶಶಿಧರ್, ಖಜಾಂಚಿ ಬಿ.ಕುಬೇರಪ್ಪ, ಟಿ.ಎಸ್.ಸುನೀಲ್‌ಪ್ರಸಾದ, ತುಮಕೂರು ವಿ.ವಿ.ನಿಕಟ ಪೂರ್ವ ಸಿಂಡಿಕೇಟ್ ಸದಸ್ಯರು, ಡಾ. ಡಿ.ಎನ್.ಯೋಗೀಶ್ವರಪ್ಪ ಗೋಷ್ಠಿಗಳಲ್ಲಿ ಸಂಶೋಧಕರಾದ ಡಾ. ಪವನ್‌ಕುಮಾರ್ ಮೌರ್ಯ ಹಾಗೂ ಸುಕಂಗೋವರ್ಧನ್, ಎಲ್.ಪಿ. ರಾಜು, ಡಾ. ಶಿವಕುಮಾರ್ ಸಿ.ಜೆ., ಸಾಗರನಹಳ್ಳಿ ನಟರಾಜ್ ಮತ್ತು ತುಮಕೂರು ಜಿಲ್ಲೆಯ ಸಂಘದ ನಿರ್ದೇಶಕರಾದ ಐ.ಎನ್.ಗಂಗಾಧರಯ್ಯ, ಹೆಚ್.ಎಸ್. ಕಿರಣ್‌ಕುಮಾರ್, ಎಂ. ದೇವರಾಜ್, ಎಂ.ದಯಾನಂದ ಸ್ವಾಮಿ, ಎಂ.ಆರ್. ಸಂಗಮೇಶ್, ಬಿ.ಎಸ್. ರೇಣುಕಾರಾಧ್ಯ, ಜಿ.ಪಿ. ಮರಿಸ್ವಾಮಿ ಭಾಗವಹಿಸಿದ್ದರು. ಪ್ರೊ. ಎಂ. ಕೊಟ್ರೇಶ್, ಹಿರಿಯ ಪ್ರಾಧ್ಯಾಪಕರು ಸಮಾರೋಪ ನುಡಿ ನುಡಿದರು. ಸಮಾರಂಭದಲ್ಲಿ ಸಂಶೋಧನ ವಿದ್ಯಾರ್ಥಿಗಳು ಹಾಗೂ ಸಮಾಜ ಬಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮವು ಡಾ. ಶ್ರೀ ಶ್ರೀ ಶ್ರೀ ಶಿವ ಕುಮಾರ ಮಾಹಾಸ್ವಾಮೀಜಿ ಸಭಾಂಗಣ, ತುಮಕೂರು ವಿ.ವಿ.ಯಲ್ಲಿ ಜರುಗಿತು. ದಾಸೋಹ ವ್ಯವಸ್ಥೆಯನ್ನು ಸಂಘದ ತುಮಕೂರು ಜಿಲ್ಲೆ ನಿರ್ದೇಶಕರು ಏರ್ಪಾಡು ಮಾಡಿದ್ದರು.

3. ದಿ.31.05.2026ರಂದು ಅಜ್ಜಂಪುರ ಉಪಸಮಿತಿಯಲ್ಲಿ ಸಂಘದ ಸಧ್ಯಕ್ಷರಾದ ಬಿ.ಕೆ. ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ 2025-26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತೀಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿತ್ತು. ಚಿಕ್ಕಮಗಳೂರು ಜಿಲ್ಲೆ ಸಂಸದರಾದ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಶಾಸಕರಾದ ಎಸ್.ಎಂ. ನಾಗರಾಜು ರವರು, ಉಪನ್ಯಾಸಕರಾಗಿ ಹೆಚ್.ಎನ್. ಚಂದ್ರಶೇಖರ್ ಹಾಗೂ ಸಂಘದ ಕಾರ್ಯದರ್ಶಿಗಳಾದ ಕೆ.ಬಿ. ಶಶಿಧರ್, ಖಜಾಂಚಿಗಳಾದ ಬಿ. ಕುಬೇರಪ್ಪ ಹಾಗೂ ನಿರ್ದೇಶಕರುಗಳು, ಉಪಸಮಿತಿ ಸದಸ್ಯರುಗಳು ಭಾಗವಹಿಸಿ ಮಕ್ಕಳಿಗೆ ಪುರಸ್ಕಾರ ನೀಡಿ ಆಶೀರ್ವದಿಸಿದರು. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

4. ದಿ.07.06.2025ರ ಭಾನುವಾರ ಹಾವೇರಿ ಉಪಸಮಿತಿಯಲ್ಲಿ ಶ್ರೀಶ್ರೀಶ್ರೀ 1108 ಜಗದ್ಗುರು ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ, ಸಂಘದ ಅಧ್ಯಕ್ಷರಾದ ಬಿ.ಕೆ. ಚಂದ್ರ ಶೇಖರ್‌ರವರ ಅಧ್ಯಕ್ಷತೆಯಲ್ಲಿ 2025-26ನೇ ಸಾಲಿನಲ್ಲಿ ಹಾವೇರಿ. ಕಾರವಾರ, ದಾವಣಗೆರೆ, ಧಾರವಾಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಏರ್ಪಡಿಸಿ ಸನ್ಮಾನಿಸಲಾಯಿತು. ಉದ್ಘಾಟನೆಯನ್ನು ದೇವರಾಜ್ ಎಸ್., ಪ್ರಾಸ್ತವಿಕ ನುಡಿ ಕೆ.ಬಿ.ಶಶಿಧರ್, ಪ್ರಶಸ್ತಿ ವಿತರಣೆಯನ್ನು ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಎಸ್.ಆರ್.ಪಾಟೀಲ್ ನೆರವೇರಿಸಿದರು. ಅತಿಥಿಗಳಾಗಿ ಸುಪ್ರೀಂ ಕೋರ್ಟ್ ವಕೀಲರಾದ ಎಸ್. ಸಂದೀಪ್‌ಪಾಟೀಲ್ ಹಾಗೂ ಸಂಘದ ಪದಾಧಿಕಾರಿಗಳು, ಉಪಸಮಿತಿ ಸದಸ್ಯರು ಭಾಗವಹಿಸಿದ್ದರು. ಸಮಾಜದ ಗಣ್ಯರುಗಳು ಭಾಗವಹಿಸಿದ್ದರು. ಪೂಜ್ಯರು ಆಶೀರ್ವಚನ ನೀಡಿದರು.

5. ಕಡೂರಿನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಸಮುದಾಯ ಭವನದಲ್ಲಿ ಟೈಲ್ಸ್ ಹಾಕುವುದರೊಂದಿಗೆ ನಿರ್ಮಾಣಕಾರ್ಯವು ತ್ವರಿತಗತಿಯಲ್ಲಿ ನಡೆಯುತ್ತಿದೆ.

6.ಸಂಘದ ಅಧ್ಯಕ್ಷರಾದ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಸಲು ಮಾಸಿಕ, ದ್ವೈಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ
ಸಂಘ (ರಿ) ಬೆಂಗಳೂರು.

# ಬಸವ ಸಂವಿಧಾನದಲ್ಲಿ ಕಾಯಕ ಮತ್ತು ಸಮೃದ್ಧತೆ

ಈಗಾಗಲೆ ಪ್ರತೀತವಾಗಿರುವಂತೆ ಬಸವ ಪ್ರಣಾಳಿಕೆಯಲ್ಲಿ ಕಾಯಕಕ್ಕೆ ಪ್ರಾಥಮಿಕ ಪ್ರಥಮ ಸ್ಥಾನವಿದೆ. ಕಾಯಕಕ್ಕೆ ಇಲ್ಲಿ ದುಡಿಮೆ ಎಂಬ ಅರ್ಥವಿದ್ದರೂ ಅದು ಅದನ್ನು ಮೀರಿದ ಒಂದು ಪರಿಭಾವನೆಯಾಗಿದೆ. ಕಾಯಕವನ್ನು ಆಧ್ಯಾತ್ಮದ ನೆಲೆಗೆ ಒಯ್ದ ಕೀರ್ತಿ ಬಸವ ಸಂವಿಧಾನಕ್ಕೆ ಸಲ್ಲಬೇಕು. ವಚನ ಪ್ರಣಾಳಿಕೆಯಲ್ಲಿ ಕಾಯಕದಿಂದ ಯಾರಿಗೂ ಬಿಡುಗಡೆಯಿಲ್ಲ. ಆಯ್ದಕ್ಕಿ ಮಾರಯ್ಯನವರು ಲೋಕಪ್ರಸಿದ್ಧ **"ಕಾಯಕವೆ ಕೈಲಾಸ"** ಎಂಬ ಸೂತ್ರವನ್ನು ಪ್ರತಿಪಾದಿಸಿದ್ದಲ್ಲದೆ ಅವರು ಗುರುಲಿಂಗಜಂಗಮಗಳಿಗೂ ಮೊದಲು ಕಾಯಕ ಎನ್ನುತ್ತಾರೆ.

**ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು**
**ಲಿಂಗ ಪೂಜೆಯಾದಡೂ ಮರೆಯಬೇಕು**
**ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು**
**ಕಾಯಕವೇ ಕೈಲಾಸವಾದ ಕಾರಣ**
**ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು**

ಗುರುಲಿಂಗಜಂಗಮಗಳು **"ಕಾಯಕದೊಳಗೆ"** ಇರುತ್ತವೆಯೇ ವಿನಾ ಅವಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಇದು ಇಲ್ಲಿನ ಸೂತ್ರ. ಕಾಯಕವನ್ನು ಬಿಟ್ಟು ಅವುಗಳಿಗೆ ಯಾವ ಅರ್ಥವೂ ಇಲ್ಲ, ಅಸ್ತಿತ್ವವೂ ಇಲ್ಲ.  ಕಾಯಕ ಮೊದಲು, ನಂತರ ಗುರುಲಿಂಗಜಂಗಮ. ಅಮರೇಶ್ವರಲಿಂಗವಾದರೂ ಸಹ ಕಾಯಕದಿಂದ ಅದರ ಅಸ್ತಿತ್ವ. ನುಲಿಯ ಚಂದಯ್ಯನವರು ಇನ್ನೂ ಮುಂದೆ ಹೋಗಿ ಗುರುಲಿಂಗ ಜಂಗಮಗಳಿಗೂ ಕಾಯಕದಿಂದ ವಿನಾಯಿತಿಯಿಲ್ಲ ಎನ್ನುತ್ತಾರೆ. ಗುರು ಲಿಂಗ ಜಂಗಮಗಳು 'ಚರಸೇವೆ'ಯ ಮಾಡಬೇಕು ಎನ್ನುತ್ತಾರೆ ಚಂದಯ್ಯನವರು. ಕಾಯಕದಿಂದಲೇ ಗುರುವಿಗೆ ಜೀವನ್ಮುಕ್ತಿ ದೊರೆಯುತ್ತದೆ.

**ಗುರುವಾದಡೂ ಕಾಯಕದಿಂದವೇ ಜೀವನ್ಮುಕ್ತಿ**
**ಲಿಂಗವಾದಡೂ ಕಾಯಕದಿಂದವೇ ವೇಷದ ಪಾಶ ಹರಿವುದು**
**ಗುರುವಾದಡೂ ಚರಸೇವೆಯ ಮಾಡಬೇಕು**
**ಲಿಂಗವಾದಡೂ ಚರಸೇವೆಯ ಮಾಡಬೇಕು**
**ಜಂಗಮವಾದಡೂ ಚರಸೇವೆಯ ಮಾಡಬೇಕು**
**ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು**

ಚಂದಯ್ಯನವರ ಪ್ರಕಾರ ಕಾಯಕವೇ ಆಧ್ಯಾತ್ಮ. ಚಂದೇಶ್ವರ ಲಿಂಗವನ್ನು ಅರಿವುದಕ್ಕೆ ಕಾಯಕವೇ ಸಾಧನ. ಅಕ್ಕಮ್ಮ ಎನ್ನುವ ವಚನಕಾರ್ತಿಯು ಕಾಯಕದ ನಂತರವೇ ಗುರುದರ್ಶನ, ಜಂಗಮಸೇವೆ ಎನ್ನುತ್ತಾಳೆ.


**ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ**
**ಕೃಷಿ ತೀರಿದ ಮತ್ತೆ ಗುರುದರ್ಶನ, ಲಿಂಗಪೂಜೆ,**
**ಜಂಗಮಸೇವೆ**
**ಶಿವಭಕ್ತರ ಸುಖಸಂಭಾಷಣೆ ಶರಣರ ಸಂಗ**
**ಈ ನೇಮವನರಿವುತ್ತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ**
**ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಆತನೇ ಚೇತನಭಾವ**

ಈಕೆಯ ಪ್ರಕಾರ ಗುರುಲಿಂಗಜಂಗಮಗಳಿಗಿಂತ ಮೊದಲು ಕಾಯಕ(ಕೃಷಿ). ಇದು ನೇಮ, ಇದು ಸೂತ್ರ. ಹೀಗೆ ವಚನ ಸಂವಿಧಾನದಲ್ಲಿ ಕಾಯಕಕ್ಕೆ ಮೊದಲ–ಪ್ರಾಥಮಿಕ ಸ್ಥಾನ ನೀಡಲಾಗಿದೆ.  ಕಾಯಕ ತೀರಿದ ಮೇಲೆಯೇ ಗುರುಲಿಂಗಜಂಗಮ.

**ಅಂಕಿತಗಳಲ್ಲಿ ಕಾಯಕಕ್ಕೆ ಸ್ಥಾನ :** ಕಾಯಕಕ್ಕೆ ಬಸವ ಸಂವಿಧಾನದಲ್ಲಿ ಎಷ್ಟು ಮಹತ್ವ ನೀಡಲಾಗಿತ್ತು ಎನ್ನುವುದಕ್ಕೆ ಶಿವಶರಣರ ಅಂಕಿತಗಳ ಜೊತೆಯಲ್ಲಿ ಕಾಯಕವನ್ನು ಪೂರ್ವಪದವಾಗಿ ಜೋಡಿಸಿರುವುದು ಸಾಕ್ಷಿಯಾಗಿದೆ. ಅಂಕಿತಗಳಲ್ಲಿ ತಮ್ಮ ದೈವಕ್ಕಿಂತ ಮೊದಲು ಕಾಯಕವನ್ನು ಇಡಲಾಗಿದೆ. ಮಹಿಳಾ ವಚನಕಾರ್ತಿಯರಲ್ಲಿಯೂ ಇದನ್ನು ಕಾಣಬಹುದು. ಉದಾ: ಆಯ್ದಕ್ಕಿ ಲಕ್ಕಮ್ಮ, ಕದಿರ ಕಾಯಕದ ಕಾಳವ್ವೆ, ಕನ್ನಡಿ ಕಾಯಕದ ರೇಮಮ್ಮ, ಕೊಟ್ಟಣದ ಸೋಮಮ್ಮ, ಕಾಲಕಣ್ಣಿಯ ಕಾಮಮ್ಮ ಇತ್ಯಾದಿ. ಲಕ್ಕಮ್ಮನ ಕಾಯಕ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆರಿಸಿಕೊಳ್ಳುವುದು. ಕಾಳವ್ವೆಯ ಕಾಯಕ ನೇಯ್ಗೆ.

ಇದೇ ರೀತಿಯಲ್ಲಿ ಶರಣರ ಅಂಕಿತಗಳ ಪೂರ್ವಪದವಾಗಿ ಕಾಯಕದ ಹೆಸರುಗಳು ಇರುವುದನ್ನು ಕಾಣಬಹುದು. ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ, ಆಯ್ದಕ್ಕಿ ಮಾರಯ್ಯ, ಅಗ್ಘವಣಿಯ ಹಂಪಯ್ಯ, ಒಕ್ಕಲಿಗ ಮುದ್ದಣ್ಣ, ಕನ್ನದ ಮಾರಿತಂದೆ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಲದ್ದೆಯ ಸೋಮಯ್ಯ, ಮೇದರ ಕೇತಯ್ಯ ಇತ್ಯಾದಿ.

ಒಕ್ಕಲಿಗ ಮುದ್ದಣ್ಣನವರು ಹಾರುವರ, ಕ್ಷತ್ರಿಯರ, ವೈಶ್ಯರ ಕಾಯಕಗಳನ್ನು ಕೀಳಾಗಿಸಿ, ಅಂದರೆ ಅವು ನಮಗೆ ಸಂಬಂಧಿಸಿದವಲ್ಲ ಎಂದು, ತನ್ನನ್ನು ತಾನು **"ಉಳುವ ಒಕ್ಕಲ ಮಗ"** ಎಂದು ಕರೆದುಕೊಳ್ಳುತ್ತಾರೆ. ಚಾತುರ್ವರ್ಣ ವ್ಯವಸ್ಥೆಯಲ್ಲಿನ ವರ್ಣ ವಿಭಜನೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಹಾರುವರ, ಕ್ಷತ್ರಿಯರ ಮತ್ತು ವೈಶ್ಯರ ವೃತ್ತಿಗಳಿಗಿಂತ **'ಉಳುವ ಒಕ್ಕಲುತನ'** ಹೆಚ್ಚಿನದಾಗಿದೆ ಎಂಬುದನ್ನು ತಮ್ಮ ವಚನದಲ್ಲಿ ಪ್ರತಿಪಾದಿಸಿದ್ದಾರೆ.



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆ ಮೇನ್,
4ನೆಯ ಕ್ರಾಸ್, ಬೇಗೂರು ಮುಖ್ಯರಸ್ತೆ.
ಹೊಂಗಸಂದ್ರ–560 068,
ಬೆಂಗಳೂರು.

**ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ**
**ಇರಿದು ಮೆರೆಯುವುದಕ್ಕೆ ಕ್ಷತ್ರಿಯನಲ್ಲ ವ್ಯವಹರಿಸುವದಕ್ಕೆ ವೈಶ್ಯನಲ್ಲ**
**ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಕೊಳ್ಳಯ್ಯಾ**
**ಕಾಮಭೀಮಜೀವಧನದೊಡೆಯ**

ಮುದ್ದಣ್ಣನಿಗೆ ತನ್ನನ್ನು ತಾನು ಒಕ್ಕಲಮಗ ಎಂದು ಹೇಳಿಕೊಳ್ಳಲು ಹೆಮ್ಮೆಯಿದೆ. ತನ್ನನ್ನು ಚಾತಿರ್ವರ್ಣದ ಶೂದ್ರ ವರ್ಣಕ್ಕೆ ಸೇರಿಸಿಕೊಳ್ಳುವುದಿಲ್ಲ. ತನ್ನದು ಒಕ್ಕಲುತನ ಧರ್ಮ ಎನ್ನುತ್ತಿದ್ದಾನೆ. ಹಾಗೆ ಕರೆದುಕೊಳ್ಳುವುದರಲ್ಲಿ ಅವನಿಗೆ ಅಭಿಮಾನವಿದೆ. ಶರಣರನ್ನು ಅವನು ಹಾರುವ ಅಥವಾ ಕ್ಷತ್ರಿಯ ಅಥವಾ ವೈಶ್ಯ ವರ್ಣಗಳಿಗೆ ಸೇರಿಸುವುದಿಲ್ಲ.

**ಕಾಯಕಕ್ಕೆ ಯಾಕೆ ಮಹತ್ವದ ಸ್ಥಾನವಿದೆ? :** ವೈದಿಕ ಸಂಸ್ಕೃತಿಯಲ್ಲಿ ದುಡಿಮೆ – ಕಾಯಕ – ಶ್ರಮ ಇವು ಮಹತ್ವದ ಸಂಗತಿಗಳಲ್ಲ. ಧಾರ್ಮಿಕ ಆಚರಣೆಗಳಿಗೆ ಅಲ್ಲಿ ಮಹತ್ವವಿತ್ತೇ ವಿನಾ ಕಾಯಕಕ್ಕೆ ಮಹತ್ವದ ಸ್ಥಾನವಿದೆ. ಅಲ್ಲಿ ದುಡಿಮೆಯನ್ನು ಮೈಲಿಗೆ ಎಂದು ಪರಿಗಣಿಸಲಾಗಿತ್ತು. ಚಾತುರ್ವರ್ಣ ವ್ಯವಸ್ಥೆಯು **"ಕುಳಿತುಣ್ಣುವ ಸಂಸ್ಕೃತಿ"** ಯಾಗಿದೆ. ಸಿದ್ಧರಾಮಣ್ಣನವರು 'ಮಾಡಿದ' ಕಾಯಕದಿಂದ ಜ್ಞಾನ ಪ್ರಾಪ್ತಿಯಾಗುತ್ತದೆ ವಿನಾ 'ಮಾಡಿಸುವ' ಕ್ರಿಯೆಯಿಂದ ಅದನ್ನು ಗಳಿಸುವುದು ಸಾಧ್ಯವಿಲ್ಲ ಎನ್ನುತ್ತಾರೆ.

**ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು**
**ಮಾಡಿದ ಕಾರ್ಯದಿಂದ ಸತ್ಪುರುಷರ ಹರ್ಷ ನಿರ್ಭರವಾಗಬೇಕು**
**ಮಾಡಿದ ಕಾರ್ಯದಿಂದ ಪ್ರಮಥರು ಅಹುದಹುದೆನಬೇಕು**
**ಅದು ಕಾರಣ ಮಾಡಿಸಿ ಜ್ಞಾನಪ್ರಾಪ್ತಿಯಾಗಲಿಲ್ಲ**
**ಮಾಡಿಸಿ ಪ್ರಮಥರ ಮನೋಹ್ಲಾದವಾಗಲಿಲ್ಲ**
**ಕಪಿಲಸಿದ್ಧಮಲ್ಲಿಕಾರ್ಜನನ ಸಾಕ್ಷಾತ್ಕಾರವಾಗಲಿಲ್ಲ**

ಈ ವಚನದಲ್ಲಿ ಸಿದ್ಧರಾಮಣ್ಣನವರು 'ಮಾಡುವ' ಮತ್ತು ಮಾಡಿಸುವ' ಕ್ರಿಯೆಯಗಳ ನಡುವಿನ ಭಿನ್ನತೆಯನ್ನು ಗುರುತಿಸುತ್ತಿದ್ದಾರೆ. ಮಾಡುವ ಕ್ರಿಯೆಯಿಂದ ಫಲ ಬರುತ್ತದೆ. ಮಾಡಿಸುವ ಕ್ರಿಯೆಯಿಂದ ಜ್ಞಾನವನ್ನು ಗಳಿಸುವುದು ಸಾಧ್ಯ ವಿಲ್ಲ. ಮಾಡಿಸುವ ಕಾಯಕದಿಂದ ಕಪಿಲ ಸಿದ್ಧಮಲ್ಲಿಕಾರ್ಜು ನನ 'ಸಾಕ್ಷಾತಾರ'ವು ದೊರೆಯುವುದಿಲ್ಲ. ಬಸವ ಸಂವಿಧಾನದ್ದು 'ಮಾಡುವ ಸಂಸ್ಕೃತಿ' ಚಾತುರ್ವರ್ಣದ್ದು 'ಮಾಡಿಸುವ ಸಂಸ್ಕೃತಿ'.

**ಕಾಯಕ ಸೂತ್ರದ ಮೂಲಕ "ಸಮೃದ್ಧತೆ"** : ಎಲ್ಲ ಬಗೆಯ ಅಸಮಾನತೆಗಳನ್ನು, ತಾರತಮ್ಯಗಳನ್ನು, ಪವಿತ್ರ–ಅಪವಿತ್ರ ಮುಂತಾದ ಭೇದಗಳನ್ನು ಅಳಿಸಿ ಹಾಕಿ ಇಡೀ ಸಮಾಜವು ಸಹಭಾಗಿತ್ವದ ಮೂಲಕ ದುಡಿಮೆ ಮಾಡಿದರೆ ಆ ಸಮಾಜವು ಸಮೃದ್ಧವಾಗುತ್ತದೆ. ಬಸವ ಪ್ರಣಾಳಿಕೆಯ ಕಾಯಕ ಸಿದ್ಧಾಂತವು ಇಂದಿನ 'ಎಲ್ಲರನ್ನು ಒಳಗೊಳ್ಳುವ' ಅಭಿವೃದ್ಧಿ ಸಿದ್ಧಾಂತಕ್ಕೆ ಸಮನಾಗಿದೆ. ಮೌಢ್ಯಾಚರಣೆಗಳ ಕೂಪವಾಗಿರುವ ಚಾತುರ್ವರ್ಣ ವ್ಯವಸ್ಥೆಯಲ್ಲಿ ಸಮೃದ್ಧತೆ ಸಾಧ್ಯವಿಲ್ಲ. ಕಾಯಕ ಪ್ರಣಾಳಿಕೆಯಲ್ಲಿ ವರ್ಣ ಭೇದವಿಲ್ಲ; ವರ್ಗ ಭೇದವಿಲ್ಲ; ಲಿಂಗ ಭೇದವಿಲ್ಲ. ಸ್ಪೃಶ್ಯ–ಅಸ್ಪೃಶ್ಯ ಭೇದವಿಲ್ಲ. ಬಸವ ಸಂಸ್ಕೃತಿಯು **"ಸ್ವಧರ್ಮ"**ಕ್ಕೆ ಅಂಟಿಕೊಳ್ಳುವದಕ್ಕೆ ಬದಲಾಗಿ ಅದನ್ನು ಮೀರುವ ಕಾಯಕ ಪ್ರಣಾಳಿಕೆಯಾಗಿದೆ. **"ಸ್ವಧರ್ಮೇ ನಿಧನಃ ಶ್ರೇಯಃ"** ಎಂಬ ಭಗವದ್ಗೀತೆಯ ಸೂತ್ರವನ್ನು ಬಸವ ಸಂವಿಧಾನವು ತಿರಸ್ಕರಿಸಿತು.

ಈ ಹಿನ್ನೆಲೆಯಲ್ಲಿ ಆಯ್ದಕ್ಕಿ ಲಕ್ಕಮ್ಮನವರ ಕೆಳಗಿನ ವಚನವನ್ನು ನೋಡಬೇಕು.

**ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ**
**ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ**
**ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಗಿಪ್ಪಳು**
**ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ**

ಒಟ್ಟಾರೆ ಕಾಯಕ ಸಿದ್ಧಾಂತದ ಮೂಲಕ ಬಸವಾದಿ ಶರಣರು ಕರ್ಮ ಸಿದ್ಧಾಂತವನ್ನು ಒಡೆದು ಹಾಕುತ್ತಿದ್ದಾರೆ. ಈ ಮೂಲಕ ಚಾತುರ್ವರ್ಣ ವ್ಯವಸ್ಥೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಶೂದ್ರರಿಗೆ ಕೀಳು ಕರ್ತವ್ಯಗಳನ್ನು ವಿಧಿಸಿರುವ ಚಾತುರ್ವರ್ಣ ವ್ಯವಸ್ಥೆಯನ್ನು ಬಸವ ಸಂಸ್ಕೃತಿಯು ತಿರಸ್ಕರಿಸುತ್ತಿದೆ. ಬಸವ ಸಂವಿಧಾನವು ಶರಣರನ್ನು 'ಶೂದ್ರತ್ವ'ದಿಂದ ಬಿಡುಗಡೆಗೊಳಿಸಿತು. ಕಾಯಕವು ಕೇವಲ ಒಂದು ದುಡಿಮೆಯಲ್ಲ. ಅದೇ ಆಧ್ಯಾತ್ಮ. ಬಡತನಕ್ಕೂ ಪರಿಹಾರ ಕಾಯಕ: ಸಮೃದ್ಧತೆಗೂ ಕಾಯಕ ಪರಿಹಾರ.


## ಮನವಿ

**ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.**

| | |
|---|---|
| **ಹೆಸರು** | : ನೊಳಂಬ ಲಿಂಗಾಯತ ಸಂಘ (ರಿ.) |
| **ಬ್ಯಾಂಕ್** | : ಎಸ್.ಬಿ.ಐ. ಬಸವೇಶ್ವರನಗರ |
| **ಖಾತೆ ಸಂಖ್ಯೆ** | : **54033145493** |
| **ಐ.ಎಫ್.ಎಸ್.ಸಿ.** | : **SBIN0040624** |

# ಬಯಲರೋಗ ಮತ್ತು ಆತ್ಮಜ್ಞಾನ
# ವೈದ್ಯ ಸಂಗಣ್ಣನವರ ವಚನದ ತಾತ್ವಿಕ ಅನಾವರಣ

**ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ,**
**ಕಾಲುಗೆಟ್ಟು ದೃಷ್ಟಿ ನಷ್ಟವಾಗುತ್ತಿದೆ ನೋಡಾ!**
**ಅದಕ್ಕೆ ನಾನೊಂದ ಮದ್ದ ಕಂಡೆ.**
**ಹೆಸರಿಲ್ಲದ ಗಿಡ, ಮೂಲವಿಲ್ಲದ ಬೇರು.**
**ಎಲೆ ಹೂ ನಷ್ಟವಾದ ಚಿಗುರಿನ ಕುಲಗೆಟ್ಟು,**
**ಸಹಮೂಲಮಂ ತಂದು,**
**ಆ ಕಲ್ಲಿನಲ್ಲಿ ಇಕ್ಕಿ ನೀರನೆರೆದು,**
**ಆ ಗುಂಡಿನಲ್ಲಿ ಹಾಗರೆಯಲಾಗಿ,**
**ತಟ್ಟೆಯಲ್ಲಿ ಇಕ್ಕುವದಕ್ಕೆ ಮೊದಲೆ,**
**ಮದ್ದಿನ ದೃಷ್ಟ ನಷ್ಟವಾಯಿತ್ತು,**
**ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ.**

**–ವೈದ್ಯ ಸಂಗಣ್ಣ**

ಶರಣ ಸಾಹಿತ್ಯವು ಕನ್ನಡದ ಕೇವಲ ಭಕ್ತಿಕಾವ್ಯ ಪರಂಪರೆಯಲ್ಲ. ಅದು ಮಾನವನ ಅಂತರಂಗವನ್ನು ಎಚ್ಚರಗೊಳಿಸುವ ಆತ್ಮಚಿಂತನೆಯ ಮಹಾಪ್ರವಾಹವಾಗಿದೆ. ಈ ಪರಂಪರೆಯ ಶರಣರು ಸಮಾಜದ ಬಾಹ್ಯ ವೈಭವಕ್ಕಿಂತ ಮನಸ್ಸಿನ ಒಳಜಗತ್ತಿನ ಶುದ್ಧತೆಯನ್ನು ಹೆಚ್ಚು ಮಹತ್ವದಿಂದ ನೋಡಿದರು. ಅಂತಹ ಶರಣರಲ್ಲಿ ವೈದ್ಯ ಸಂಗಣ್ಣ ಅವರ **"ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ "** ಎಂಬ ವಚನವು ಮಾನವನ ಮನೋವೈಜ್ಞಾನಿಕ ಸ್ಥಿತಿಯನ್ನು ಅದ್ಭುತವಾಗಿ ಅನಾವರಣಗೊಳಿಸುವ ತತ್ವಚಿಂತನೆಯ ಕಾವ್ಯವಾಗಿದೆ. ಈ ವಚನದಲ್ಲಿ ಶರಣರು ಮಾನವನ ಅಜ್ಞಾನವನ್ನು ಮಾತ್ರ ಪ್ರಶ್ನಿಸುವುದಿಲ್ಲ. ಅಜ್ಞಾನಕ್ಕಿಂತಲೂ ಅಪಾಯಕಾರಿ ಆಗಿರುವ ಅಹಂಕಾರವನ್ನು ಆತ್ಮಿಕ ರೋಗವೆಂದು ಗುರುತಿಸುತ್ತಾರೆ. ತಿಳಿಯದೇ ಇದ್ದರೂ **"ನನಗೆ ಗೊತ್ತು"** ಎನ್ನುವ ಮನೋಭಾವ ಮನುಷ್ಯನನ್ನು ಸತ್ಯದಿಂದ ದೂರ ಮಾಡುತ್ತದೆ ಎಂಬ ಗಂಭೀರ ಎಚ್ಚರಿಕೆಯನ್ನು ಈ ವಚನ ನೀಡುತ್ತದೆ. ಹೀಗಾಗಿ ಈ ವಚನವು ಕೇವಲ ಧಾರ್ಮಿಕ ಅನುಭವದ ಅಭಿವ್ಯಕ್ತಿ ಅಲ್ಲ. ಅದು ಮಾನವನ ಆತ್ಮಪರಿಶೀಲನೆಗೆ ಕನ್ನಡಿ ಹಿಡಿಯುವ ಶಾಶ್ವತ ಜೀವನ ದರ್ಶನವಾಗಿದೆ.

**"ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ "** ಎಂಬ ಮೊದಲ ಸಾಲಿನಲ್ಲಿಯೇ ವೈದ್ಯ ಸಂಗಣ್ಣ ಮಾನವನ ಅಂತರಂಗದ ಒಂದು ಭೀಕರ ಸತ್ಯವನ್ನು ಬಿಚ್ಚಿಡುತ್ತಾರೆ. ಸಾಮಾನ್ಯವಾಗಿ ಅಜ್ಞಾನವು ದೊಡ್ಡ ಸಮಸ್ಯೆಯಲ್ಲ. ಏಕೆಂದರೆ ತಿಳಿಯ ದವನು ಕಲಿಯುವ ಅವಕಾಶ ಹೊಂದಿರುತ್ತಾನೆ. ಆದರೆ ತಿಳಿಯದೇ ಇದ್ದರೂ ತಾನು ಎಲ್ಲವನ್ನೂ ಅರಿತವನಾಗಿದ್ದೇನೆ ಎಂದು ಭಾವಿಸುವ ಮನೋಭಾವ ಅತ್ಯಂತ ಅಪಾಯಕಾರಿ. ಇದೇ ಮನಸ್ಥಿತಿಯನ್ನು ಶರಣರು **"ಬಯಲರೋಗ"** ಎಂದು ಕರೆಯುತ್ತಾರೆ. **"ಬಯಲು"** ಎಂದರೆ ಹೊರಗೆ ಕಾಣಿಸಿ ಕೊಳ್ಳುವಿಕೆ ಮತ್ತು ಪ್ರದರ್ಶನ. ಅಂದರೆ ಒಳಗೆ ಆತ್ಮ ಜ್ಞಾನವಿಲ್ಲದಿದ್ದರೂ ಹೊರಗೆ ಜ್ಞಾನಿಯಂತೆ ತೋರ್ಪ ಡಿಸಿಕೊಳ್ಳುವ ಪ್ರವೃತ್ತಿ. ಇಂದಿನ ಸಮಾಜದಲ್ಲಿಯೂ ಈ ಬಯಲರೋಗವನ್ನು ಕಾಣಬಹುದು. ಅಲ್ಪಜ್ಞಾನ ಹೊಂದಿ ದವರು ತಮ್ಮನ್ನೇ ಪರಿಪೂರ್ಣರೆಂದು ಭಾವಿಸಿ ಇತರರನ್ನು ತಿರಸ್ಕರಿಸುವುದು, ಅನುಭವವಿಲ್ಲದಿದ್ದರೂ ಜ್ಞಾನದ ಗರ್ವದಲ್ಲಿ ಬದುಕುವುದು, ಹೊರಗಿನ ವೈಭವವನ್ನೇ ಸತ್ಯವೆಂದು ಭ್ರಮಿಸುವುದು ಇವೆಲ್ಲವೂ ಈ ರೋಗದ ಲಕ್ಷಣಗಳಾಗಿವೆ. ನಿಜವಾದ ಜ್ಞಾನವು ಮನುಷ್ಯನಲ್ಲಿ ವಿನಯವನ್ನು ಬೆಳೆಸುತ್ತದೆ. ಆದರೆ ಅಲ್ಪಜ್ಞಾನ ಮಾತ್ರ ಅಹಂಕಾರವನ್ನು ಹುಟ್ಟಿಸುತ್ತದೆ ಎಂಬ ಆಳವಾದ ಸತ್ಯವನ್ನು ಈ ಸಾಲು ಒಳಗೊಂಡಿದೆ.

ಈ ಅಹಂಕಾರದ ಪರಿಣಾಮವನ್ನು **"ಕಾಲುಗೆಟ್ಟು ದೃಷ್ಟಿ ನಷ್ಟವಾಗುತ್ತಿದೆ ನೋಡಾ"** ಎಂಬ ಸಾಲಿನಲ್ಲಿ ಶರಣರು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. **"ಕಾಲುಗೆಟ್ಟು"** ಎಂದರೆ ಸತ್ಯದ ದಾರಿಯಲ್ಲಿ ನಡೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುವುದು. ಮನುಷ್ಯನು ಜೀವನದಲ್ಲಿ ಬೆಳೆಯ ಬೇಕಾದರೆ ವಿನಯ, ಆತ್ಮಪರಿಶೀಲನೆ ಮತ್ತು ವಿವೇಕ ಅಗತ್ಯ. ಆದರೆ ಅಹಂಕಾರದಿಂದ ಮನುಷ್ಯನು ತನ್ನ ತಪ್ಪನ್ನು ಅರಿಯುವುದಿಲ್ಲ. ತಾನು ನಡೆಯು ತ್ತಿರುವ ದಾರಿಯೇ ತಪ್ಪು ಎಂಬುದು ಗೊತ್ತಾಗುವುದಿಲ್ಲ. ಪರಿಣಾಮ ವಾಗಿ ಆತ ಆತ್ಮಿಕವಾಗಿ ಸ್ಥಬ್ಧನಾಗುತ್ತಾನೆ. **"ದೃಷ್ಟಿ ನಷ್ಟ"** ಎಂಬ ಮಾತು ಇನ್ನೂ ಗಂಭೀರವಾಗಿದೆ. ಇಲ್ಲಿ ದೃಷ್ಟಿ ಎಂದರೆ ಕಣ್ಣಿನ ನೋಟವಲ್ಲ. ಅದು ತತ್ವದೃಷ್ಟಿ ಮತ್ತು ಒಳನೋಟ. ಅಹಂಭಾವವು ಮನಸ್ಸಿನ ಕಣ್ಣುಗಳನ್ನು ಮುಚ್ಚಿಬಿಡುತ್ತದೆ. ಸತ್ಯ ಎದುರಲ್ಲೇ ಇದ್ದರೂ ಅದು ಕಾಣುವುದಿಲ್ಲ. ಇದೇ ಕಾರಣದಿಂದ ಸಮಾಜದಲ್ಲಿ ಸಂಘರ್ಷಗಳು, ಮೂಢ



**ಡಾ. ಜಿ.ವಿ.ಮಂಜುನಾಥ**
ಇತಿಹಾಸ ಉಪನ್ಯಾಸಕರು
ಕೊಟ್ರೆ ನಂಜಪ್ಪ ಪ.ಪೂ.ಕಾಲೇಜು
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ –
577526. ಮೊ : 9945727746

ನಂಬಿಕೆಗಳು ಮತ್ತು ಅಹಂಕಾರದ ಘರ್ಷಣೆಗಳು ಹುಟ್ಟುತ್ತವೆ. ವೈದ್ಯ ಸಂಗಣ್ಣ ಇಲ್ಲಿ ಹೇಳುವ ಜೀವನಸತ್ಯವೇನೆಂದರೆ ಅಜ್ಞಾನಕ್ಕಿಂತ ಅಪಾಯಕಾರಿ ಅಹಂಕಾರ. ಏಕೆಂದರೆ ಅಜ್ಞಾನಿಯು ಕಲಿಯಬಹುದು. ಆದರೆ **"ನನಗೆ ಎಲ್ಲವೂ ಗೊತ್ತು"** ಎಂದುಕೊಂಡವನಿಗೆ ಕಲಿಯುವ ಬಾಗಿಲೇ ಮುಚ್ಚಲ್ಪಡುತ್ತದೆ.

ಈ ಆಂತರಿಕ ರೋಗಕ್ಕೆ ಶರಣರು **"ಅದಕ್ಕೆ ನಾನೊಂದ ಮದ್ದ ಕಂಡೆ"** ಎಂದು ಹೇಳುವ ಮೂಲಕ ಪರಿಹಾರವನ್ನು ಸೂಚಿಸುತ್ತಾರೆ. ಶರಣ ಸಾಹಿತ್ಯದ ವೈಶಿಷ್ಟ್ಯವೇ ಇದು. ಅದು ಸಮಸ್ಯೆಯನ್ನು ಮಾತ್ರ ಹೇಳುವುದಿಲ್ಲ. ಅದರ ಆತ್ಮಿಕ ಚಿಕಿತ್ಸೆಯ ದಾರಿಯನ್ನೂ ತೋರಿಸುತ್ತದೆ. ಇಲ್ಲಿ "ಮದ್ದು" ಎಂದರೆ ದೇಹದ ಔಷಧವಲ್ಲ. ಅದು ಆತ್ಮಜ್ಞಾನ, ವಿನಯ ಮತ್ತು ಶಿವಾನುಭವದ ಸಂಕೇತ. ಅಹಂಕಾರದಿಂದ ಕಣ್ಣುಮುಚ್ಚಿದ ಮನಸ್ಸಿಗೆ ಹೊರಗಿನ ವಿದ್ಯೆ ಸಾಕಾಗುವುದಿಲ್ಲ. ಒಳಗಿನ ಜಾಗೃತಿ ಬೇಕಾಗುತ್ತದೆ. ಈ ಕಾರಣದಿಂದಲೇ ಶರಣರು ಅನುಭವದ ಮಹತ್ವವನ್ನು ಒತ್ತಿಹೇಳುತ್ತಾರೆ. **"ನಾನೊಂದ ಮದ್ದ ಕಂಡೆ"** ಎಂಬ ಮಾತು ಕೇವಲ ವೈಯಕ್ತಿಕ ಹೇಳಿಕೆ ಅಲ್ಲ. ಅದು ಅನುಭವಜ್ಞಾನದ ಘೋಷಣೆ. ಜೀವನದ ಸತ್ಯವನ್ನು ಅನುಭವಿಸಿದವನು ಮಾತ್ರ ಇತರರ ಆತ್ಮದ ರೋಗವನ್ನು ಗುರುತಿಸಿ ಅದರ ಚಿಕಿತ್ಸೆಯನ್ನು ಹೇಳಬಲ್ಲನು. ಅಹಂಕಾರದ ರೋಗಕ್ಕೆ ಚಿಕಿತ್ಸೆ ಹೊರಗಿಲ್ಲ. ಅದು ಮನುಷ್ಯನ ಆತ್ಮದೊಳಗೇ ಅಡಗಿದೆ ಎಂಬ ಸೂಕ್ಷ್ಮ ಸಂದೇಶವನ್ನು ವೈದ್ಯ ಸಂಗಣ್ಣ ಇಲ್ಲಿ ನೀಡುತ್ತಾರೆ.

ಮುಂದೆ **"ಹೆಸರಿಲ್ಲದ ಗಿಡ, ಮೂಲವಿಲ್ಲದ ಬೇರು"** ಮತ್ತು **"ಎಲೆ ಹೂ ನಷ್ಟವಾದ ಚಿಗುರಿನ ಕುಲಗೆಟ್ಟು, ಸಹಮೂಲಮಂ ತಂದು"** ಎಂಬ ಸಾಲುಗಳಲ್ಲಿ ಆತ್ಮಜ್ಞಾನದ ಸ್ವರೂಪವನ್ನು ಶರಣರು ಗಹನವಾದ ರೂಪಕಗಳ ಮೂಲಕ ವಿವರಿಸುತ್ತಾರೆ. ಲೋಕದಲ್ಲಿರುವ ಪ್ರತಿಯೊಂದು ವಸ್ತುವಿಗೂ ಹೆಸರು, ರೂಪ ಮತ್ತು ಮೂಲ ಇರುತ್ತದೆ. ಆದರೆ ಪರಮಸತ್ಯವು ಇವುಗಳ ಮಿತಿಯನ್ನು ಮೀರಿ ಇರುವುದರಿಂದ ಅದನ್ನು ಶಬ್ದಗಳಲ್ಲಿ ಕಟ್ಟಿಹಾಕಲು ಸಾಧ್ಯವಿಲ್ಲ. **"ಹೆಸರಿಲ್ಲದ ಗಿಡ"** ಎಂದರೆ ವರ್ಣನೆಗೆ ಸಿಗದ ಅನುಭವ. **"ಮೂಲವಿಲ್ಲದ ಬೇರು"** ಎಂದರೆ ಆದಿ ಅಂತ್ಯಗಳಿಲ್ಲದ ಶಿವತತ್ತ್ವ. **"ಎಲೆ ಹೂ ನಷ್ಟವಾದ ಚಿಗುರು"** ಎಂದರೆ ಹೊರಗಿನ ಅಲಂಕಾರ, ಪಾಂಡಿತ್ಯದ ಗರ್ವ ಮತ್ತು ಆಚರಣೆಗಳ ವೈಭವ ಇವೆಲ್ಲವೂ ಕರಗಿದ ಸ್ಥಿತಿ. **"ಚಿಗುರಿನ ಕುಲಗೆಟ್ಟು"** ಎಂಬ ಮಾತು ಮನುಷ್ಯನು ತನ್ನ ಕುಲ, ಸ್ಥಾನಮಾನ, ಆಸ್ತಿ ಮತ್ತು ಸಾಮಾಜಿಕ ಗುರುತುಗಳ ಮಿತಿಯನ್ನು ಮೀರಿ ಆತ್ಮದ ಮೂಲ ಸತ್ಯದತ್ತ ಸಾಗುವುದನ್ನು ಸೂಚಿಸುತ್ತದೆ. ಆತ್ಮಜ್ಞಾನವು ಹೊರಗಿನ ವೈಭವದಲ್ಲಿ ಅಲ್ಲ. ಅಂತರಂಗದ ಶುದ್ಧತೆಯಲ್ಲಿ ಅರಳುತ್ತದೆ ಎಂಬ ಸಂದೇಶ ಈ ರೂಪಕಗಳಲ್ಲಿ ಅಡಗಿದೆ.

**"ಆ ಕಲ್ಲಿನಲ್ಲಿ ಇಕ್ಕಿ ನೀರನೆರೆದು, ಆ ಗುಂಡಿನಲ್ಲಿ ಹಾಗರೆಯಲಾಗಿ"** ಹಾಗೂ **"ತಟ್ಟೆಯಲ್ಲಿ ಇಕ್ಕುವದಕ್ಕೆ ಮೊದಲೆ, ಮದ್ದಿನ ದೃಷ್ಟ ನಷ್ಟವಾಯಿತ್ತು"** ಎಂಬ ಸಾಲುಗಳಲ್ಲಿ ಆತ್ಮಾನುಭವದ ಸೂಕ್ಷ್ಮತೆಯನ್ನು ವೈದ್ಯ ಸಂಗಣ್ಣ ಅತ್ಯಂತ ಗಹನವಾಗಿ ನಿರೂಪಿಸುತ್ತಾರೆ. ಕಲ್ಲಿನಲ್ಲಿ ಅರೆಯುವುದು ಎಂದರೆ ಮನಸ್ಸಿನ ಅಹಂಕಾರವನ್ನು ಅನುಭವದ ಘರ್ಷಣೆಯಲ್ಲಿ ಕರಗಿಸುವುದು. ಜೀವನದ ಕಷ್ಟಗಳು, ಗುರುಗಳ ಉಪದೇಶ ಮತ್ತು ಆತ್ಮಪರಿಶೀಲನೆ ಇವೆಲ್ಲವೂ ಆ ಅರೆಯುವ ಪ್ರಕ್ರಿಯೆಯಂತಿವೆ. **"ನೀರನೆರೆದು"** ಎಂದರೆ ಕರುಣೆ, ವಿನಯ ಮತ್ತು ಅನುಭವದ ತೇವ. **"ಗುಂಡಿನಲ್ಲಿ ಹಾಗರೆಯುವುದು"** ಎಂದರೆ ಆತ್ಮದ ಒಳಗರ್ಭದಲ್ಲಿ ಅನುಭವವನ್ನು ಪಕ್ವಗೊಳಿಸುವುದು. ಆದರೆ ಆತ್ಮಾನುಭವವನ್ನು ಮಾತಿನಲ್ಲಿ ವಿವರಿಸಲು ಹೋಗುವಷ್ಟರಲ್ಲಿ ಅದರ ಮೂಲ ಗಾಢತೆ ಕೈ ತಪ್ಪುತ್ತದೆ. ಅದಕ್ಕಾಗಿ **"ಮದ್ದಿನ ದೃಷ್ಟ ನಷ್ಟವಾಯಿತ್ತು"** ಎಂದು ಶರಣರು ಹೇಳುತ್ತಾರೆ. ಅನುಭವವೇ ಸತ್ಯ. ವಿವರಣೆ ಅದರ ನೆರಳು ಮಾತ್ರ. ಶಿವಾನುಭವವನ್ನು ಪುಸ್ತಕದ ಜ್ಞಾನದಿಂದ ಸಂಪೂರ್ಣವಾಗಿ ಹಿಡಿಯಲು ಸಾಧ್ಯವಿಲ್ಲ. ಅದು ಅಂತರಂಗದ ನಿಶ್ಶಬ್ದ ಅನುಭವದಲ್ಲಿ ಮಾತ್ರ ಜೀವಂತವಾಗಿರುತ್ತದೆ ಎಂಬ ಶರಣತತ್ವವನ್ನು ಈ ಸಾಲುಗಳು ಅತ್ಯಂತ ಆಳವಾಗಿ ವ್ಯಕ್ತಪಡಿಸುತ್ತವೆ.

ಕೊನೆಯಲ್ಲಿ ಬಂದಿರುವ **"ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ"** ಎಂಬುದು ವೈದ್ಯ ಸಂಗಣ್ಣ ಅವರ ಅಂಕಿತವಾಗಿದೆ. ಶರಣರ ವಚನಗಳಲ್ಲಿ ಅಂಕಿತವು ಕೇವಲ ಸಹಿಯಲ್ಲ; ಅದು ಅವರ ಆತ್ಮಸಾಧನೆ ಮತ್ತು ಆರಾಧ್ಯತತ್ವದ ಸಂಕೇತ. ಇಲ್ಲಿ **"ಮರುಳಶಂಕರಪ್ರಿಯ"** ಎಂದರೆ ಲೋಕದ ಅಹಂಕಾರ ಮತ್ತು ಭ್ರಮೆಗಳನ್ನು ಮರೆತು ಶಿವನಲ್ಲಿ ಲೀನನಾದ ಭಕ್ತಸ್ಥಿತಿ. **"ಸಿದ್ಧರಾಮೇಶ್ವರಲಿಂಗ"** ಎಂಬುದು ಅವರ ಆರಾಧ್ಯ ಲಿಂಗತತ್ತ್ವದ ಸೂಚನೆ. **"ಅರಿಯಲಾಗಿ"** ಎಂದರೆ ಶಿವತತ್ತ್ವವನ್ನು ಹೊರಗಿನ ದೇವರಾಗಿ ಅಲ್ಲ, ಅಂತರಂಗದ ಸತ್ಯವಾಗಿ ಅನುಭವಿಸಿದ ಸ್ಥಿತಿ. ಹೀಗಾಗಿ ಈ ಅಂಕಿತವು ಇಡೀ ವಚನದ ಪರಮಾರ್ಥವನ್ನು ವ್ಯಕ್ತಪಡಿಸುತ್ತಿದ್ದು, ಆತ್ಮಜ್ಞಾನವು ಕೊನೆಯಲ್ಲಿ ಶಿವಾನುಭವದಲ್ಲಿ ಪೂರ್ಣಗೊಳ್ಳುತ್ತದೆ ಎಂಬ ಸಂದೇಶವನ್ನು ನೀಡುತ್ತದೆ.

# ಶ್ರೀ ಸಿದ್ಧರಾಮರ ಅಪ್ರಕಟಿತ ವಚನಗಳು



ಡಾ. ಎಸ್. ಗಂಗಾಂಬಿಕೆ
ಗೋವರ್ಧನ್
ಬೆಂಗಳೂರು

**ಶ್ರೀ ಚಿದ್ಬಿಂದು ಪರಬಿಂದು**
**ಅಪರಬಿಂದುವಿನ ಸ್ವರೂಪವೆಂತೆಂದೆಡೆ**
**ಚಿದ್ಬಿಂದುವಿಗೆ ಶಕ್ತಿ ರಹಿತ ಪ್ರಣವವೆಂದು ನಾದವೆಂದು**
**ಲಿಂಗವೆಂದು ಪರ್ಯಾಯ ನಾಮ**
**ಪರಬಿಂದುವಿಗೆ ಶಿವಶಕ್ತಿ ಪ್ರಣವವೆಂದು ಕಳಾಸ್ವರೂಪವೆಂದು ಪ್ರಣವವೆಂದು**
**ಸಕಲ ನಿಃಕಲವೆಂದು ಪರ್ಯಾಯ ನಾಮ.**
**ಶ್ರೀ ಪರಬಿಂದುವಿಗೆ ಶಕ್ತಿಪ್ರಣವವೆಂದು ಬಿಂದುರೂಪವೆಂದು ಸಕಲವೆಂದು**
**ಮಹಾಲಿಂಗವೆಂದು ಪರ್ಯಾಯ ನಾಮ**
**ಮ ಆ ಉ ಯೆಂಬಲ್ಲಿ ಆ ಯೆಂಬ ಊರ್ಧ್ವಸ್ವರವೇ ಶಿವ**
**ಉ ಯೆಂಬಲ್ಲಿ ಅಧೋಸ್ವರವೇ ಶಕ್ತಿ**
**ಮ ಯೆಂಬ ಪಶ್ಚ ಸ್ವರದಿಂದ ಸಂಯ್ಯೋಗಿಸಲು**
**ಶಿವನೆ ಷಟ್ಸಾದಾಕ್ಯರೂಪನಾದ ಶಕ್ತಿಯೇ**
**ಶಿವಾದಿ ಷಡ್ವಿಧ ಶಕ್ತಿ ಸ್ವರೂಪವಾದಳು**
**ಚಿತ್ಶಕ್ತಿ ಇಚ್ಛಾಶಕ್ತಿಯಿಂದ ಸರ್ವಾಂಗವೂ ಉದಯವಾಯಿತ್ತು.**
**ಪರಶಕ್ತಿ ಜ್ಞಾನಶಕ್ತಿಯಿಂದ ರಜೋಗುಣ ಉದಯವಾಯಿತ್ತು**
**ಆದಿಶಕ್ತಿ ಕ್ರಿಯಾಶಕ್ತಿಯಿಂದ ತಮೋಗುಣ ಉದಯವಾಯಿತ್ತು**
**ಬಹಿರ್ಮುಖಾದಿಂದ್ರಿಯಾಣಿ ಜನಯಂತ್ತಿ ಭವೋದಯಂ**
**ಇದು ಅನುಸ್ವಾರ ಲಕ್ಷಣ**
**ಮಾಃ ಆ ಉಃ ಎಂಬಲ್ಲಿ ಅ ಎಂಬ ಊರ್ಧ್ವಸ್ವರವೇ ಶಿವ**
**ಉ ಎಂಬ ಅಧೋಸ್ವರವೇ ಶಕ್ತಿ**
**ಮಾ ಎಂಬ ಪಶ್ಚಸ್ವರದಿಂದ ಅಂತರ್ಗತವಾಗಲು ಶಿವನೇ ಷಡ್ಲಕ್ಷಣವಾದ ಶಕ್ತಿಯೇ ನಿಃಕಲ ಶಕ್ತಿ ಸ್ವರೂಪವಾದಳು ಅವಾವವೆಂದಡೆ ಶಿವನರಿವು ಬಿಂದು ನಾದ ಶಬ್ದ ಯಿಚ್ಛೆ ವಾಕು ವಾಕು ನಾದದಿಂದ ಸದ್ರೂಪವಾಯಿತ್ತು ಯಿಚ್ಛೆ ಬಿಂದುವಿನಿಂದ ಚಿದ್ರೂಪವಾಯಿತ್ತು.**

ಶಬ್ದ ಶಿವನರಿವಿನಿಂದ ಆನಂದ ಸ್ವರೂಪವಾಯಿತ್ತು. ಅಂತರ್ಮುಖಾ ನಿವಾಸೇವ ಸಂಸಾರಕ್ಷಯ ಹೇತವೇ ಇದು ಅಂತರ್ಗತ ಲಕ್ಷಣ.

ನಿವೃತ್ತಿ ಕಲಾಪರಾಯನಾಮವನುಳ್ಳ ಕ್ರಿಯಾ ಶಕ್ತಿಯಲ್ಲಿ ಭೂತತತ್ವವೊಂದು ಪ್ರತಿಷ್ಠಾಕಲ ಪರ್ಯಾಯ ನಾಮವನುಳ್ಳ ಜ್ಞಾನಶಕ್ತಿಯಲ್ಲಿ ಚತುರ್ಭೂತ ಗುಣತ್ರಯಾರ್ಥಕ ಪ್ರಕೃತಿ ಜ್ಞಾನೇಂದ್ರಿಯ ತ್ರಿವಿಧ ಕರಣ. ವಿದ್ಯಾಕಲ ಪರ್ಯಾಯನಾಮವನುಳ್ಳ ಇಚ್ಛಾಶಕ್ತಿಯಲ್ಲಿ ಶುದ್ಧವಿದ್ಯೆ ಈಶ್ವರ ಶಾಂತಿಕಲಾ ಪರ್ಯಾಯ ನಾಮವನುಳ್ಳ ಆದಿಶಕ್ತಿಯಲ್ಲಿ ಸದಾಶಿವತತ್ವ ಶಾಂತಾತೀಕಲಾ ಪರಿಯಾಯ ನಾಮವನುಳ್ಳ ಪರಶಕ್ತಿಯಲ್ಲಿ ಶಕ್ತಿತತ್ವ ಜ್ಞಾನಾವರಣವೇ ಆದ್ಯಃ ವಿಷಯಂಗವೇ ಭೋಕ್ತುಸ್ಥಿತಿ ಉಳಿದವೆಲ್ಲ ದೇಹ ಇದು ಪ್ರತ್ಯಾಗಾತ್ಮ ಶಾಂತಾತೀತೋತ್ತರ ಕಲಾಪರ್ಯಾಯನಾಮವನುಳ್ಳ ಚಿತಕ್ತಿಯಲ್ಲಿ ಚಿದ್ಬಿಂದುವೇ ಪರಮಾತ್ಮನಾಗಿಹುದು.

**ಅತ್ಯತಿಸೂಕ್ಷ್ಮನಾದವೇ ನಿರಂಜನ ಜಂಗಮ**
**ಅತಿಸೂಕ್ಷ್ಮನಾದವೇ ಶೂನ್ಯಲಿಂಗ**
**ಆ ಸೂಕ್ಷ್ಮನಾದವೇ ನಿಃಕಲಲಿಂಗ**
**ಸ್ಥೂಲನಾದ ಸೂಕ್ಷ್ಮನಾದವೆರಡೂ ಕೂಡಿ ಸ್ಥೂಲಸಂಸಾರಃ ಇದೇ ಮಹಾಲಿಂಗ**
**ತಾರಕಾಕೃತಿ ದಂಡಕಾಕೃತಿ ಕುಂಡಲಾಕೃತಿ**
**ಅರ್ಧಚಂದ್ರಾಕೃತಿ ದರ್ಪ್ಪಣಾಕೃತಿ ಜ್ಯೋತಿರಾಕೃತಿ**
**ತಾರಕಾಕೃತಿಯಲ್ಲಿ ನಕಾರ ಅಧಿದೈವ ಬ್ರಹ್ಮಪೂಜಾರಿ**
**ದಂಡಕಾಕೃತಿಯಲ್ಲಿ ಮಕಾರ ಅಧಿದೈವ ವಿಷ್ಣುಪೂಜಾರಿ ಕುಂಡಲಾಕೃತಿಯಲ್ಲಿ ಶಿಕಾರವಧಿದೈವ ರುದ್ರಪೂಜಾರಿ ಅರ್ಧಚಂದ್ರಾಕೃತಿಯಲ್ಲಿ ವಕಾರವಧಿದೈಯ್ವ ಯೀಶ್ವರಪೂಜಾರಿ ದರ್ಪ್ಪಣಾಕೃತಿಯಲ್ಲಿ ಯಕಾರವಧಿದೈಯ್ವ ಸದಾಶಿವ ಪೂಜಾರಿ**
**ಜೋತಿರಾಕೃತಿಯಲ್ಲಿ ಓಂಕಾರವಧಿದೈಯ್ವ ಮಹಾಲಿಂಗ ಪೂಜಾರಿ ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ ॥ 1 ॥**
**ತಾರಕಾಕೃತಿಯಲ್ಲಿ ಆಚಾರಲಿಂಗ**
**ದಂಡಕಾಕೃತಿಯಲ್ಲಿ ಗುರುಲಿಂಗ**
**ಕುಂಡಲಾಕೃತಿಯಲ್ಲಿ ಶಿವಲಿಂಗ ಅರ್ಧಚಂದ್ರಾಕೃತಿಯಲ್ಲಿ ಜಂಗಮಲಿಂಗ**
**ಜ್ಯೋತಿರಾಕೃತಿಯಲ್ಲಿ ಮಹಾಲಿಂಗದೊಳಗೈಕ್ಯ ಕಾಣಾ ಕಪಿಲಸಿದ್ದ ಮಲ್ಲಿಕಾರ್ಜುನ ॥ 2 ॥**

### "ಕಾಯಕವೇ ಕೈಲಾಸ"

ಹನ್ನೆರಡನೆಯ ಶತಮಾನದ ಶಿವಶರಣ/ಶರಣೆಯರು ವ್ಯಕ್ತಿಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಕೂಡಿದ ಕಾಯಕದ ಬದುಕಿಗೆ ಮಹತ್ವವನ್ನು ನೀಡಿದ್ದರು. ಅವರ ಪಾಲಿಗೆ 'ಕಾಯಕ' ಎನ್ನುವುದು ಯಾವುದೋ ಒಂದು ಕಸುಬು/ಕೆಲಸ/ದುಡಿಮೆ ಮಾತ್ರ ಆಗಿರಲಿಲ್ಲ. ವ್ಯಕ್ತಿಯು ಮಾಡುವ ದುಡಿಮೆಯು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತಂದುಕೊಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ರೀತಿಯಲ್ಲಿರಬೇಕು. ವ್ಯಕ್ತಿಯು ತನ್ನ ಬದುಕನ್ನು ಕಾಯಕದ ಮೂಲಕ ಕಟ್ಟಿಕೊಳ್ಳಬೇಕೆ ಹೊರತು, ಮತ್ತೊಬ್ಬರನ್ನು ಆಶ್ರಯಿಸಿ ಬಾಳಬಾರದು ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

**ಸಂಗ್ರಹ : (ಸಂ)**

# ನೊಳಂಬ ದೇವಾಲಯಗಳು

ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯ ಅದೇ ತಾಲ್ಲೂಕಿನಲ್ಲಿರುವ ನಂದಿಗ್ರಾಮವು ಇಲ್ಲಿನ ಬೃಹತ್ ದೇವಾಲಯ ಸಂಕೀರ್ಣದಿಂದ ಹೆಸರುವಾಸಿಯಾಗಿದೆ. ಬೆಂಗಳೂರಿನ ಕಡೆಯಿಂದ ಇಲ್ಲಿಗೆ ತೆರಳುವವರು ಬೆಂಗಳೂರಿನಿಂದ ಸುಮಾರು 50 ಕಿ.ಮೀ) ದೇವನಹಳ್ಳಿಯ ನಂತರ ಸಿಗುವ ನಂದಿ ಕ್ರಾಸ್ ಮೂಲಕವೂ ಹಾಗೂ ಚಿಕ್ಕಬಳ್ಳಾಪುರದ ಕಡೆಯಿಂದ ಬರುವವರು ಕೋಟೆಯ ಒಳಗಿನ ಮಾರ್ಗದಿಂದ ಇದನ್ನು ಸಂಪರ್ಕಿಸಬಹುದು. ವಿಶ್ವಪ್ರಸಿದ್ದ ನಂದಿಗಿರಿಧಾಮದ ಮೇಲಿರುವ ಯೋಗ ನಂದೀಶ್ವರ ದೇವಾಲಯವು ಗಂಗರ ಕಾಲದಲ್ಲಿ ನಿರ್ಮಿತವಾದ ದೇವಾಲಯವಾಗಿದ್ದರೆ ಗಿರಿಧಾಮದ ಕೆಳಗಿರುವ ಭೋಗನಂದೀಶ್ವರ ಹಾಗೂ ಅರುಣಾಚಲೇಶ್ವರ ದೇವಾಲಯ ಸಮುಚ್ಚಯವು ಸುಮಾರು ಐದು ಶತಮಾನಗಳ ದೇವಾಲಯ ಬೆಳವಣಿಗೆಗೆ ಸಾಕ್ಷಿಯಾಗಿ ನಿಂತಿದೆ.


ನಂದಿ ಗಿರಿಧಾಮದ ಈಶಾನ್ಯ ತಪ್ಪಲಿನಲ್ಲಿರುವ ಈ ಜೋಡಿದೇವಾಲಯಗಳು ಇಂದಿಗೆ ಹೆಚ್ಚು ಸುರಕ್ಷಿತವಾಗಿದ್ದು ಭೋಗನಂದೀಶ್ವರ ದೇವಾಲಯವು ತನ್ನ ಮೂಲಸ್ವರೂಪವನ್ನು ಹಾಗೇ ಉಳಿಸಿಕೊಂಡಿದ್ದರೆ ಅರುಣಾಚಲೇಶ್ವರ ದೇವಾಲಯವು ಪೂರ್ಣವಾಗಿ ಜೀರ್ಣೋದ್ದಾರಗೊಂಡಿದೆ. ಇದರಲ್ಲಿ ಮೂಲ ಯಾವುದು ನಂತರದ ಸೇರ್ಪಡೆಗಳು ಯಾವುವು ಎಂದು ಕೂಡ ತಿಳಿಯಲಾಗದಷ್ಟು ಈ ದೇವಾಲಯವು ನವೀಕರಣ ಗೊಂಡಿದೆ.

ಬಾಣರ ರಾಜಕುಮಾರಿಯಾದ ರತ್ನಾವಳಿಯು ನಂದಿಯಲ್ಲಿ ಶಿವಾಲಯವೊಂದನ್ನು ನಿರ್ಮಿಸಿರುವ ಶಾಸನವನ್ನು ಆಧರಿಸಿ ಕೆಲವು ವಿದ್ವಾಂಸರು ಭೋಗನಂದೀಶ್ವರ ದೇವಾಲಯವನ್ನೇ ಆಕೆ ನಿರ್ಮಿಸಿದ್ದಾಳೆ ಎಂದು ವಾದಿಸಿದ್ದಾರೆ. ಭೋಗನಂದೀಶ್ವರ ದೇವಾಲಯ ಸಂಕೀರ್ಣದಲ್ಲಿರುವ ಅತ್ಯಂತ ಪ್ರಾಚೀನವಾದ ಶಾಸನವು ನೊಳಂಬರಿಗೆ ಸೇರಿದ್ದಾಗಿದೆ. ಈ ಶಿಲಾ ಶಾಸನದಲ್ಲಿ ದಿವ್ಯಶಕ್ತಿಪಂಡಿತ ಎನ್ನುವ ಶೈವಯತಿಗೆ ಈ ದೇವಾಲಯದ ನಿರ್ವಹಣೆಗಾಗಿ ನೊಳಂಬಾದಿರಾಜನಾದ ಪೊಳಲ್ಚೋರನ ಮಗನಾದ ಮಹೇಂದ್ರನು ನೀಡಿರುವ ದಾನವನ್ನು ತಿಳಿಸುತ್ತದೆ.

ಈ ಸಂದರ್ಭದಲ್ಲಿ ನಂದಿ ಪ್ರದೇಶವು ನಿರಂತರವಾದ ರಾಜಕೀಯ ದಾಳಿಗಳಿಗೆ ತುತ್ತಾಗಿದ್ದ ಅತ್ಯಂತ ಪ್ರಮುಖವಾದ ತಾಣವಾಗಿತ್ತು. ಗಂಗರು, ರಾಷ್ಟ್ರಕೂಟರು, ಚೋಳರು, ನೊಳಂಬರು, ಬಾಣರು ಎಲ್ಲರೂ ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ನಿರಂತರವಾಗಿ ಹಾತೊರೆಯುತ್ತಿದ್ದರು. ಹಾಗೂ ಕೆಲಕಾಲ ಇವರೆಲ್ಲರೂ ಈ ಪ್ರದೇಶವನ್ನು ಅನುಭವಿಸಿದರು ಕೂಡ. ಹಾಗಾಗಿ ಈ ದೇವಾಲಯವನ್ನು ಯಾರು ನಿರ್ಮಿಸಿದರು ಎಂದು ಹೇಳಲು ಯಾವುದೇ ಪ್ರಬಲವಾದ ಆಧಾರಗಳಿಲ್ಲವಾದರೂ ದೇವಾಲಯ ನಿರ್ಮಾಣದ ಪ್ರಕ್ರಿಯೆ ಹಾಗೂ ನಿರ್ಮಾಣ ಶೈಲಿಯನ್ನು ಅನುಸರಿಸಿ ನೊಳಂಬರ ದೇವಾಲಯವೆಂದು ತೀರ್ಮಾನಿಸುವುದು ಉಚಿತವಾಗುತ್ತದೆ. ನಂತರದ ಚೋಳರ ಶಾಸನಗಳು ಕೂಡ ಇಲ್ಲಿನ ಭೋಗನಂದೀಶ್ವರ ದೇವಾಲಯವನ್ನು ನಂದೀಶ್ವರ ಮಹಾದೇವ ದೇವಾಲಯವೆಂದೇ ಕರೆಯುತ್ತದೆ.

ಮೈಸೂರು ಪುರಾತತ್ವ ವರದಿಗಳಲ್ಲಿ ಭೋಗನಂದೀಶ್ವರ ದೇವಾಲಯವನ್ನು ಬಾಣರ ನಿರ್ಮಾಣವೆಂದು ಕರೆದು ಅರುಣಾಚಲೇಶ್ವರ ದೇವಾಲಯವನ್ನು ನೊಳಂಬರ ದೇವಾಲಯವೆಂದು ತಿಳಿಸಲಾಗಿದೆ. ಇದನ್ನು ದೇವರಕೊಂಡಾ ರೆಡ್ಡಿ ಅವರು ಹಾಗೂ ಪಿ.ವಿ. ಕೃಷ್ಣಮೂರ್ತಿ ಅವರು ಕೂಡ ಅನುಮೋದಿಸುತ್ತಾರೆ. ಹೆಚ್. ಕೃಷ್ಣಶಾಸ್ತ್ರಿ ಅವರು ಈ ದೇವಾಲಯಗಳನ್ನು ನೊಳಂಬರ ದೇವಾಲಯಗಳೆಂದೇ ಕರೆದಿದ್ದಾರೆ. ಆದರೆ ಭೋಗನಂದೀಶ್ವರ ದೇವಾಲಯವನ್ನೂ ಒಳಗೊಂಡಂತೆ ಅರುಣಾಚಲೇಶ್ವರ ದೇವಾಲಯವನ್ನು ಸೌಂದರ ರಾಜನ್ ಅವರು ಗಂಗ ನೊಳಂಬ ಶೈಲಿಯೆಂದು ಗುರುತಿಸಿದರೆ, ಶೇಕ್ ಅಲಿಯವರು ಮತ್ತು ಐ.ಕೆ. ಶರ್ಮಾ ಅವರು, ಗಂಗರ ದೇವಾಲಯವೆಂದು ಕರೆದಿರುತ್ತಾರೆ. ದಿ ಎನ್ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್, ಸೌತ್ ಇಂಡಿಯಾ, ಅಪ್ಪರ್ ದ್ರಾವಿಡ ದೇಶದ ಸಂಪುಟಗಳನ್ನು ಸಿದ್ಧಪಡಿಸಿದ ಎಂ. ಎ. ಡಾಖಿಯವರು, ಇದನ್ನು ನೊಳಂಬ ಶೈಲಿ ಎಂದು ಕರೆದ ಮೇಲೆ ಎಂ. ಎಸ್. ಕೃಷ್ಣಮೂರ್ತಿಯವರು, ಆಂಡ್ರ್ಯೂ ಕೋಹೆನ್ ಅವರು ನೊಳಂಬ ದೇವಾಲಯವೆಂದೇ ವಾದಿಸಿರುತ್ತಾರೆ. ಇನ್ನುಳಿದ ಅನೇಕ ವಿದ್ವಾಂಸರು ಯಾವುದೇ ರೀತಿಯ ಖಚಿತತೆಗೂ ಆಸ್ಪದವಿಲ್ಲದಂತೆ ಈ ವಿಷಯವನ್ನು ಸರಳೀಕರಿಸಿ ನೋಡಿದ್ದಾರೆ.

ಭೋಗನಂದೀಶ್ವರ ದೇವಾಲಯವು



**ಡಾ.ಸುಂಕಂ ಗೋವರ್ಧನ**
ಬೆಂಗಳೂರು
ಮೊ : 9535762464

ನೊಳಂಬರ ಅತ್ಯಂತ ಪ್ರಮುಖ ದೇವಾಲಯವಾಗಿದೆ. ಇಡೀ ನೊಳಂಬವಾಡಿಯಲ್ಲಿ ದೊರೆತಿರುವ ಎಲ್ಲಾ ನೊಳಂಬ ದೇವಾಲಯಗಳನ್ನು ಗಮನಿಸಿದರೆ ಇದೊಂದೇ ದೇವಾಲಯವು ಅಧಿಷ್ಠಾನದಿಂದ ಹಿಡಿದು ಸ್ತೂಪಿಯವರೆಗೆ ಸಂಪೂರ್ಣವಾಗಿ ಶಿಲಾಮಯವಾಗಿ ನಿರ್ಮಾಣವಾಗಿರುವುದು. ನೊಳಂಬರ ಕೆಲವು ದೇವಾಲಯಗಳು ಪ್ರಸ್ತರದವರೆಗೂ ಶಿಲಾಮಯವಾಗಿದ್ದರೂ ಮೇಲಿನ ಶಿಖರದ ಭಾಗದಲ್ಲಿ ಮಾತ್ರ ಶಿಲಾಮಯವಾಗಿ ಉಳಿದುಕೊಂಡಿಲ್ಲ. ಹಾಗಾಗಿ ಈ ದೇವಾಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದೆ. ನೊಳಂಬರು ಯಾವ ರೀತಿಯಲ್ಲಿ ಶಿಖರವನ್ನು ನಿರ್ಮಿಸುತ್ತಿದ್ದರು ಎಂಬುದರ ಸಮಗ್ರ ಚಿತ್ರಣವನ್ನು ನಾವಿಲ್ಲಿ ಕಾಣಬಹುದು. ಈ ದೇವಾಲಯದ ಕಾಲವನ್ನು ಆಂಡ್ರ್ಯೂ ಕೋಹೆನ್ ಅವರು 9ನೇ ಶತಮಾನದ ಕೊನೆಯ ಕಾಲು ಶತಮಾನದ ಭಾಗವೆಂದು ತಿಳಿಸಿದ್ದಾರೆ. ಬಹುಶಃ ಮಹೇಂದ್ರನ ಅಥವಾ ಅವನ ಮಗನಾದ ಪೊಳಲ್ಚೋರನ ಕಾಲದ್ದಾಗಿರಬಹುದು ಎಂದು ಕೂಡ ಊಹಿಸಿದ್ದಾರೆ.

ಭೋಗನಂದೀಶ್ವರ ದೇವಾಲಯ ಸಂಕೀರ್ಣವು ನೊಳಂಬರ ಕಾಲದಿಂದ ಹಿಡಿದು ಮೈಸೂರು ಅರಸರ ಕಾಲದವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಬೆಳವಣಿಗೆಯನ್ನು ಹೊಂದಿದಿದೆ. ಆದರೆ ಮೂಲನೊಳಂಬರ ದೇವಾಲಯವು ಪೂರ್ವಾಭಿಮುಖವಾಗಿದ್ದು ಕೇವಲ ಗರ್ಭಗುಡಿ, ತೆರೆದ ಅಂತರಾಳ ಹಾಗೂ ಗೂಢಮಂಟಪ ಗಳನ್ನು ಮಾತ್ರ ಹೊಂದಿದ್ದ ದೇವಾಲಯವಾಗಿದೆ.

ಮಿಕ್ಕಿದ್ದೆಲ್ಲವೂ ನಂತರದ ಕಾಲದಲ್ಲಿ ಮರುನಿರ್ಮಾಣಗೊಂಡಿರುವ ಭಾಗಗಳಾಗಿವೆ. ಭೋಗನಂದೀಶ್ವರ ಹಾಗೂ ಅರುಣಾಚಲೇಶ್ವರ ದೇವಾಲಯಗಳ ನಡುವಿನ ಜಾಗದಲ್ಲಿ ವಿಜಯನಗರ ಕಾಲದ ಪಾರ್ವತಿ ಪರಮೇಶ್ವರರ ದೇವಾಲಯವನ್ನು ನಿರ್ಮಿಸಲಾಗಿದೆ. ಇದರ ಹಿಂದಿನ ಭಾಗವನ್ನು ನೊಳಂಬರ ಶೈಲಿಯಂತೆಯೇ ಅಳವಡಿಸಲಾಗಿದೆ. ಈ ಗುಡಿಯ ಎದುರಿಗೆ ಇರುವ ಸಂಪೂರ್ಣ ಕಪ್ಪುಶಿಲೆಯಲ್ಲಿ ನಿರ್ಮಿತವಾಗಿರುವ ಕಲ್ಯಾಣ ಮಂಟಪವೂ ಕೂಡ ವಿಜಯನಗರದ ಶೈಲಿಯನ್ನೇ ಅನುಮೋದಿಸುತ್ತದೆ.

**ಗರ್ಭಗುಡಿ :** ಭೋಗನಂದೀಶ್ವರ ದೇವಾಲಯದ ಗರ್ಭಗುಡಿಯಲ್ಲಿ ಭೋಗನಂದೀಶ್ವರ ಲಿಂಗವಿದೆ. ಬಹಳ ದೊಡ್ಡದಾದ ಈ ನೊಳಂಬ ಲಿಂಗವು ಎತ್ತರವಾದ ಪಾಣಿಪೀಠದ ಮೇಲೆ ಕುಳಿತಿದೆ. ಚೋಳರ ಕಾಲದಲ್ಲಿಯೇ ಈ ಶಿವಲಿಂಗವನ್ನು ಮಹಾನಂದೀಶ್ವರ ಎಂದು ಕರೆಯಲಾಗಿದೆ, ಬೆಟ್ಟದ ಮೇಲಿರುವ ಶಿವಲಿಂಗವನ್ನು ಯೋಗನಂದೀಶ್ವರ ಎಂದರೆ ಬೆಟ್ಟದ ಕೆಳಗಿರುವ ಈ ಶಿವಲಿಂಗವನ್ನು ಭೋಗನಂದೀಶ್ವರ ದೇವಾಲಯವೆಂದು ಕರೆದಿರಬಹುದು. ಅತ್ಯಂತ ಶ್ರೀಮಂತನಾದ ಈ ಭೋಗ ನಂದೀಶ್ವರನ ಇನ್ನೊಂದು ಹೆಚ್ಚುಗಾರಿಕೆಯೆಂದರೆ ಇದು ಅನೂಚಾನವಾಗಿ ಪೂಜೆಗೆ ಒಳಗಾಗುತ್ತಲೇ ಬಂದಿರುವುದು. ಹಾಗಾಗಿ ಇದು ಜೀವಂತ ದೇವಾಲಯವಾಗಿದೆ. ಈ ಗರ್ಭಗುಡಿಯ ವಿತಾನದಲ್ಲಿ ಕಮಲವನ್ನು ಬಿಡಿಸಲಾಗಿದೆ.

ಗರ್ಭಗುಡಿಯ ಬಾಗಿಲುವಾಡವು ತ್ರಿಶಾಖೆಯನ್ನು ಹೊಂದಿದೆ. ಗರ್ಭಗುಡಿಯ ಕಡೆಯಿಂದ ಮೊದಲನೆಯ ಶಾಖೆಯು ಅತ್ಯಂತ ಸರಳವಾಗಿದ್ದು ನಡುವಿನ ಶಾಖೆಯು ಸ್ಥಂಭಶಾಖೆಯಾಗಿದೆ. ಮೂರನೆಯ ಶಾಖೆಯು ಪದ್ಮಶಾಖೆಯಾಗಿದೆ. ಈ ಶಾಖೆಗಳ ಕೆಳಗೆ ಚೌರಿಗಳನ್ನು ಹೊತ್ತು ನಿಂತಿರುವ ಸ್ತ್ರೀಯರ ಶಿಲ್ಪಗಳನ್ನು ಬಿಡಿಸಲಾಗಿದೆ. ಇದು ಗಂಗೆ ಮತ್ತು ಯಮುನೆಯರನ್ನು ನೆನಪಿಗೆ ತರುತ್ತದೆ. ಗರ್ಭಗುಡಿಯ ಲಲಾಟವು ಅತ್ಯಂತ ವಿಶಿಷ್ಟವಾಗಿದ್ದು ದೇವಾಲಯದ ಶಿಖರಗಳ ಮಾದರಿಯನ್ನು ಬಿಡಿಸಲಾಗಿದೆ. ಗರ್ಭಗುಡಿಯ ದ್ವಾರಬಂಧದ ಲಲಾಟದಲ್ಲಿರುವ ಈ ದೇಗುಲವಿನ್ಯಾಸದಲ್ಲಿ ನಡುವೆ ಶಾಲಾ ಶಿಖರ ಹಾಗೂ ಅದರ ಇಕ್ಕೆಲಗಳಲ್ಲಿ ಪಂಜರಗಳು ಹಾಗೂ ತುದಿಗಳಲ್ಲಿ ಕೂಟಗಳನ್ನು ಅತ್ಯಂತ ವಿಶೇಷವಾಗಿ ಸಂಯೋಜಿಸಲಾಗಿದೆ.

**ಅರ್ಧಮಂಟಪ** : ಗರ್ಭಗುಡಿಯ ಹೊರಗೆ ಇರುವ ಅಂತರಾಳವು ತೆರೆದ ಅಂತರಾಳವಾಗಿದೆ. ಅಂತರಾಳದಲ್ಲಿರುವ ಕಂಬಗಳು ನಯವಾಗಿದ್ದು ಯಾವುದೇ ಅಲಂಕರಣಗಳನ್ನು ಹಾಗೂ ಕೆತ್ತನೆಗಳನ್ನು ಒಳಗೊಂಡಿರುವುದಿಲ್ಲ. ಆದರೆ ಈ ಕಂಬಗಳಲ್ಲಿ ಉತ್ತರಭಾಗದಲ್ಲಿರುವ ಕಂಬದ ದಕ್ಷಿಣ ಮುಖದಲ್ಲಿ ಮಾತ್ರ ಮಾನವದೇಹಿಯೂ ಹಾಗೂ ನಂದಿಯ ಮುಖವನ್ನು ಹೊಂದಿರುವ ಶಿಲ್ಪವಿದೆ. ಈ ನಂದಿಯು ಯೋಗಪಟ್ಟದಲ್ಲಿ ಕುಳಿತಿದ್ದು ತನ್ನ ಮುಂದಿರುವ ರಾಜನೊಬ್ಬನಿಗೆ ಉಪದೇಶವನ್ನು ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಈ ಶಿಲ್ಪವು ಶೃಂಗಿಯು ಗಿರಿಜಾಕಲ್ಯಾಣದ ಕಥೆಯನ್ನು ಬೋಧಿಸುತ್ತಿರುವ ಕಥೆಯೆಂದು ಇಲ್ಲಿನ ಪುರೋಹಿತರು ತಿಳಿಸುತ್ತಾರೆ.

ಈ ಅಂತರಾಳದಲ್ಲಿ ಗೋಡೆಗೆ ಸೇರಿಸಿರುವ ತುದಿಯ ಎರಡು ಕಂಬಗಳು ಭಿತ್ತಿಪಾದಗಳಂತೆ ಕಂಗೊಳಿಸಿದರೆ ಮುಂದಿನ ಅಂಚುಗಳಲ್ಲಿರುವ ಎರಡು ಕಂಬಗಳು ಹಾಗೂ ನಡುವಿನ ಎರಡು ಕಂಬಗಳು ಸ್ವತಂತ್ರ ಕಂಬಗಳಾಗಿದ್ದು ಮೂಲಶಿಖರದ ಭಾರವನ್ನು ಹೊರುವುದರಲ್ಲಿ ಯಶಸ್ವಿಯಾಗಿದೆ. ಈ ಕಂಬಗಳು ರುದ್ರಕಾಂತ ಮಾದರಿಯ ಕಂಬಗಳಾಗಿವೆ. ಈ ಮುಂದಿನ ನಡುವಿನ ಎರಡು ಕಂಬಗಳಲ್ಲಿ ಬಲಗಡೆಯ ಕಂಬದ ಮೇಲೆಯೇ ಈ ಹಿಂದಿನ ಪ್ಯಾರಾದಲ್ಲಿ ಹೇಳಲಾಗಿರುವ ಕಥಾಶಿಲ್ಪವು ಇರುವುದು.

**ಗೂಢಮಂಟಪ :** ಭೋಗನಂದೀಶ್ವರ ದೇವಾಲಯದ

ಗೂಢಮಂಟಪವನ್ನು ನವರಂಗ ಎಂದು ಕರೆಯಬಹುದು. ಯಾಕೆಂದರೆ ಇಲ್ಲಿನ ವಿತಾನವನ್ನು ಒಂಬತ್ತು ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ನವರಂಗದಲ್ಲಿ ನಾಲ್ಕೂ ದಿಕ್ಕು ಗಳಲ್ಲಿಯೂ ನಾಲ್ಕು ನಾಲ್ಕರಂತೆ ಒಟ್ಟು ಹನ್ನೆರಡು ಕಂಬಗಳನ್ನು ಗೋಡೆಗೆ ಸೇರಿಸಿ ನಿರ್ಮಿಸಲಾಗಿದೆ. ಇದನ್ನು ಕುಡ್ಯಸ್ತಂಭಗಳೆಂದು ಕರೆಯಲಾಗುತ್ತದೆ. ಉಳಿದಂತೆ ನಡುವಿನಲ್ಲಿ ನೊಳಂಬ ಶೈಲಿಯ ಚತುರಶ್ರವಾದ ಚಿತ್ರಖಂಡ ಮಾದರಿಯ ನಾಲ್ಕು ಸ್ವತಂತ್ರ ಕಂಬಗಳನ್ನು ಅಳವಡಿಸ ಲಾಗಿದೆ. ಈ ಕಂಬಗಳ ನಾಲ್ಕೂ ಮುಖಗಳಲ್ಲಿಯೂ ಚಿಕಣಿ ಮಾದರಿಯ ಚಿಕ್ಕ ಸ್ವರೂಪದ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಕಂಬಗಳಲ್ಲಿ ಮಧ್ಯದ ಪಟ್ಟಿಕೆಯಲ್ಲಿ ಕೀರ್ತಿಮುಖದಿಂದ ಇಳಿಬಿಟ್ಟಿರುವ ಎರಡು ಹಾರಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಉಳಿದಂತೆ ಇಲ್ಲಿಂದ ಇಳಿ ಬಿಟ್ಟಿರುವ ಹಾಗೆ ಒಂದು, ಎರಡು ಹಾಗೂ ಮೂರು ಶಿಲ್ಪಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಕೆಲವು ಕಲ್ಪವಲ್ಲಿಗಳ ಮಾದರಿಯಲ್ಲಿ ಕೆತ್ತಲಾಗಿದ್ದರೆ ಇನ್ನು ಕೆಲವು ಚೌಕದ ಮಾದರಿಯಲ್ಲಿ ನಿರ್ಮಿಸಲಾಗಿದೆ. ಅದರ ವಿವರಣೆಯನ್ನು

ಈ ಮುಂದೆ ಗಮನಿಸಬಹುದಾಗಿದೆ.

**ಕಂಬ 1 :** ಗರ್ಭಗುಡಿಗೆ ಅಭಿಮುಖವಾಗಿ ಮುಂದೆ ಇರುವ ಮೊದಲನೆಯ ಕಂಬದ ಪಶ್ಚಿಮಮುಖದಲ್ಲಿ ಎಡಗಡೆಯಲ್ಲಿ ವಾದ್ಯಗಾರನ ಶಿಲ್ಪವಿದ್ದರೆ ಬಲಗಡೆಯಲ್ಲಿ ನರ್ತಕನ ಶಿಲ್ಪವಿದೆ. ಇದು ಪುರುಷನೊಬ್ಬನ ವಾದ್ಯಕ್ಕೆ ನರ್ತಿಸುತ್ತಿರುವ ಪುರುಷನ ಶಿಲ್ಪವಾಗಿದೆ. ದಕ್ಷಿಣಮುಖದಲ್ಲಿ ಎಡಬಲಗಳಲ್ಲಿರುವ ಎರಡು ಹಾರಗಳಲ್ಲಿ ಶಂಖನಿಧಿ ಹಾಗೂ ಪದ್ಮನಿಧಿಯರನ್ನು ಬಿಡಿಸಲಾಗಿದೆ. ಪೂರ್ವಮುಖದಲ್ಲಿ ಎಡಗಡೆಯಲ್ಲಿ ಸೂರ್ಯನ ಶಿಲ್ಪವಿದ್ದರೆ ಬಲಗಡೆಯಲ್ಲಿ ಕುಬ್ಜನೊಬ್ಬನ ಶಿಲ್ಪವಿದೆ. ಬಹುಶಃ ಇವನು ಕುಬೇರನಿರ ಬಹುದು. ಇನ್ನು ಉತ್ತರಮುಖದ ಹಾರಗಳಲ್ಲಿ ಇಬ್ಬರು ನರ್ತಕರನ್ನು ಬಿಡಿಸಲಾಗಿದೆ.

**ಕಂಬ2:** ಗರ್ಭಗುಡಿಗೆ ಅಭಿಮುಖವಾಗಿ ಮುಂದೆ ಇರುವ ಎರಡನೆಯ ಕಂಬದಲ್ಲಿ ಅಂದರೆ ನಮ್ಮ ಬಲಗಡೆ ಯಲ್ಲಿರುವ ಕಂಬದ ಪಶ್ಚಿಮಮುಖದಲ್ಲಿರುವ ಎರಡು ಹಾರಗಳಲ್ಲಿ ಎಡಗಡೆಯಲ್ಲಿ ವಾದ್ಯಗಾರನ ಶಿಲ್ಪವಿದ್ದರೆ ಬಲಗಡೆಯಲ್ಲಿ ತಾಳಗಾರನ ಶಿಲ್ಪವಿದೆ. ದಕ್ಷಿಣಮುಖದಲ್ಲಿ ಎರಡು ಸೂರ್ಯನ ಶಿಲ್ಪಗಳನ್ನು ಕೆತ್ತಲಾಗಿದೆ. ಇದರಲ್ಲಿ ಒಂದು ಚಂದ್ರನಿರಬಹುದು. ಪೂರ್ವಮುಖದಲ್ಲಿ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಮಹಿಷನನ್ನು ಕೊಲ್ಲುತ್ತಿರುವ ಮಹಿಷಾಸುರ ಮರ್ದಿನಿಯ ಶಿಲ್ಪದಂತೆ ಭಾಸವಾಗುತ್ತದೆ. ಆದರೆ ಇದನ್ನು ಆಂಡ್ರ್ಯೂಕೋಹೆನ್ ಅವರು ಹೇಳುವಂತೆ ಕೃಷ್ಣನು ಗೂಳಿಯ ರೂಪದಲ್ಲಿ ಬಂದ ರಾಕ್ಷಸನನ್ನು ಸಂಹರಿಸುತ್ತಿರುವಂತೆ ಕೆತ್ತಲಾಗಿದೆ. ಬಲಗಡೆಯಲ್ಲಿರುವ ಶಿಲ್ಪವು ಕೃಷ್ಣನು ಬಕಾಸುರನನ್ನು ಕೊಲ್ಲುತ್ತಿರುವ ಶಿಲ್ಪವಾಗಿದೆ.

**ಮುಂದುವರಿಯುವುದು**

ಎಲ್ಲರಿಗೂ ನಮಸ್ಕಾರ, ಶ್ರೀ ಗುರು ಸಿದ್ದರಾಮೇಶ್ವರರ ಸ್ಮರಣೆಯನ್ನು ಮಾಡಿಕೊಳ್ಳುತ್ತಾ, ಸಮಾಜದ ದಾನಿಗಳನ್ನು ಸ್ಮರಿಸುತ್ತಾ, ಸಮಾಜ ಬಾಂಧವರೇ, ನಾನು ಕಳೆದ 11 ವರ್ಷಗಳಿಂದ ಸಂಘದ ನಿರ್ದೇಶಕನಾಗಿ 2021 ರಿಂದ 2026 ರವರೆಗೆ ಐದು ವರ್ಷದ ಅವಧಿಯಲ್ಲಿ ನಾಲ್ಕು ವರ್ಷ ನಾಲ್ಕು ತಿಂಗಳು ಜಂಟಿ ಕಾರ್ಯದರ್ಶಿಯಾಗಿ ಮತ್ತು ಇನ್ನುಳಿದ ಎಂಟು ತಿಂಗಳು ಸಂಘದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದು, 2015 ರಿಂದ 2021ರ ರವರೆಗೆ ಸೇವೆ ಸಲ್ಲಿಸಿದ ಎಸ್.ಎಂ.ನಾಗರಾಜುರವರ ಸೇವೆ, ಕೊಡುಗೆ ಸಂಘಕ್ಕೆ ಅಪಾರ. ಮತ್ತು 2021 ರಿಂದ 2026 ಅವಧಿಯಲ್ಲಿ ಅಧ್ಯಕ್ಷರಾದ ಎಸ್.ಆರ್.ಪಾಟೀಲ್‌ರವರ ಕಾಲಾವಧಿಯಲ್ಲಿ ಸಂಘದ ವತಿಯಿಂದ ಅಭಿವೃದ್ಧಿ ಕಾರ್ಯಗಳು ನಡೆದವು. ನಂತರ ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಬಿ.ಕೆ.ಚಂದ್ರಶೇಖರ್‌ರವರು ಹೆಚ್ಚು ಅಭಿವೃದ್ಧಿ ಕೆಲಸಗಳನ್ನು ಮಾಡಿದರು. ಸೂರೇನಳ್ಳಿ ಸಿದ್ದಯ್ಯ ವಾಣಿಜ್ಯ ಸಂಕೀರ್ಣ, ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಬಾಲಕಿಯರ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿ ಉಳಿದ ಜಾಗವನ್ನು ಸುಮಾರು 67 ಲಕ್ಷ ರೂಗಳನ್ನು ಬಿ.ಬಿ.ಎಂ.ಪಿಗೆ ಸಂಘದ ವತಿಯಿಂದ ಕಟ್ಟಿ 30 ವರ್ಷಗಳ ಅವಧಿಗೆ ಲೀಸ್ ಮಾಡಿದ್ದು ತಿಪಟೂರು ತಾಲೂಕಿನ ಲಿಂಗದಹಳ್ಳಿ ಗೇಟ್ ಹತ್ತಿರ ಒಂದು ಎಕರೆ ಜಮೀನು ಮತ್ತು ಮೈಸೂರಿನ ಹಾಸ್ಟೆಲ್ ಅಭಿವೃದ್ಧಿ ಹಾಗೂ ಅರಸೀಕೆರೆಯ ಶ್ರೀ ಗುರು ಸಿದ್ದರಾಮೇಶ್ವರ ಸಮುದಾಯ ಭವನದ ಅಭಿವೃದ್ಧಿ, ಇತ್ತೀಚಿಗೆ ದಾವಣಗೆರೆಯಲ್ಲಿ ಸುಮಾರು 709 ಚ.ಮೀ. ಸಿ.ಎ. ನಿವೇಶನವನ್ನು ಪಡೆಯಲು ಪ್ರಯತ್ನಿಸಿದ್ದು ಮತ್ತು ಶಿವಮೊಗ್ಗದ ಹಾಸ್ಟೆಲ್ ಅಭಿವೃದ್ಧಿ, ಇವೆಲ್ಲವೂ ಸಂಘದ ಕಾರ್ಯದರ್ಶಿ ಗಳಾದ ಕೆ.ಬಿ. ಶಶಿಧರ್ ಅವರು ಉಪಾಧ್ಯಕ್ಷರುಗಳು, ಜಂಟಿ ಕಾರ್ಯದರ್ಶಿಗಳು, ನೊಳಂಬ ಲಿಂಗಾಯತ ಸಂಘದ ನಿರ್ದೇಶಕರುಗಳು, ಎಲ್ಲರೂ ಒಟ್ಟುಗೂಡಿ ತೀರ್ಮಾನ ತೆಗೆದುಕೊಂಡು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಸುಮಾರು 23 ವರ್ಷ ಖಜಾಂಚಿಗಳಾಗಿ ಸೇವೆ ಸಲ್ಲಿಸಿದ ಕೆ.ಬಿ. ರುದ್ರಪ್ಪ ಇವರ ಸೇವೆಯನ್ನು ಸ್ಮರಿಸುತ್ತಾ ಈ ಮೇಲಿನ ಎಲ್ಲರಿಗೂ ನಾನು ಧನ್ಯವಾದಗಳು ಸಮರ್ಪಿಸುತ್ತೇನೆ.

**ಕುಬೇರಪ್ಪ .ಬಿ**

ಖಜಾಂಚಿ, ನೊ.ಲಿಂ.ಸಂಘ, ಬೆಂಗಳೂರು

# ಆರೋಗ್ಯಾಮೃತ 41

## ಜೀವಾಮೃತ


**ಹಿಂದಿನ ಸಂಚಿಕೆಯಿಂದ.....**

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ ಇದಾವ ಪರಿಯಲ್ಲಿ ಕಾಡಿತ್ತು ಮಾಯೆ ಈ ಮಾಯೆಯ ಕಳೆವಡೆ ಎನ್ನಳವಲ್ಲ ನೀವೇ ಬಲ್ಲಿರಿ ಕೂಡಲ ಸಂಗಮದೇವ.

ಒಬ್ಬರು ಪಿಹೆಚ್.ಡಿ ವಿದ್ವಾಂಸರು ಒಂದು ಕ್ಯಾಸೆಟ್‌ನಲ್ಲಿ ಮಾತನಾಡುತ್ತಾ ಹೆಣ್ಣೆಂಬ ಮಾಯೆ ತಾಯಾಗಿ, ಹೆಂಡತಿಯಾಗಿ, ಮಗಳಾಗಿ ಪರಿಪರಿಯಾಗಿ ಕಾಡುತ್ತಿದೆ. ಈ ಮಾಯೆಯಿಂದ ಪಾರುಮಾಡಲು ಶಿವನಲ್ಲಿ ಮೊರೆ ಇಡುತ್ತಿದ್ದಾನೆ ಎಂದು ಹೇಳಿಬಿಟ್ಟಿದ್ದಾರೆ. ಬಸವಣ್ಣನವರ ಭಾಷೆಯನ್ನು ಅರ್ಥಮಾಡಿಕೊಳ್ಳಲು, ವಿದ್ವತ್ತನ್ನು ತುಂಬಿ ಕೊಂಡ ತಲೆಗಿಂತಲೂ ಕಸವನ್ನು ಕಳೆದುಕೊಂಡ ಖಾಲಿ ಹೃದಯ ಬೇಕಾಗುತ್ತದೆ. ಈ ವಚನದ ಪ್ರಮುಖ ವಾಕ್ಯವಾವು ದೆಂದರೆ 'ಈ ಮಾಯೆಯ ಕಳೆವೊಡೆ ಎನ್ನಳವಲ್ಲ' ವಿದ್ವಾಂಸರು ಕಳೆವೊಡೆ ಎಂಬ ಶಬ್ದವನ್ನು ಗೆಲುವೊಡೆ ಎಂದು ಅರ್ಥ ಮಾಡಿಕೊಂಡಂತೆ ಕಾಣುತ್ತದೆ. ಬಸವಣ್ಣನವರು ಸಾಂಪ್ರ ದಾಯಿಕವಾಗಿ ಬೆಳೆದು ಬಂದ ಹೆಣ್ಣು ಮಾಯೆ ಎಂಬ ವಾದವನ್ನು ನಯವಾಗಿ ಅತ್ಯಂತ ಬುದ್ಧಿವಂತಿಕೆಯಿಂದ ಹಾಸ್ಯರಸ ಬೆರಸಿ ಖಂಡಿಸಿದ್ದಾರೆ ಈ ವಚನದಲ್ಲಿ ಹೊನ್ನು ಮಾಯೆ ಎನ್ನುವ ಯೋಗಿ ಆಗಲೀ ಸನ್ಯಾಸಿ ಆಗಲಿ ಇನ್ನಾರೇ ಆಗಲಿ ತಾಯಿಯನ್ನು ಹೊರತುಪಡಿಸಿ ಹುಟ್ಟಲು ಸಾಧ್ಯವಿಲ್ಲವಲ್ಲ ಕೆಲವು ಪುರಾಣದ ಚರಿತೆಗಳಲ್ಲಿ ಅವರವರ ಗುರುಗಳನ್ನು ಅವತಾರ ಪುರುಷರನ್ನು ಎಲ್ಲೆಲ್ಲೋ ಹುಟ್ಟಿಸಿದ್ದಾರೆ. ಇದು ಸುಳ್ಳಿನ ಕಂತೆ ಯಲ್ಲದೆ ಮತ್ತೇನೂ ಅಲ್ಲ. ಬಸವಣ್ಣ ನವರು ಕೇಳುತ್ತಾರೆ. ಜನಿತಕ್ಕೆ ತಾಯಾಗಿ ನಿನ್ನ ಜನ್ಮವನ್ನು ನೀಡಿರುವ ಈ ಮಾಯೆಯನ್ನು ಹೇಗೆ ನಿವಾರಿಸಿ ಕೊಳ್ಳುತ್ತೀಯಾ? ಹಗಲಿರುಳು ನೆರಳಿ ನಂತೆ ಅನುಸರಿಸಿ ಒಲವಿನ ಮೃತವನ್ನುಣಿಸಿ ತಾಯಿಗಿಂತಲೂ ಹೆಚ್ಚುಕಾಲ ನಿನ್ನ ಬಾಳಸಂಗಾತಿಯಾಗಿ ರುವ ಕೂಟಕ್ಕೆ ಗತಿಯಾದ ಈ ಮಾಯೆಯನ್ನು ಕಳೆದು ಅಂದರೆ ನಿವಾರಿಸಿ ಬಿಟ್ಟು ಎಲ್ಲಿ ಓಡುತ್ತೀಯ? ನಿನ್ನ ಒಲವಿನ ಸಂಸಾರ ರೂಪವಾದ ನಿನ್ನ ಅಂಶವೇ ಆದ ಶಿಶುವನ್ನು ಮಾಯ ಎಂದು ಹೀಗಳೆದು ಹೊರನೂಕಲು ನೀನು ಶಕ್ತನೇ? ಇಷ್ಟು ಅವಿನಾಭಾವದಿಂದ ಹೊಂದಿಕೊಂಡಿರುವ ಸ್ತ್ರೀಕುಲವನ್ನೇ ಈ ಮಹಾಬುದ್ಧಿ ವಂತರು ಮಾಯೆ ಎನ್ನುತ್ತಿದ್ದಾರಲ್ಲ ಇದನ್ನು ಕಳೆವಡೆ ಎನ್ನುಳವಲ್ಲ 'ನೀವೇ ಬಲ್ಲಿರಿ ಕೂಡಲ ಸಂಗಮದೇವಾ ಎಂದಿದ್ದಾರೆ. ಹೆಣ್ಣನ್ನು ಮಾಯೆ ಎಂದು ಹೀಗಳೆವ ಅಣ್ಣಗಳೂ

ಮಾಯಾರಹಿತರಾಗಿ ಬದುಕಲು ಸಾಧ್ಯವಿಲ್ಲ. ಈ ಅಣ್ಣಂದಿರುಗಳ ದೇವರುಗಳನ್ನೇ ಇವರ ಮಾಯೆ ನುಂಗಿ ನೀರು ಕುಡಿದಿರುವುದನ್ನು ಅಲ್ಲಮಪ್ರಭುಗಳ ಅನೇಕ ವಚನಗಳಲ್ಲಿ ಕಾಣಬಹುದಾಗಿದೆ. ಆದ್ದರಿಂದ ಹೆಣ್ಣು ಹೊನ್ನು, ಮಣ್ಣುಗಳನ್ನು ಮಾಯೆ ಎಂಬುವುದು ಬೇಡ. ನಮ್ಮ ಕಲುಷಿತ ಮನಸ್ಸುಗಳನ್ನು ತಿದ್ದಿಕೊಳ್ಳೋಣ. ಮಾಯೆ ಯಾಗಿ ಅಡ್ಡ ಬರುವ ವಸ್ತು ವ್ಯಕ್ತಿಗಳನ್ನು ಶಿವನ ದಯೆಯನ್ನು ಗುರ್ತಿಸಿಕೊಂಡು ಮುಂದೆ ಸಾಗೋಣ. ಇನ್ನು ಶರಣರ ಭೋಗಾಂಗದ ಬಗ್ಗೆ ಮತ್ತು ಭೋಗದ ಇಂದಿನ ಪರಿಕಲ್ಪನೆ ಬಗ್ಗೆ ತಿಳಿದುಕೊಳ್ಳೋಣ.

ಭೋಗ ಎಂಬ ಪದ ಇಂದು ಎಲ್ಲೆಲ್ಲೂ ಕೇಳಿ ಬರುತ್ತಿದೆ. ವೈಜ್ಞಾನಿಕ ಕ್ರಾಂತಿ ಕೈಗಾರಿಕಾ ಕ್ರಾಂತಿ ಭೋಗವಸ್ತುಗಳನ್ನು ಯಥೇಚ್ಛವಾಗಿ ನಿರ್ಮಿಸಿ ಪ್ರತಿಯೊಬ್ಬನ ಮನೆಯಂಗಳಕ್ಕೂ (ಧನವಿದ್ದವರ) ತಲುಪಿಸುತ್ತಿದೆ. ಮಾನವನ ಎಲ್ಲಾ ಶ್ರಮದ ಕೆಲಸ ಗಳನ್ನು ಯಂತ್ರಗಳು ನೋಡಿ ಕೊಳ್ಳುತ್ತಿವೆ. ಎದ್ದಾಗಿನಿಂದ ಮಲಗು ವವರೆಗಿನ ಅನೇಕ ಕೆಲಸಗಳನ್ನು ಯಂತ್ರಗಳಿಗೊಪ್ಪಿಸಿ ತಾನು ಹಾಯಾಗಿ ಟಿವಿ, ಸಿನಿಮಾ, ಕ್ಲಬ್, ಪಾರ್ಟಿ ಸೇವೆ ಸಾಧನೆ ಮುಂತಾ ದುವುಗಳಲ್ಲಿ ಕಾಲಕಳೆಯಬೇಕೆಂಬ ಆಧುನಿಕ ಮಾನವನಿಗೆ ಉದ್ವೇಗದ ದೆಸೆಯಿಂದ ಯಾವುದಕ್ಕೂ ಸಮಯ ವಿಲ್ಲದೆ ಮುಕ್ತಿಯೂ ಒದ್ದಾಡು ವಂತಾಗಿದೆ. ಆಧುನಿಕ ಮಾನವ



**ಶ್ರೀ ಶ್ರೀ ಬಸವಾನಂದಸ್ವಾಮಿಗಳವರು**
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ಏನೆಲ್ಲಾ ಸುಖದ ಸಾಧನೆಗಳನ್ನು ನಿರ್ಮಿಸಿಕೊಂಡಿದ್ದರೂ ಸುಖ ಶಾಂತಿ ಮರೀಚಿಕೆ ಆಗಿವೆ. 'ತಿನ್ನುವ ಮನಸ್ಸಿದೆ ಜೀರ್ಣಿಸುವ ಶಕ್ತಿ ಇಲ್ಲ ಭೋಗಿಸುವ ಅತ್ಯಾಶೆಯಿದೆ, ಏಡ್ಸ್ ಭಯ ಕಾಡುತ್ತಿದೆ. ಆಧುನಿಕ ಜನಾಂಗ ವಿಪರೀತ ದ್ವಂದ್ವದಲ್ಲಿ ಸಿಕ್ಕಿ ನರಳುತ್ತಿದೆ.

ಸ್ವಾತಂತ್ರ ಹೋರಾಟದ ಕಾಲದಲ್ಲಿ ಹೋರಾಟ ಗಾರರಿಗೆಲ್ಲಾ ಒಂದು ಆಶಾಭಾವವಿತ್ತು ದೇಶ ಸ್ವಾತಂತ್ರ್ಯ ಗಳಿಸಿದರೆ ನಮ್ಮ ಅನೇಕ ಸಮಸ್ಯೆಗಳನ್ನು ನಾವೇ ಸಮರ್ಥ ವಾಗಿ ಬಗೆಹರಿಸಿಕೊಳ್ಳಬಹುದು ಎಂಬುದೇ ಈ ಆಶಾಭಾವ ವಾಗಿತ್ತು. ಆದರೆ ಈಗ ಅದೂ ಕೂಡ ಭ್ರಮೆ ಏನೋ ಎನಿಸುತ್ತಿದೆ. ಈ ಇಂದ್ರಿಯಗಳ ಭೋಗದ ವಿಷಯದಲ್ಲಿ ಹಾಗೆಯೇ ಇಂತಹದು ಆದರೆ ಇಂತಹದು ಸಿಕ್ಕರೆ, ಇಂತಹದನ್ನು ತಿಂದರೆ, ಮುಗಿಯಿತು. ನಾನು ಅತ್ಯಂತ ತೃಪ್ತನಾಗಿ ಬಿಡುತ್ತೇನೆ ಎಂದುಕೊಳ್ಳುತ್ತೇವೆ. ಆದರೆ ಅಂದುಕೊಂಡ ಆಸೆ ಈಡೇರಿದ ಮೇಲೆ ಗೊತ್ತಾಗುತ್ತದೆ ಇದು ಆಸೆಯ ಅಂತ್ಯವಲ್ಲ ಇದು ಹೊಸ ಆಸೆಗಳ ಆರಂಭ' ಎಂದು. ಶರಣರು ಈ ನಿಟ್ಟಿನಲ್ಲಿ ಬಹಳವಾಗಿ ಚಿಂತನೆ ನಡೆಸಿದ್ದಾರೆ. ಇಂದ್ರಿಯಗಳ ಈ ಉಪಟಳವನ್ನು ಗೆದ್ದು ಅವುಗಳನ್ನೇ ಲಿಂಗೇಂದ್ರಿಯಗಳಾಗಿ ಪರಿವರ್ತಿಸುವ ಪರಮವಿದ್ಯೆಯನ್ನು ಕಂಡುಹಿಡಿದ್ದಾರೆ.

ತ್ಯಾಗದಿಂದ ಕೂಡಿದ ಭೋಗ ಸಾಧಕನನ್ನು ಯೋಗ ಮಾರ್ಗದೆಡೆಗೆ ಕರೆದುಕೊಂಡು ಹೋಗುತ್ತದೆ ಎಂಬುದನ್ನು ನೀವೀಗಾಗಲೇ ತಿಳಿದುಕೊಂಡಿದ್ದೀರಿ. ಈ ಸಾಧನೆಯನ್ನು ಮಾಡಲು ಶರಣರು ಕಂಡು ಹಿಡಿದ ಮಾರ್ಗವೇ ಷಟ್ ಸ್ಥಲ ಪಥ ಅಥವಾ ಜಾಣೆ ನಮ್ಮೆಲ್ಲರನ್ನೂ ಬೆರಗು ಗೊಳಿಸುತ್ತದೆ. ಆ ಮಾರ್ಗವನ್ನು ಸ್ಥೂಲವಾಗಿ ಹೀಗೆ ವಿಭಾಗಿಸಿದ್ದಾರೆ.

| | | |
|---|---|---|
| **ತ್ಯಾಗಾಂಗ** | **ಭೋಗಾಂಗ** | **ಯೋಗಾಂಗ** |
| **ಭಕ್ತಸ್ಥಳ** | **ಮಹೇಶ್ವರ ಸ್ಥಳ** | **ಪ್ರಸಾದಿ ಸ್ಥಳ** |
| **ಪ್ರಾಣಲಿಂಗಸ್ಥಳ** | **ಶರಣಸ್ಥಲ** | **ಐಕ್ಯಸ್ಥಳ** |

ಆದರೆ ಈಗ ನಮ್ಮ ಸ್ಥಿತಿ ಏನಾಗಿದೆ. ತ್ಯಾಗದ ಮಾತೇ ಇಲ್ಲ. ಎಲ್ಲಕ್ಕಿಂತ ಮೊದಲು ಭೋಗಕ್ಕೆ ಸ್ಥಾನ. ತಮಾಷೆಯಾಗಿ ನಮ್ಮ ಇಂದಿನ ಸ್ಥಲಗಳನ್ನು ಈ ರೀತಿಯಾಗಿ ವಿಭಾಗಿಸಿಕೊಳ್ಳಬಹುದು.

| | | |
|---|---|---|
| **ಗಳಿಕೆ ಸ್ಥಳ** | **ಭೋಗಾಂಗ** | **ಲಾಭಸ್ಥಳ** |
| **ಖರ್ಚುಸ್ಥಲ** | **ರೋಗಾಂಗ** | **ನರಳೋಸ್ಥಳ** |
| **ಗುಂಡಿಸ್ಥಳ** | **ಸಾವಾಂಗ** | **ಅಗ್ನಿಸ್ಥಲ** |

ನೋಡಿ ಶರಣರಿಗೂ ನಮಗೂ ಎಷ್ಟು ವ್ಯತ್ಯಾಸ.

ಹಾಗಾದರೆ ನಮ್ಮ ಬದುಕು ಹೀಗೇ ಮುಕ್ತಾಯ ವಾಗಬೇಕೆ? ಬೇರೆ ಪರಿಹಾರವೇ ಇಲ್ಲವೆ? ಖಂಡಿತಾ ಇದೆ. ಯಾರು ಬೇಕಾದರೂ ಯಾವ ಕಾಲದಲ್ಲಾದರೂ ಶರಣ ಭವ್ಯಮಾರ್ಗವನ್ನು ಅರ್ಥಮಾಡಿಕೊಂಡು ಅನುಸರಿಸಿ ಉದ್ಧಾರವಾಗಬಹುದು. ನಮಗಾಗಿಯೇ ಆ ಮಾರ್ಗವನ್ನು ನಿರ್ಮಿಸಿ ಬಿಟ್ಟು ಹೋಗಿದ್ದಾರೆ. ಆದರಿಷ್ಟೆ, ಆ ಮಾರ್ಗದಲ್ಲಿ ನಡೆಯಲು ದೃಢತೆ ಬೇಕಾಗುತ್ತದೆ. ದುಶ್ಚಟ ದುರ್ಗುಣ ದೌರ್ಬಲ್ಯಗಳನ್ನು ಶಿವಪ್ರೇಮದ ಅಗ್ನಿಕುಂಡದಲ್ಲಿ ಆಹುತಿ ಕೊಡಲು ಸಿದ್ಧರಾಗಿರಬೇಕು. ಆಗ ಮಾತ್ರ ಪರಮಾನಂದದ ಪ್ರಾಪ್ತಿ ಬಸವಣ್ಣನವರ ತ್ಯಾಗಾಂಗದ ಪರಿಯನ್ನು ನೋಡಿದ್ದೀರಿ. ಇಂದ್ರಿಯಗಳನ್ನು ಕೆಟ್ಟ ವಿಷಯಗಳಿಂದ ವಿಮುಖ ಮಾಡಿದ ಮೇಲೆ ಮುಂದೇನು?

ಬನ್ನಿ ಇಲ್ಲೊಬ್ಬ ಗಟ್ಟಿಗ ಶರಣ ಮಗ್ಗದ ಕುಳಿಯಲ್ಲಿ ಕುಳಿತುಕೊಂಡು: ಇಂದ್ರಿಯಗಳನ್ನು ಮೀಸಲು ಮಾಡುವ ಮಹಾನ್ ಮಂತ್ರವೊಂದನ್ನು ಮಗ್ಗದ ಯಂತ್ರದ ತಾಳಕ್ಕೆ ಅನುಸರಿಸಿ ಹಾಡುತ್ತಿದ್ದಾನೆ. ಕೇಳಿಸುತ್ತಿದೆಯೆ? ಇಲ್ಲ ಬಿಡಿ. ಇಷ್ಟೊಂದು ಗದ್ದಲದ ನಡುವೆ ಸುಮಾರು 900 ವರ್ಷಗಳಷ್ಟು ಹಳೆಯದಾದ ಮೆಲುದನಿಯ ಸುಮಧುರಗಾನ ನಿಮ್ಮ ಈ ಕಿವಿಗಳಿಗೆ ಎಲ್ಲಿ ಕೇಳಬೇಕು. ಆದರೂ ಕುತೂಹಲಿತರಾಗಿದ್ದೀರಿ ಅಲ್ಲವೆ? ನಿಮ್ಮ ಕಾತರ ಅರ್ಥವಾಗುತ್ತಿದೆ. ಯಾರು ಆ ಶರಣ? ಯಾವುದು ಆ ಮಂತ್ರ? ಮೀಸಲಾತಿಯ ಕಥೆ ಕೇಳಿ ಕೇಳಿ ಸಾಕಾಗಿರುವ ಈ ಕಿವಿಗಳಿಗೆ ಮತ್ತೆ ಅದಾವ ಮೀಸಲು ಮಹಾಮಂತ್ರ ಹೇಳಿ ಬೇಗ, ಹಾಂ! ಹಾಂ! ತಾಳ್ಮೆ ಇರಲಿ, ಅವಸರ ಮಾಡಿದರೆ ಮೀಸಲು ಕೆಟ್ಟು ಹೋಗುವ ಸಾಧ್ಯತೆ ಇರುತ್ತದೆ. ಸಾವಧಾನವಾಗಿ ಕೇಳಿ ಧನ್ಯರಾಗಿ ಈ ಮೀಸಲು ಮಹಾಮಂತ್ರವನ್ನು

**ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ**
**ಕಾಲು ಮೀಸಲು ಶಿವನ, ನಾಲಗೆ ಮೀಸಲು ಶಿವನ**
**ತನು ಮನವೆಲ್ಲಾ ಮೀಸಲು ಶಿವನ**
**ಈ ಮೀಸಲು ಬೆಸರವಾಗದಂತಿದ್ದರೆ ಆತನೇ**
**ಜಗದೀಶ ಕಾಣಾ ರಾಮನಾಥ**

ದಾಸಿಮಯ್ಯ ಶರಣರದು ಸಾಂಸಾರಿಕ ಜೀವನ ಒಂದು ಮೂಲದ ಪ್ರಚಾರ. ಅವರಿಗೆ ಒಬ್ಬ ಮಗನೂ ಇದ್ದನೆಂದು ಹೇಳಲಾಗಿದೆ. ಪರಮಾತ್ಮನಿಗೆ ಮೀಸಲು ಮಾಡುವುದು ಎಂದಾಕ್ಷಣ ನೀವು ಅರ್ಥ ಮಾಡಿಕೊಳ್ಳುವುದು ಏನು ಗೊತ್ತೆ ಹೆಣ್ಣನ್ನು ಕಣ್ಣೆತ್ತಿ ನೋಡಬಾರದು. ಹೊನ್ನನ್ನು ಚೇಳೆಂದು ಭಾವಿಸಬೇಕು. ಮಣ್ಣನ್ನು ಅಂದರೆ ಭೂಮಿ ಒಡೆತನವನ್ನು ಬಿಟ್ಟು ಕಾಡಿಗೆ ಓಡಬೇಕು. ಖಂಡಿತ ಹಾಗಲ್ಲ ಹಾಗೆ ಭಾವಿಸಿದರೆ ಶರಣ ಧರ್ಮ ನಮಗೆ ಅರ್ಥವೇ ಆಗುವುದಿಲ್ಲ.

ಇಲ್ಲಿ ಪರಮಾತ್ಮನಿಗೆ ನಮ್ಮ ತನುಮನಗಳನ್ನೆಲ್ಲಾ ಮೀಸಲು ಮಾಡುವುದು ಎಂದರೆ, ದೈವೀ ನಿಯಮಗಳನ್ನು ಅರ್ಥಮಾಡಿಕೊಂಡು ಪ್ರಸಾದ ಭಾವನೆಯಿಂದ ಬಳಸುವುದು.

ಪವಿತ್ರವಾದ ಈ ಪ್ರಸಾದ ಭಾವನೆಯಿಂದ ಪರಮಾತ್ಮನು ದಯಪಾಲಿಸಿರುವ ಸೃಷ್ಟಿಯು ಸಮಸ್ತ ವಸ್ತುಗಳನ್ನು ಹಿತವಾಗಿ ಮಿತವಾಗಿ ಬಳಸಿದರೆ ಯಾವ ಇಂದ್ರಿಯಗಳಾಗಲಿ ಮಾರಕವಾಗುವುದಿಲ್ಲ ಬದಲಾಗಿ ಶಿವತ್ವವನ್ನು ಸಾಧಿಸಿ ಕೊಡುವ ಮಂಗಳಕರ ಸಾಧನಗಳಾಗುತ್ತವೆ. ಇನ್ನೊಂದು ವಚನವನ್ನು ನೋಡೋಣ. ಪರಮಾತ್ಮನ ಪ್ರಸಾದ ಭೋಗದಲ್ಲಿ ನಿರತವಾಗಿ ಲಿಂಗದೇವನ ಚರಣ ಕಮಲದಲ್ಲಿ ದಿವ್ಯಾನಂದದ ಮಕರಂಧವನ್ನು ಹೀರುತ್ತಾ ಮೈಮರೆತ ಶಿವದುಂಬಿ ಬಸವಣ್ಣನವರ ಈ ಗಾನವನ್ನು ಕೇಳೋಣ.

**ವಚನದಲ್ಲಿ ನಾಮಾಮೃತ ತುಂಬಿ**
**ನಯನದಲ್ಲಿ ನಿಮ್ಮ ಮೂರುತಿ ತುಂಬಿ ಕಿವಿಯಲ್ಲಿ**
**ನಿಮ್ಮ ಕೀರುತಿ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ**
**ಕೂಡಲ ಸಂಗಮದೇವಾ ನಿಮ್ಮ ಚರಣ ಕಮಲದೊಳಗಾನು ತುಂಬಿ**

ವಾಕು, ಮನ, ಶ್ರವಣ, ನಯನಗಳಲ್ಲೆಲ್ಲಾ ಪರಮಾತ್ಮನನ್ನು ತುಂಬಿಕೊಂಡಿರುವ ಬಸವಣ್ಣ ಇದಂತೂ ನಿಮಗೆ ಇನ್ನೂ ಸೋಜಿಗವನ್ನುಂಟು ಮಾಡುತ್ತದೆ ಅಲ್ಲವೇ. ಗೃಹಸ್ಥರಾದ ದಾಸಿಮಯ್ಯ ಶರಣರು ತಮ್ಮ ದೇಹೇಂದ್ರಿಯಗಳನ್ನು ಶಿವನಿಗೆ ಮೀಸಲು ಮಾಡಿದರೆ, ಒಂದು ರಾಜ್ಯದ ಪ್ರಧಾನಮಂತ್ರಿ, ಲಕ್ಷ ಲಕ್ಷ ಜನರಿಗೆ ದಾಸೋಹನಡೆಸಿ ಸಾವಿರಾರು ಜನರ ಸಂಕಟಹರಿಸಿ ಸಮಾಜಸೇವೆ ಕಾಯಕಕೈಗೊಂಡ ಒಬ್ಬ ರಾಜಕೀಯ ಮುತ್ಸದ್ದಿ ಬಸವಣ್ಣನವರು ಯಾವುದೇ ಉದ್ವೇಗವಿಲ್ಲದೆ, ಒತ್ತಡಕ್ಕೊಳಗಾಗದೆ ಲಿಂಗಪ್ರಸನ್ನತೆಯ ಪರಮಾನಂದದಲ್ಲಿ ಓಲಾಡುತ್ತಿದ್ದಾರಲ್ಲ ಇದು ಪರಮಾಶ್ಚರ್ಯ! ಶರಣರಿಗೆ ಅದು ಸುಲಭ ಸಾಧ್ಯ.

**ಯೋಗಾಂಗ :** ಯೋಗ ಎಂಬ ಶಬ್ದ ನಿಮಗೆ ಅತ್ಯಂತ ಚಿರಪರಿಚಿತವಾದದ್ದು. ಓಹೋ ನಾವೂ ಬೇಕಾದಷ್ಟು ಯೋಗ ಮಾಡಿದ್ದೇವೆ ಬಿಡಿ. ಅವೇ ಮಾಸನ, ಕೂರ್ಮಾಸನ, ಮಕರಾಸನ, ಭುಜಂಗಾಸನ ಇನ್ನೂ ಏನೇನೋ ಪ್ರಾಣಿಗಳ ಹೆಸರು ಹೇಳಿಕೊಂಡು ಅವುಗಳ ಭಂಗಿಯನ್ನು ಮಾಡಿದ್ದೇವೆ. ಗುರುಗಳಿರುವ ತನಕ ಮಾಡಿ, ಆಮೇಲೆ ಬಿಟ್ಟು, ಆನಂದವಾಗಿ ಮಲಗಿ ಮತ್ತೆ ಮೈ ಜಡ ಮಾಡಿಕೊಂಡು ಈ ಯೋಗಾಸನಗಳೆಲ್ಲಾ ನಮಗಲ್ಲಾ ಎಂದು ಶಾಶ್ವತವಾಗಿ ಬಿಟ್ಟು ಬಿಡುವ ಸಂಕಲ್ಪವನ್ನು ಮಾಡಿದ್ದೇವೆ. ಅದೇ ತಾನೇ ನೀವು ಹೇಳುವುದು ಯೋಗಾಂಗ ಎಂದು. ಅದರ ಬಗ್ಗೆಯೇ ಹೇಳುವುದಾದರೆ ಸಾಕು ನಿಲ್ಲಿಸಿ ಎನ್ನುತ್ತೀರಾ?

**ಮದ್ದನರೆದು ಫಲವೇನು**
**ಪ್ರಯೋಗಿಸಿಕೊಂಡಲ್ಲದೆ**
**ರೋಗ ಮಾಣದು**

**–ಅಲ್ಲಮಪ್ರಭು**

ಕೇವಲ ಮದ್ದನ್ನು ತಯಾರಿಸಿದ ಮಾತ್ರಕ್ಕೆ ರೋಗ ಗುಣವಾಗುವುದಿಲ್ಲ. ಅದನ್ನು ಸರಿಯಾಗಿ ಬಳಸಿದಾಗ ಮಾತ್ರ ರೋಗ ನಿವಾರಣೆಯಾಗುತ್ತದೆ. ಅಂತೆಯೇ (ಅರಿವನ್ನು ಪಡೆದ ಮಾತ್ರಕ್ಕೆ) ವಿದ್ಯೆಯನ್ನು ಕಲಿತ ಮಾತ್ರಕ್ಕೆ ವ್ಯಕ್ತಿಯ ಬದುಕು ಉತ್ತಮಗೊಳ್ಳುವುದಿಲ್ಲ. (ಪಡೆದ ಅರಿವಿನಿಂದ) ಕಲಿತ ವಿದ್ಯೆಯಿಂದ ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವಂತಾದಾಗ ಮಾತ್ರ ವ್ಯಕ್ತಿಗೆ ಮತ್ತು ಸಮಾಜಕ್ಕೆ ಒಳಿತಾಗುತ್ತದೆ.

***

**ಮಂಡೆಯ ಬೋಳಿಸಿಕೊಂಡು**
**ಮಡಿದು ಗೋಸಿಯ ಕಟ್ಟಿದಡೇನು**
**ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ**
**ಭಂಡರನೊಲ್ಲನೆಮ್ಮ ರಾಮನಾಥ.**

**–ಜೇಡರ ದಾಸಿಮಯ್ಯ**

ತಲೆಯ ಕೂದಲನ್ನು ಬೋಳಿಸಿಕೊಂಡು, ಶರೀರದ ಮೇಲೆ ಉಟ್ಟಿರುವ ಬಟ್ಟೆಯೆಲ್ಲವನ್ನೂ ಕಳಚಿ, ಲಂಗೋಟಿಯನ್ನು ಕಟ್ಟಿಕೊಂಡ ಮಾತ್ರಕ್ಕೆ ವ್ಯಕ್ತಿಯ ನಡೆನುಡಿಯಲ್ಲಿ ಯಾವುದೇ ಬದಲಾವಣೆಯು ಉಂಟಾಗುವುದಿಲ್ಲ. ಏಕೆಂದರೆ ಇಂತಹ ಲಂಗೋಟಿ ಉಡುಗೆಯ ವ್ಯಕ್ತಿಯು ತನ್ನನ್ನು ತಾನು ಸರ್ವಸಂಗ ಪರಿತ್ಯಾಗಿ, ಯಾವುದೇ ಕಾಮನೆಗಳಿಲ್ಲದವನು ಎಂಬುದನ್ನು ಸಮಾಜದಲ್ಲಿ ತೋರಿಸಿಕೊಳ್ಳುವುದಕ್ಕಾಗಿ ಬಹಿರಂಗದಲ್ಲಿ ಮಾಡಿಕೊಂಡಿರುವ ಬದಲಾವಣೆಯೇ ಹೊರತು, ಅವನ ಅಂತರಂಗದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ವ್ಯಕ್ತಿಯು ತನ್ನ ದೇಹ ಮತ್ತು ಮನಸ್ಸನ್ನು ಒಗ್ಗೂಡಿಸಿ ಕಾಯಕವನ್ನು ಮಾಡಿ, ತನ್ನ ಅನ್ನವನ್ನು ತಾನು ಗಳಿಸಿ, ಸ್ವಾವಲಂಬಿಯಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳದೆ, ಇತರರ ಮುಂದೆ ಅಂಗಲಾಚಿ ಬೇಡುವುದು ನಾಚಿಕೆಗೇಡಿನ ಬದುಕಾಗುತ್ತದೆ. ದುಡಿದು ತಿನ್ನದ ಮಯ್ಯಗಳ್ಳರನ್ನು ದೇವರು ಮೆಚ್ಚುವುದಿಲ್ಲ. **ಉಮಾದೇವಿ .ಪಿ.,** ತುಮಕೂರು

# 'ಸಿದ್ದರಾಮರ ಕಾಯಕ ಮತ್ತು ಕೃಷಿ ಪ್ರಜ್ಞೆ'

ವಚನಕಾರ ಸಿದ್ದರಾಮರ ಲೋಕ ಸಂದೇಶಗಳಲ್ಲಿ ಕಾಯಕ ತತ್ವವೂ ಒಂದು. ಕಾಯಕದಲ್ಲಿ ಕೃಷಿ ಪ್ರಜ್ಞೆಯನ್ನು ಕೂಡ ಇವರ ವಚನಗಳಲ್ಲಿ ನಾವು ಕಾಣಬಹುದು. ಶರಣ ಸಾಹಿತ್ಯದಲ್ಲಿ ಸಿದ್ದರಾಮರ ವಚನಗಳಿಗೆ ಬಹು ಮಹತ್ವವಿದೆ. ಅವರ ಈ ಕೆಲವು ವಚನಗಳು ಕಾಯಕ ನಿಷ್ಠೆ ಮತ್ತು ಕೃಷಿ ಪ್ರಜ್ಞೆಗೆ ಹಿಡಿದ ಕನ್ನಡಿ ಆಗಿವೆ.

**ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿಇನ್ನೆಂತೋ**
**ಬೇಯದ ಅಶನವನುಂಬ ತಾವಾವುದು**
**ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ**

ಕಾಯಕವೆಂದು ಕಾಯವ ಬಳಲಿಸದೆ ತನು ಕರಗದೆ ಮನವ ನೋಯಿಸದೆ ಬೇಡಿ ಕಾಡಿ ಮಾಡುವುದು ದಾಸೋಹವೇ?

**ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ**
**ಚಿತ್ತ ಶುದ್ಧದಲ್ಲಿ ಬಂದುದಕ್ಕೆ ಸರಿ ಹೊಂದದು**
**ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ**

**ಆಲಸ್ಯವೇಕಯ್ಯ ಆರಾರ ಕೆಡಿಸದ್ಯೆ**
**ಧ್ಯಾನರೂಢನಾಗು ಗುರು ಕರುಣದಿಂ**
**ಆಲಸ್ಯ ಕಿಂಚಿತ್ತು ಅಳವಟ್ಟಿತಾದರೆ**
**ಮಾಯೆ ಮಠವೆನ್ನದನು ಯೋಗಿನಾಥ....**

**ಆನುಗೊಂಬಿನಿತು ಕಾಯಕಂ ನಡೆಯುತ್ತಿರಬೇಕು**
**ನಿರ್ಮಲ ಕರ್ಮವದು ಸದ್ಗತಿಗೆ ಸಾಧನೆ ನೋಡಾ**
**ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನೆ ನೋಡಾ**
**ನಿರ್ಮಲ ಕರ್ಮವದು ಕಪಿಲಸಿದ್ಧ ಮಲ್ಲಿಕಾರ್ಜುನನ**
**ಕೂಡುವ ಕೂಟ ನೋಡಾ**

**ಧರೆ ಇಲ್ಲದೆ ಬೆಳೆಯಬಹುದೇ ಧಾನ್ಯವಾ**
**ಮಳೆ ಇಲ್ಲದೆ ನೋಡಬಹುದೇ ಬೆಳೆಗಳ**
**ನಮ್ಮ ಕಪಿಲಸಿದ್ಧಮಲ್ಲನ ನೋಡುವಡೆ**
**ಲಿಂಗ ಪೂಜೆ ಜಂಗಮ ದಾಸೋಹವೇ ಬೇಕು**

ಕೃಷಿಕ ಅನ್ನದಾತ. ಸರ್ವರ ಪ್ರಾಣ ದಾತ. ಇಂತಹ ಕೃಷಿಕ ತನ್ನತನ ಮರೆತರೆ ಲೋಕದ ಹಸಿವು ನೀಗುವುದೆಂತು. ಕಾಯಕ ವೆಂಬುದು ನಿರ್ಮಲ ಸುಚಿತ್ತಕ್ಕೆ ಕಾರಣ ಎಂಬ ಅಂಶವನ್ನು ಸಿದ್ದರಾಮರು ಸ್ಪಷ್ಟ ಪಡಿಸಿದ್ದಾರೆ. ಸಿದ್ದರಾಮರು ನೀರಾವರಿ ಇಲಾಖೆಯ ತಜ್ಞರು. ಅಂದರೆ ಜಲ ತಜ್ಞರು. ಕೃಷಿ ಬದುಕಿನ ಜೀವನಾಡಿ ಅರಿತ್ತಿದ್ದ ಸಿದ್ದರಾಮರು ಕೆರೆಕಟ್ಟೆ ಬಾವಿಗಳನ್ನು ನಿರ್ಮಿಸಿದರು. ಕಾಯಕದ ಮೂಲಕ ಸ್ವಾವಲಂಬಿ ಬದುಕಿಗೆ ಕರೆಕೊಟ್ಟ ಕೃಷಿ ತಜ್ಞರಾದರು.




**ಸುಶೀಲ ಸೋಮಶೇಖರ್**
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084


ಸಿದ್ದರಾಮರದು ಕರ್ಮ ಯೋಗವನ್ನು ತಿರಸ್ಕರಿಸದೆ ಶಿವಯೋಗದ ಫಲವನ್ನು ಪಡೆದು ಕರ್ಮ ಮತ್ತು ಶಿವಯೋಗವೆರಡಕ್ಕು ಮಾನ್ಯತೆ ನೀಡಿದರು. ಕಾಯಕದಲ್ಲಿ ನಿರತರಾಗುವುದರಿಂದ ಜಡತ್ವ ಸೋಮಾರಿತನವು ಇನ್ನಿಲ್ಲ ವಾಗುತ್ತದೆ.

ಸಿದ್ದರಾಮರು ಕಾಯಕವೆಂಬ ತಾರಕ ಮಂತ್ರವನ್ನು ಸರ್ವರಿಗೂ ತಿಳಿಸಿದ್ದಾರೆ. ಕ್ರಿಯಾಶೀಲತೆ ಸರ್ವರ ಏಳ್ಗೆಗೂ ಕಾರಣವಾಗುತ್ತದೆ. ಕಾಯಕ ಶ್ರೇಷ್ಠತೆಯನ್ನು ಅರಿತ ಬದುಕು ವ್ಯಷ್ಠಿ ಸಮಷ್ಠಿಯನ್ನು ಊರ್ಧ್ವಮುಖಿಯಾಗಿಸುತ್ತದೆ. ಶರಣರು ಮಣ್ಣಿನ ಸಂಸ್ಕೃತಿಯಿಂದ ಬಂದವರು. ಸ್ವಾವಲಂಬಿ ಬದುಕನ್ನು ನಡೆಸುವವರೇ ನಿಜ ಶರಣರು. ಕಾಯಕ ನಿಷ್ಕ್ರೀಯತೆ ಸುಗಮ ಬದುಕಿಗೆ ಅಡ್ಡಿಯನ್ನುಂಟು ಮಾಡುತ್ತದೆ. ಆಲಸ್ಯವೆಂಬುದು ದೊಡ್ಡ ಶತ್ರು.

ಜೀವಂತಿಕೆಯ ಕುರು ಹಾಗಿರುವ ಹಸಿವೆಯನ್ನು ಹೇಗೇಗೋ ತೀರಿಸಿಕೊಳ್ಳುವುದಲ್ಲ. **'ಅನ್ನಂ ಬ್ರಹ್ಮೇತಿ ವ್ಯಜನಾತ್'** ಎನ್ನುತ್ತಾರೆ. ಅನ್ನ ನೀಡುವ ಕೃಷಿಯೇ ಮೂಲ ಭೂತ ವೃತ್ತಿ. ಅನ್ನದಿಂದಲೇ ಹಸಿವನ್ನು ಹಿಂಗಿಸಿಕೊಳ್ಳಬೇಕು. ಗ್ರಾಮೀಣ ಬದುಕಿನ ಬಗ್ಗೆ ಅವರಿಗೆ ಕಾಳಜಿ ಇತ್ತು.

ಮಣ್ಣಿಲ್ಲದೆ ಜೀವವಿಲ್ಲ. ಭೂಮಿಯ ಬಿಟ್ಟು ಜಗವಿರಲು ಸಾಧ್ಯವಿಲ್ಲ. ಆದರೆ ಹವಾಮಾನದ ಏರುಪೇರು ಪ್ರಕೃತಿಯ ಕ್ರೌರ್ಯತೆಗಳು ಮಾನವ ನಿರ್ಮಿತ ಭೂ ಕೊರೆತದಿಂದ ಪರಿಸರವೇ ಹಾಳಾಗುತ್ತಿದೆ. ವೈಜ್ಞಾನಿಕ ಸಾಧನೆಗಳ ನೆಪದಲ್ಲಿ ಭೂಮಿಯನ್ನು ಬರಡು ಮಾಡುತ್ತಿದ್ದಾರೆ. ಕಾಯಕದ ಫಲದಿಂದ ಬಹಿರಂಗ ಶುದ್ಧಿಯಾದಂತೆ ಅಂತರಂಗ ಶುದ್ಧಿಗೂ ಕರ್ಮವೇ ಮೂಲ. ಕೃಷಿ ಕಾಯಕದಿಂದ ಬಂದ ಪದಾರ್ಥ ಪ್ರಸಾದವಾಗುತ್ತದೆ. ಆವಕಾಯಕವಾದಡೂ ಸ್ವ ಕಾಯಕದ ಸಿದ್ಧಾಂತವನ್ನು ಸಿದ್ದರಾಮರು ಪ್ರತಿಪಾದಿಸುತ್ತಾರೆ. ಬಾಹ್ಯದ ಕಾಯಕದಲ್ಲಿ ಅಲೌಕಿಕಾನುಭವ ಕಂಡವರು ಸಿದ್ದರಾಮರು.

ಕಾಯಕ ಮಾಡುವಾಗ ದೇಹದ ಅಂಗಾಂಗಗಳನ್ನು ಬಳಸುತ್ತೇವೆ. ಇದರಿಂದ ಶರೀರದಲ್ಲಿ ಶ್ರಮದಾಯಕ ಗುಣ ಬೆರೆತಿರುತ್ತದೆ. ಶ್ರಮಿಸುವಾಗ ತನು ಮನ ಒಂದಾಗುತ್ತದೆ. ಅದು ನಿಷ್ಕಾಮ ಶ್ರಮವೇ ಸರಿ. ತನುವನ್ನು ಕರಗಿಸದೆ ಮನವನ್ನು ನೋಯಿಸದೆ ಅನ್ಯರಲ್ಲಿ ಕಾಡಿಬೇಡಿ ತಂದ

ಪದಾರ್ಥ ಪ್ರಸಾದವೇಗಾದೀತು? ಅದು ದಾಸೋಹಕ್ಕೆ ಅರ್ಹವಲ್ಲ. ಅನ್ಯರದಕ್ಕೆ ಆಶಿಸದೆ ಮನ ಶುದ್ಧಿಯಿಂದ ಮಾಡಿದ, ಸ್ವ ಪರಿಶ್ರಮದಿಂದ ತಂದ ಪದಾರ್ಥ ಪ್ರಸಾದವೆನಿಸಿ ದಾಸೋಹಕ್ಕೆ ಬಳಕೆಯಾಗುತ್ತದೆ.

ಇಂತಹ ದಾಸೋಹ ಮಲ್ಲಿಕಾರ್ಜುನನಿಗೆ ಒಪ್ಪಿತವಾಗುತ್ತದೆ. ಆ ದೇವನು ಕೂಡ ಕಾಯಕದಲ್ಲಿ ಸನ್ನಿಹಿತನಾಗಿರುತ್ತಾನೆ ಎನ್ನುತ್ತಾರೆ ಸಿದ್ದರಾಮರು.

**ಕಾಯ ಸೋನೆಯರಿತಲ್ಲದೆ**
**ಹಣ್ಣಿನ ರಸ ಚಿನ್ಹೆದೋರದು**
**ಕಾಯ ಕರ್ಮವ ಮಾಡಿ ಜೀವ ಜ್ಞಾನವರಿದು**
**ತ್ರಿವಿಧ ಭಾವಶುದ್ಧಿಯಾದಲ್ಲದೆ ಮೇಲೆ ಕಾಣಲಿಲ್ಲ**
**ಕಪಿಲಸಿದ್ಧ ಮಲ್ಲಿಕಾರ್ಜುನ**

ಬೇರಿಟ್ಟು ಚಿಗುರೊಡೆದ ಗಿಡ ವೊಂದು ಕೊಂಬೆ ಕೊಂಬೆಗಳ ತೂಗಿ ಹೂವು ಈಚು ಕಾಯಿ ನೀಡುತ್ತದೆ. ಆ ಕಾಯಿಯ ಸೋನೆ ಹಿಂಗಿದ ನಂತರವೇ ಹಣ್ಣಾಗುತ್ತದೆ. ನಂತರ ಹಣ್ಣಿನ ರಸ ಒಡೆಯುತ್ತದೆ. ಅಂತೆಯೇ ಈ ನಮ್ಮ ಶರೀರವನ್ನು ಶ್ರಮಿಕ ತನಕ್ಕೆ ಒಡ್ಡಿ ಕಾಯಕ ಧರ್ಮ ಆಚರಿಸಿ ತನ್ನ ಆತ್ಮದೊಳಗೆ ಇರುವ ಜೀವ ಜ್ಞಾನವನ್ನು ತಿಳಿದಾಗ ಅಂತರಂಗ ದಾನಂದ ದೊರೆಯುತ್ತದೆ. ಅಂತರಂಗದ ಭಾವಗಳು ಶುದ್ಧವಾದಾಗ ಕಪಿಲಸಿದ್ಧಮಲ್ಲಿಕಾರ್ಜುನ ನಮಗೆ ಗೋಚರಿಸುತ್ತಾನೆ.

ಕಾಯಕದಲ್ಲಿ ಮೇಲು ಕೀಳು ಎಂಬ ಭಾವನೆ ಇಲ್ಲ. ಮಾಡುವ ಕಾಯಕದಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆ ಇದ್ದರೆ ಅದೇ ಸದ್ಗತಿಗೆ ಕಾರಣವಾಗುತ್ತದೆ. ಇದು ಶಿವನ ಸದರಿಗೆ ಮುಟ್ಟುತ್ತದೆ. ಆಲಸ್ಯ ಅಥವಾ ಸೋಮಾರಿತನ ಎಂಬುದು ವ್ಯಕ್ತಿ ಮತ್ತು ಸಮಾಜದ, ದೇಶದ ಪ್ರಗತಿಗೆ ಕುಂಠಿತವಾಗುತ್ತದೆ. ಕರ್ಮ ಮಾರ್ಗದ ಮೂಲಕ ಮಲ್ಲಿಕಾರ್ಜುನನನ್ನು ಮುಟ್ಟುವ ಪರಿಯನ್ನು ಅರಿಯಬಹುದೆಂಬ ತಾತ್ವಿಕ ಚಿಂತನೆ ವಚನಕಾರ ಸಿದ್ದರಾಮರದು. ಕಾಯಕದ ವಿಶೇಷತೆ ಎಂದರೆ ಜಗದ ಜಡತ್ವವನ್ನು ಹೋಗಲಾಡಿಸುವುದು. ಜಗದ ಆರ್ಥಿಕ ಸ್ಥಿತಿಯನ್ನು ಕಾಯಕವು ಸುಧಾರಿಸುತ್ತದೆ. ಸ್ವತಂತ್ರ ಸಮಾಜ ನಿರ್ಮಾಣವಾಗುತ್ತದೆ. ಆತ್ಮ ತೃಪ್ತಿ ಆತ್ಮಾನಂದ ದೊರೆಯುತ್ತದೆ. ಆರ್ಥಿಕ ಗಳಿಕೆಯ ಮಾರ್ಗವೇ ಕೇವಲ ಲೌಕಿಕವಲ್ಲ. ಅದು ಅಲೌಕಿಕತೆಗೂ ಮೂಲ. ಕಾಯಕವೇ ಧರ್ಮವಾಗುತ್ತದೆ. ಕಾಯಕವೇ ಪೂಜೆ ಅನಿಸುತ್ತದೆ. ದುಡಿಮೆಯೇ ದೇವರು ಎನಿಸಿ, ದೇಶದ ಉದ್ಧಾರಕ್ಕೆ ಮುಖ್ಯ ತತ್ವವಾಗುತ್ತದೆ. ಕರ್ಮ ಕೌಶಲ್ಯ ಸರ್ವರ ಸಂಪತ್ತಾಗುತ್ತದೆ. ಕರ್ಮ ಮಾರ್ಗವೆಂಬುದು ವ್ಯಕ್ತಿಗತವಾದರೂ ಸಮಷ್ಠಿ ಹಿತ ಬಯಸುವಂತದ್ದು. ವ್ಯಕ್ತಿಗತ ಪ್ರಜ್ಞೆಯು ಸಾಮಾಜಿಕ ಪ್ರಜ್ಞೆಯು ಹೌದು. ವ್ಯಕ್ತಿಗಿಂತ ಸಮಾಜ ದೊಡ್ಡದು. ಆದರೂ ವ್ಯಕ್ತಿಗಳಿದ್ದರೆ ಸಮಾಜ ಸೃಷ್ಟಿ. ವ್ಯಕ್ತಿಯ ಕಾಯಕ ನಿಷ್ಠೆ ಸಾಮಾಜಿಕ ನಿಷ್ಠೆಯು ಹೌದು. ಸಾಮಾಜಿಕ ಹಿತದಲ್ಲಿ ವ್ಯಕ್ತಿಯ ಹಿತ ಅಡಗಿರಬೇಕೆ ಹೊರತು ಸ್ವಾರ್ಥದ ಲೇಪವಿರಬಾರದು. ಕಾಯಕವೆಂಬುದು ವ್ಯಕ್ತಿ ಮತ್ತು ಸಮಾಜ ಎರಡನ್ನು ಅವಲಂಬಿಸಿದೆ.

ಆದರಿಂದು ಸಾಮಾಜಿಕ ಬದುಕಿನಲ್ಲಿ ಅವ್ಯವಸ್ಥೆಯ ಹಂದರ ಹಬ್ಬುತ್ತಿದೆ. ಆಸೆ ಎಂಬ ಪಾಶದಲ್ಲಿ ಸಿಲುಕಿದವರು ಅನ್ಯಾಯದ ದುಡಿಮೆಗೆ ತೊಡಗಿದ್ದಾರೆ. ಲಂಚತನವೆಂಬ ಹಗಲು ದರೋಡೆ ಎಗ್ಗಿಲ್ಲದೆ ಸಾಗುತ್ತಿದೆ. ಈಗಿನ ಬದುಕಿಗಲ್ಲದೆ ಹತ್ತು ತಲೆಮಾರಿನವರು ಕುಳಿತು ತಿನ್ನಬಹುದಾದ ಅರ್ಥ ವ್ಯವಸ್ಥೆಯನ್ನು ಸ್ವಾರ್ಥತನದಿಂದ ತಮ್ಮದಾಗಿಸಿ ಕೊಂಡಿರುವ ಅಧಿಕಾರದ ಬಲ, ಜನಬಲ ಉಳ್ಳವರು ಇದ್ದಾರೆ. ಇಂತಹವರ ನಡುವೆ ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿರುವವರು ಇದ್ದಾರೆ. ಇಲ್ಲಿ ಈ ಎರಡು ವರ್ಗದವರು ಕಾಯಕದ ನಿಜ ತತ್ವವನ್ನು ಅರಿಯುವಲ್ಲಿ ಉಳ್ಳವರು ಇತರರಿಗೆ ಹಂಚುವಲ್ಲಿ ಸರ್ವ ಸಮಾನತೆ ತಾನಾಗಿಯೇ ಬರುತ್ತದೆ. ಆರ್ಥಿಕವಾಗಿ ಇರುವ ಮೇಲು ಕೀಳುತನ ತನಗೆ ತಾನೇ ದೂರಾಗುತ್ತದೆ. ಇಲ್ಲೆಲ್ಲ ತಮ್ಮ ತಾವು ಅರಿಯುವುದೇ ಮುಖ್ಯವಾಗುತ್ತದೆ.

ಈ ತಾಂತ್ರಿಕ ಯುಗದಲ್ಲಿ ಅನೇಕ ಬದಲಾವಣೆಗಳಾಗಿವೆ. ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರತಿಫಲ ಪಡೆಯುವ ಕಾತುರತೆ ಇದೆ. ನಿಷ್ಕಾಮ ಕರ್ಮದ ಹಾದಿಯನ್ನು ಬಿಟ್ಟು ಅನ್ಯಮಾರ್ಗ ಹಿಡಿಯುತ್ತಿರುವುದು ವಿಷಾದನೀಯ. ಪರಾವಲಂಬಿ ಬದುಕನ್ನು ಸಾಗಿಸುವವರು ಇದ್ದಾರೆ. ಕಳ್ಳತನ ದರೋಡೆಗಳನ್ನು ಮಾಡುವ ನಿಟ್ಟಿನಲ್ಲಿ ಹಲವರು ಸಾಗಿರುವುದು ಸುದ್ದಿ ವಾಹಿನಿಗಳಿಂದ ನಿತ್ಯವೂ ತಿಳಿದು ಬರುತ್ತಿದೆ. ಇಂತಹ ಮನಸ್ಸುಗಳಿಗೆ ಸಿದ್ದರಾಮರ ಕಾಯಕ ಚಿಂತನೆ ರಾಮಬಾಣ ವಿದ್ದಂತೆ.

ಪ್ರಸ್ತುತದಲ್ಲಿ ಕೃಷಿ ಕ್ಷೇತ್ರ ಕೂಡ ತನ್ನ ಮೂಲತನವನ್ನು ಕಳೆದುಕೊಳ್ಳುತ್ತಿದೆ. ದುರ್ಬಲವಾಗುತ್ತಿದೆ. ತಮ್ಮ ಭೂಮಿಯ ಮಣ್ಣಿನ ಬೆಲೆ ಅರಿಯುವುದನ್ನು ಕ್ರಮೇಣ ಮರೆತಿದ್ದಾರೆ. ಪ್ರಾಕೃತಿಕವಾಗಿಯೂ ಅನೇಕ ಸಮಸ್ಯೆಗಳು ಕಂಡು ಬರುತ್ತಿವೆ. ಭೂಮಿಯ ಮಣ್ಣು ಸವಕಲಾಗುತ್ತಿದೆ. ಅಕಾಲಿಕ ಮಳೆಯಿಂದ ಬೆಳೆ ನಾಶದ ಪರಿಣಾಮ ಶ್ರಮಕ್ಕೆ ತಕ್ಕ ಬೆಲೆ ಸಿಗದೆ ರೈತರು ಕಂಗಾಲಾಗುತ್ತಿದ್ದಾರೆ. ರೈತರು ಬೀಜ ಗೊಬ್ಬರ ಔಷಧಿಗೆ ಸರ್ಕಾರವನ್ನೇ ಬಹುಮಟ್ಟಿಗೆ ನಂಬಿದ್ದಾರೆ. ಸಾವಯವ ಕೃಷಿಕರ ಸಂಖ್ಯೆ ಅತ್ಯಂತ ವಿರಳವಾಗುತ್ತಿದೆ. ನಾಟಿ ಹಸು, ಕರು, ಎಮ್ಮೆ ಮಾಯವಾಗುತ್ತಿವೆ. ನಮ್ಮ ಹಿರಿಯರು 'ಬಣವೆ ನೋಡಿ ದನ ಕೊಡು, ಅನ್ನ ಇರೋ ಮನೆಗೆ ಹೆಣ್ಣು

**48ನೇ ಪುಟಕ್ಕೆ**

# ನೊಳಂಬ ರಾಣಿ ಚಾಮಲಾದೇವಿ

ಸೊಲ್ಲಾಪುರ ಪ್ರಾಂತ್ಯದ ಮಹಾರಾಣಿ ಚಾಮಲಾದೇವಿ ನೊಳಂಬ ಅಡಳಿತ ಸಾಮ್ರಾಜ್ಯದ ಇತಿಹಾಸದಲ್ಲಿ ಕಂಡು ಬರುವ ಬಹು ಪ್ರಮುಖವಾದ ಹೆಸರು. ಈಕೆ ರಾಣಿಯಾಗಿ ಅಷ್ಟೇ ಅಡಳಿತ ಮಾಡದೆ, ವಚನಧರ್ಮ ಸಂರಕ್ಷಳಾಗಿ ನೊಳಂಬ ರಾಜರ ಪುನರ್ ಏಳಿಗೆಗೆ ಕಾರಣಳಾಗಿ, ಶ್ರೀ ಗುರು ಸಿದ್ಧರಾಮನ ಪರಮ ಭಕ್ತೆಯಾಗಿ, 'ನೊಳಂಬ' ಎನ್ನುವ ಒಂದು ಸಮುದಾಯದ ಹುಟ್ಟು, ಬೆಳವಣಿಗೆಗೆ ತನ್ನ ಅಮೂಲ್ಯವಾದ ಕೊಡುಗೆಯನ್ನು ನೀಡಿದ ಮಹಾರಾಣಿ ಚಾಮಲಾದೇವಿ ಹೆಚ್ಚು ಪ್ರಸಿದ್ಧಳಾಗಿದ್ದಾಳೆ.

ಇತಿಹಾಸಕಾರರು ಈಕೆಯ ಪಾತ್ರ ನೊಳಂಬ ಇತಿಹಾಸದಲ್ಲಿ ಬಹು ಪ್ರಮುಖವಾದದ್ದು ಎಂದು ಚಾಮಲಾದೇವಿಯನ್ನು ಒಪ್ಪುತ್ತಾರೆ. ಇದಕ್ಕೆ ಬಹು ಪ್ರಮುಖವಾದ ಮಾಹಿತಿ ರಾಘವಾಂಕ ಕವಿಯ 'ಶ್ರೀ ಸಿದ್ಧರಾಮಚಾರಿತ್ರ'ದಲ್ಲಿ ಚಾಮಲಾದೇವಿಯ ಬಗ್ಗೆ ನಮಗೆ ಅನೇಕ ವಿವರಣೆಗಳು ಲಭ್ಯವಾಗುತ್ತದೆ. ರಾಘವಾಂಕ ಸಿದ್ಧರಾಮ ಚಾರಿತ್ರವನ್ನು ಬರೆದ ಕಾಲ ಸಿದ್ಧರಾಮ ಬದುಕಿದ ಕಾಲ ಬಹಳ ಹತ್ತಿರವಾಗಿದ್ದವು ಅದ್ದರಿಂದ ರಾಘವಾಂಕ ಕವಿಯ ಮಾಹಿತಿ ಪೂರ್ಣವಾದ ಸಿದ್ಧರಾಮ ಚಾರಿತ್ರವನ್ನು ಆಕಾಲದ ಪ್ರಮುಖ ದಾಖಲೆಯೆಂದೇ ಪರಿಗಣಿಸಬಹುದು. ಇಲ್ಲಿ ಬರುವ ಎಲ್ಲಾ ಘಟನೆಗಳು, ಪಾತ್ರಗಳು ನೈಜತೆಗೆ ಬಹು ಹತ್ತಿರವಾಗಿದೆ. ಕವಿ ತನ್ನ ಕಲ್ಪನೆಯಿಂದ ಅದಕ್ಕೆ ಸುಂದರವಾದ ರೂಪವನ್ನು ಕೊಟ್ಟಿದ್ದರೂ, ಎಲ್ಲವೂ ಕಲ್ಪನೆಯೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಇತಿಹಾಸ, ಚರಿತ್ರೆಯ ಅವಲೋಕನದಲ್ಲಿ ನಮಗೆ ಶಾಸನಗಳು ಮುಖ್ಯ ಆಧಾರವಾಗಿರುತ್ತದೆ. ಇಲ್ಲವಾದಲ್ಲಿ ಆ ಕಾಲದಲ್ಲಿ ರಚನೆಯಾದ ಕೃತಿಗಳನ್ನು ಆಧಾರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ರಾಘವಾಂಕನ ಸಿದ್ಧರಾಮ ಚಾರಿತ್ರದ ಮೂರನೆಯ ಸಂಧಿಯ **38, 39, 40 ಪದ್ಯದಲ್ಲಿ ಚಾಮಲಾದೇವಿಯನ್ನು ಕುರಿತ ಈ ರೀತಿಯಲ್ಲಿ ಹೇಳಿರುವುದು ಗಮನಿಸಬೇಕಾದ ಮಹತ್ವದ ದಾಖಲೆಯಾಗಿದೆ.**

**38, 'ರಾಗದಿಂ ನಿನ್ನ ಸೊನ್ನಲಿಗೆಯಂಥರೆಯರಿಯೆ**
**ಯೋಗರಮಣೀಯ ಸುಕ್ಷೇತ್ರಮಂ ಮಾಡುವೆಂ**
**ಹೋಗೆಂದುಕಂದನಂ ಕಳುಹಿ ಪಲಕೆಲವು**
**ದಿನವಾಯ್ತೆಂದು ನೆನೆದು ಹರನು**
**ಬೇಗದಿಂ ನಡೆದು ಬಂದಾಪೂರೊಳುರವವಿಭು**
**ವಾಗಿಪ್ಪ ನನ್ನಪ್ಪನರಸಿ ಚಾಮಲದೇವಿ**
**ನಾಗಳಂತೇ ಕನಸಿನೊಳು ಮನದ ಮೊನೆಯ ಮೇಲಿರ್ದ**
**ಬಳಿಕಿಂತೆಂದನು'**
**39, 'ಚಾಮವ್ವೆ ಮಗಳೆ ನಿನ್ನೂರೊಳೊಂದುಕ್ರೋಶ**
**ಭೂಮಿಯಂ ಸಿದ್ಧರಾಮಂಗೆ ಕೊಡುಕೊಟ್ಟಡಭಿ**
**ರಾಮದಿಂದೆಮಗೆ ಪುರಮಂ ರಚಿಸಿದಪನೇಳು ಬೇಗ ಮಾಡೆಂದು ಬೆಸಸಿ**
**ಸೋಮಧರನಡಗೆ ಮೈಮುರಿದೆದ್ದುಕರೆದೊರ್ವ**
**ಕಾಮಿನಿಗೆ ಹಿಂದೆಮ್ಮಗುರುರೇವಣಾರ್ಯನೆಂ**
**ದಾ ಮಾತಿನಂತಿಂದು ಕನಸಿನೊಳು ಶಿವ ಪೇಳ್ದನೆಂದು ನುಡಿದಳು ಮುದದಲಿ'**
**40, 'ಹರಹರ ಮಹಾದೇವಕನಸಲ್ಲ ನಡೆಯೆಂದು**
**ಹರುಷಜಲದಿಂ ಮಿಂದು ಮೊಳೆವ ಪುಳಕಂಗಳಾ**
**ಭರಣಮಂತೊಟ್ಟು ಸಂತಸದಣಿಂಬನುಟ್ಟು ಮುಗಿದ ಕೈ ಹೂವ ಸೂಡಿ**
**ನೆರೆದ ಪರಿವಾರ ಸಹಿತೈತಂದು ಲೋಕೈಕ**
**ಗುರುವಿಂಗೆ ಮೈಯಿಕ್ಕಿ ನಿಂದಿರ್ದು ನಿಮ್ಮ ಶಿವ**
**ಪುರಕೆತಕ್ಕನಿತು ಭೂಮಿಯನಿತ್ತೆವಧರಿಪುದೆಂದು ಧಾರೆಯನೆರೆದಳು'**

ಎಂಬ ಉಲ್ಲೇಖ ನಮಗೆ ಸಿಗುತ್ತದೆ. ಸಿದ್ಧರಾಮ ಸೊಲ್ಲಾಪುರವನ್ನು ಭೂ ಕೈಲಾಸವಾಗಿಸಲು ಅಷ್ಟು ದೊಡ್ಡದೇವಾಲಯ ನಿರ್ಮಾಣ ಮಾಡಲು ಅಲ್ಲಿಯ ಮಹಾರಾಣಿ ಚಾಮಲಾದೇವಿ ಸಹಾಯ ಮಾಡಿದ್ದಳು ಎನ್ನುವ ಮಹತ್ವದ ಅಂಶ ನಮಗೆ ಲಭ್ಯವಾಗುತ್ತದೆ.

ಚಾಮಲಾದೇವಿ ಸೊಲ್ಲಾಪುರದ ಮಹಾರಾಣಿಯಾಗಿದ್ದು, ಆಕೆಯ ಆಸ್ಥಾನದಲ್ಲಿ ಶ್ರೀ ಗುರು ಸಿದ್ಧರಾಮರು ಕಲ್ಯಾಣಕ್ಕೆ ಬರುವ ಮೊದಲೇ ರಾಜಗುರುಗಳಾಗಿದ್ದರು ಎಂದು ತಿಳಿದು ಬರುತ್ತದೆ. ಸಿದ್ಧರಾಮನ ಸಾಮಾಜಿಕ ಕಲ್ಯಾಣ ಪರವಾದ ಕಾರ್ಯಕ್ರಮಗಳಿಗೆ ನೂರಾರು ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಳು. ಜನರಿಗೆ, ಪಶು ಪಕ್ಷಿಗಳಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳನ್ನು ನಿರ್ಮಿಸಿ ಜನೋಪಯೋಗಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ ಸಿದ್ಧರಾಮನಿಗೆ ಬೆಂಬಲ ಒತ್ತಾಸೆಯಾಗಿ ನಿಂತವಳು ಚಾಮಲಾದೇವಿ.

ಚಾಮಲಾದೇವಿ ಸೋಲಾಪುರದ ಇಂದಿನ ದೇಶಮುಖ ಮನೆತನದ ಹೆಣ್ಣು ಮಗಳು. ತುಮಕೂರಿನ ಬಿಜ್ಜಾವರ ಮಧುಗಿರಿಯ ನೊಳಂಬ ಸಂಸ್ಥಾನದ ಪ್ರಭುರಾಜ ಹಿರೇಗೌಡರು ಮರಣ ಹೊಂದಿದ ಮೇಲೆ ಮಧುಗಿರಿಯ ರಾಜ್ಯವು ಅವರ ಕೈ ಬಿಟ್ಟು ಹೋಗುತ್ತದೆ. ಅವರ ಮಕ್ಕಳು ತಮ್ಮ ಸೋದರತ್ತೆ ಚಾಮಲಾದೇವಿಯ ಮೂಲಕ ಸಿದ್ಧರಾಮ ನನ್ನು ಸಂಪರ್ಕಿಸಿ ಇವರಿಬ್ಬರ ಸಹಾಯ ದಿಂದ ಮರಳಿ ತಮ್ಮ ರಾಜ್ಯವನ್ನು ರಾಜ ಹಿರೇಗೌಡರ ಮಕ್ಕಳು ಪಡೆಯುತ್ತಾರೆ. ನಂತರ ಅವರೆಲ್ಲರೂ ಸಿದ್ಧರಾಮನ ಅನುಯಾಯಿಗಳಾಗಿ



**ಸುಶೀಲಾ ಸದಾಶಿವಯ್ಯ**
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

ಲಿಂಗಾಯತ ಧರ್ಮವನ್ನು ಸ್ವೀಕರಿಸುತ್ತಾರೆ. ಸಿದ್ಧರಾಮ ತನ್ನ ಸೋದರಳಿಯರಿಗೆ ಮಾಡಿದ ಉಪಕಾರಸ್ಮರಣೆಯಿಂದ ಮುಂದೆ ಚಾಮಲಾದೇವಿ ಕಲ್ಯಾಣ ಕ್ರಾಂತಿಯ ನಂತರ ದಿಕ್ಕು ತಪ್ಪಿದ ಶರಣರಿಗೆ ಆಶ್ರಯ ನೀಡುತ್ತಾಳೆ.

ಸೊಲ್ಲಾಪುರ ಸಿದ್ಧರಾಮನ ಆಧ್ಯಾತ್ಮ ಶಕ್ತಿಕೇಂದ್ರವಾಗಿ, ಭೂ ಕೈಲಾಸವಾದಂತೆ, ಕಲ್ಯಾಣದಲ್ಲಾದ ಧಾರ್ಮಿಕ, ಸಾಮಾಜಿಕ ವಿಪ್ಲವಗಳಿಂದ ಬಸವಣ್ಣನವರ ಆಶ್ರಯ ವಂಚಿತರಾದ ಶರಣರಿಗೆ ಸೊಲ್ಲಾಪುರದ ರಾಣಿಚಾಮಲಾ ದೇವಿ ಶ್ರೀ ಗುರು ಸಿದ್ಧರಾಮನ ಬಿನ್ನಹದಂತೆ ಅವರನ್ನೆಲ್ಲಾ ಅಪಾರ ಪ್ರೀತಿಗೌರವದಿಂದ ಸ್ವಾಗತಿಸಿ ಶರಣರಿಗೆ ಅವರು ಹೊತ್ತುತಂದಿದ್ದ ವಚನದ ಕಟ್ಟುಗಳಿಗೆ ಆಶ್ರಯ, ಸಂರಕ್ಷಣೆಯ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಾಳೆ.

ಇದಕ್ಕೂ ಮೊದಲೇ ಸಿದ್ಧರಾಮರು ಅಲ್ಲಮಪ್ರಭು ಗಳೊಂದಿಗೆ ಕಲ್ಯಾಣಕ್ಕೆ ಹೋಗಿ ಅಲ್ಲಿ ಚೆನ್ನಬಸವಣ್ಣನವರಿಂದ ಲಿಂಗ ದೀಕ್ಷೆ ಪಡೆದು ಅಲ್ಲಿಯ ಶರಣರ ಸಂಪರ್ಕ ಹೊಂದಿದ ನಂತರ ಬಸವಣ್ಣನವರು ಮತ್ತು ಚೆನ್ನ ಬಸವಣ್ಣನವರನ್ನು ಸೊಲ್ಲಾಪುರಕ್ಕೆ ಕರೆತಂದು ಅವರಿಬ್ಬರ ಸ್ವಾಗತವನ್ನು ಅದ್ದೂರಿಯಾಗಿ ಮಾಡುತ್ತಾರೆ. ಕುದುರೆಯ ಮೇಲೆ ಕುಳ್ಳಿರಿಸಿ ಸ್ವಾಗತಮಾಡಿದ ನೆನಪಿಗಾಗಿ ಸೊಲ್ಲಾಪುರದಲ್ಲಿ ಜೋಡು ಬಸವಣ್ಣ ದೇವರ ಗುಡಿ ಇದೆ. ಜೋಡು ಬಸವಣ್ಣ ಅಂದರೆ ಬಸವಣ್ಣ ಚೆನ್ನಬಸವಣ್ಣ ಇವರಿಬ್ಬರನ್ನು ಕುದುರೆ ಮೇಲೆ ಸ್ವಾಗತ ಮಾಡಿದ ಸ್ಥಳದ ಸ್ಮಾರಕವಾಗಿದೆ. ಇದು ಜನರ ಬಾಯಲ್ಲೂ ಜನಜನಿತವಾಗಿದ್ದು, ಸಂಶೋಧಕರು ಅಧ್ಯಯನ ಮಾಡಿರುವುದರ ಸತ್ಯದ ದರ್ಶನವಾಗಿದೆ. ಡಾ. ಶಶಿಕಾಂತ ಪಟ್ಟಣದವರು ಶರಣರ ಸ್ಮಾರಕಗಳು ಮತ್ತು ಅವಶೇಷಗಳ ಬಗ್ಗೆ ಅಧ್ಯಯನ ಮಾಡಿ ಅವರ ಸಂಶೋಧನೆಗಳನ್ನು ದಾಖಲಿಸಿದ್ದಾರೆ. ಸಿದ್ಧರಾಮರ ಸಮಾಧಿ ಹಾವಿನಹಾಳ ಕಲ್ಲಯ್ಯನವರ ಗದ್ದುಗೆ, ಕೋಟೆ, ಅಲ್ಲಿಯ ಅವಶೇಷಗಳ ಕ್ಷೇತ್ರಕಾರ್ಯ ಮಾಡಿದ್ದು ಚಾಮಲಾದೇವಿ ಸೊಲ್ಲಾಪುರದ ರಾಣಿಯಾಗಿದ್ದಳು ಆಕೆ ಶ್ರೀ ಗುರು ಸಿದ್ಧರಾಮನನ್ನು ರಾಜಗುರುವಾಗಿ ಸ್ವೀಕಾರ ಮಾಡಿದ್ದಳು, ಕಲ್ಯಾಣಕ್ರಾಂತಿಯ ನಂತರ ಶರಣರಿಗೆ ಆಶ್ರಯ ನೀಡಿ ಶರಣರು ಮತ್ತು ವಚನದ ಕಟ್ಟುಗಳ ಸಂರಕ್ಷಳಾಗಿ, ಲಿಂಗಾಯತ ಧರ್ಮ ಸ್ಥಾಪಕಳಾಗಿ ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡು ಅದು ಸ್ಥಾಪಿತ ಧರ್ಮವಾಗಿ ಎಲ್ಲಾ ಕಡೆ ಪ್ರಚಾರವಾಗುವುದಕ್ಕೆ ಕಾರಣಳಾದ ಚಾಮಲಾದೇವಿ ಇತಿಹಾಸದಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸಿರುವುದು ಕಂಡು ಬರುತ್ತದೆ.

ಕಲ್ಯಾಣದಲ್ಲಾದ ಕ್ರಾಂತಿಯ ನಂತರ ದಿಕ್ಕೆಟ್ಟ ಶರಣರು ಹುಮನಾಬಾದ ಮಾರ್ಗವಾಗಿ ಸೊಲ್ಲಾಪುರಕ್ಕೆ ಬರುತ್ತಾರೆ. ಅಲ್ಲಿಯ ರಾಣಿ ಚಾಮಲಾದೇವಿ ಅವರಿಗೆ ಆಶ್ರಯ ನೀಡಿ ವಚನಗಳನ್ನು ಸಂರಕ್ಷಣೆ ಮಾಡುತ್ತಾಳೆ. ಅವಳ ಉಪಕಾರ ಸ್ಮರಣೆಯುನ್ನು ಯಾರೂ ಮರೆಯುವ ಹಾಗಿಲ್ಲ. ಚಾಮಲಾದೇವಿ ತನ್ನಅಪಾರವಾದ ಸೈನ್ಯವನ್ನು ವಿಜಯಪುರದವರೆಗೆ ಕಳುಹಿಸಿಕೊಟ್ಟು ಶರಣರು, ವಚನಗಳ ಸಂರಕ್ಷಣೆಗೆ ಹೆಚ್ಚು ಶ್ರಮ ಪಡುತ್ತಾಳೆ. ಚಾಮಲಾದೇವಿಯ ಆಸ್ಥಾನದಲ್ಲಿ ರಾಜಗುರುವಾಗಿದ್ದ ಶ್ರೀ ಗುರುಸಿದ್ಧರಾಮರು ಕಲ್ಯಾಣದ ಚಾಲುಕ್ಯರ ಸಹೋದರ ಸಂಬಂಧಿಗಳು ಮತ್ತು ಕಳಚುರ್ಯರ ಶತ್ರುಗಳಾಗಿದ್ದ ಬನವಾಸಿ ಕದಂಬರ ಜೊತೆ ಸ್ನೇಹ ಸಂಪರ್ಕ ಮಾಡಿ ಕಲ್ಯಾಣದ ಶರಣರ ವಚನಗಳನ್ನು ಸಂರಕ್ಷಿಸಲು ಕಾರಣರಾಗುತ್ತಾರೆ. ಜೈನ ಮಾಂಡಲೀಕರು, ಅರಸರು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯಕ್ಕೆ ಬಂದರು. ಚೋಳರ ಆಸ್ಥಾನದ ಯೋಧ ಮಾದಾರ ಚನ್ನಯ್ಯ ಇಂದಿನ ಚಾಮರಾಜ ನಗರದ ಕುರುಬಗಟ್ಟಿಯಲ್ಲಿ ಪತ್ನಿ ಸಮೇತ ಐಕ್ಯರಾಗಿದ್ದಾರೆ. ಶರಣರು ವಿಜಯಪುರ, ಜಮುಖಂಡಿ, ಬನಹಟ್ಟಿ ಅಂಕಲಗಿ, ಕಾದ್ರೊಳ್ಳಿ, ಮುರುಗೋಡದಿಂದ ತಂಡೋಪತಂಡವಾಗಿ ಉಳುವಿಗೆ, ಬನವಾಸಿ ಕಡೆಗೆ ಶರಣರು ಸಾಗಿ ಹೋದರು. ಕಲ್ಯಾಣದ ಶರಣರಿಗೆ ಮೊತ್ತ ಮೊದಲು ಆಶ್ರಯ ನೀಡಿ ವಚನಗಳನ್ನು ಸಂರಕ್ಷಿಸಿದ ಸೋಲಾಪುರದ ರಾಣಿ ಚಾಮಲಾದೇವಿಯ ಉಪಕಾರ ಸ್ಮರಣೆಯನ್ನು ನಾವು ಮರೆಯುವ ಹಾಗಿಲ್ಲ. ಸೋಲಾಪುರದ ದೇಶಮುಖ ಮನೆತನದವರಲ್ಲಿ ಇಂದಿಗೂ ಸಿದ್ಧರಾಮರ ಬೆತ್ತವಿದೆ.(ಇದನ್ನು ಡಾ. ವೀರಣದಂಡೆಯವರು ದಾಖಲಿಸಿದ್ದಾರೆ) ಶರಣ ಶ್ರೀ ಸೋಮಶಂಕರ ದೇಶಮುಖರ ಅವಿರತ ಶ್ರಮದಿಂದಾಗಿ ದೇಶಮುಖರ ಮನೆಯಲ್ಲಿದ್ದ ಬೆತ್ತವನ್ನು ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷಿಸಿದಾಗ ಅದು ಹನ್ನೆರಡನೇ ಶತಮಾನದ ಕಟ್ಟಿಗೆಯ ಬೆತ್ತವೆಂದು ಗೊತ್ತಾಗಿದೆ ಇದನ್ನು ಸೋಮಶಂಕರ ದೇಶಮುಖರವರೇ ತಿಳಿಸಿದ್ದಾರೆ ಎಂದು ಡಾ. ಶಶಿಕಾಂತ ಪಟ್ಟಣ ಅವರು ತಮ್ಮ ಸಂಶೋಧನೆಗಳ ವರದಿಯಲ್ಲಿ ದಾಖಲಿಸಿದ್ದಾರೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ.

ನೊಳಂಬ ಮನೆತನದ ರಾಜರು ಲಿಂಗಾಯತ ಧರ್ಮ ಸ್ವೀಕರಿಸಿ ಧರ್ಮರಕ್ಷಣೆಗೆ ನಿಂತದ್ದು, ಏಳುನಾಡ ಪ್ರಭುಗಳಾಗಿ ರಾಜ್ಯಭಾರ ಮಾಡುತ್ತಾ ಲಿಂಗಾಯತ ಧರ್ಮ ಹೆಚ್ಚು ಪ್ರವರ್ಧಮಾನಕ್ಕೆ ಬರುವುದಕ್ಕೆ ಕಾರಣರಾಗಿರುವುದು, ಶರಣರ ವಚನ ಸಂರಕ್ಷಣೆಯುಲ್ಲಿ ಶ್ರೀ ಗುರು ಸಿದ್ಧರಾಮೇಶ್ವರರು, ಚಾಮಲಾದೇವಿಯ ಉದಾರತೆ, ಸೂಕ್ತ ಸಲಹೆ, ಸೂಚನೆಗಳು ಇವೆಲ್ಲಾ ಒಂದು ಇತಿಹಾಸದ ಮೈಲಿಗಲ್ಲು ಎಂದೇ ಹೇಳಬಹುದು.

ತುಮಕೂರು ಭಾಗದಲ್ಲಿ ಏಳು ನಾಡ ಪ್ರಭುಗಳಾಗಿ ನೊಳಂಬ ಕುಲದ ತುರುಬಿನ ಮಾರೇಗೌಡನ ನೇತೃತ್ವದಲ್ಲಿ ರಾಜ್ಯವನ್ನು ಸಂಸ್ಥಾಪಿಸಲು ದಿಟ್ಟ ಪ್ರಯತ್ನ ಮಾಡಿದ ಅವರಿಗೆ ಆಶೀರ್ವಾದ ಮಾರ್ಗದರ್ಶನ ರೂಪದಲ್ಲಿ ನಾಗಮುರಿ ಆಯುಧವನ್ನು ಕೊಟ್ಟು ಸಲಹೆ ನೀಡಿದವರೇ ನೊಳಂಬರ ಆರಾಧ್ಯಗುರು ಸೊನ್ನಲಿಗೆಯ ಶ್ರೀ ಗುರು ಸಿದ್ಧರಾಮೇಶ್ವರರು ಮತ್ತು ರಾಣಿ ಚಾಮಲಾದೇವಿಯಿಂದ ಏಳು ಕೊಪ್ಪರಿಗೆ ಯಷ್ಟು ಸಂಪತ್ತನ್ನು ಪಡೆದು, ಸಿದ್ಧರಾಮರು ಏಳು ಜನ ಸಹೋದರರಿಗೆ ನೀಡಿದ ಸಲಹೆ, ಮಾರ್ಗದರ್ಶನದಂತೆ ಮುಂದೆ ಬೀದರ್ ನಗರಕ್ಕೆ ಬಂದು ಸಿದ್ಧರಾಮರು ತುಮಕೂರು ಭಾಗದಲ್ಲಿ ಸಂಚರಿಸಿ ತಪೋನಿಷ್ಠರಾಗಿದ್ದ ಆಯ್ದ ಸ್ಥಳಗಳಲ್ಲಿ ಏಳು ಸಹೋದರರು ಏಳು ಸ್ಥಳಗಳಲ್ಲಿ ನೆಲೆನಿಂತು ರಾಜ್ಯವನ್ನು ಸ್ಥಾಪಿಸಿದರು. ಏಳು ನಾಡ ಪ್ರಭುಗಳ ಮನೆತನಗಳು ಮುಂದೆ ಏಳಿಗೆಗೆ ಬಂದು ತಮ್ಮ ಪ್ರಾಬಲ್ಯವನ್ನು ಮೆರೆದರು. ಬೇರೆ ರಾಜರ ಜೊತೆ ಹೋರಾಟ, ಸಾಮ್ರಾಜ್ಯ ಸಂರಕ್ಷಣೆ, ವಿಸ್ತರಣೆಯ ವಿಜಯದ ರೂವಾರಿಗಳಾದ ಏಳುನಾಡ ಪ್ರಭುಗಳಿಗೆ 'ಮಹಾನಾಡ ಪ್ರಭುಗಳು' ಎಂಬ ಬಿರುದನ್ನು ವಿಜಯನಗರದ ಅರಸ ಪ್ರೌಢದೇವರಾಯ ನೀಡಿ ಗೌರವಿಸಿ ಧನಸಹಾಯ ಮತ್ತು ತಮ್ಮ ಭಾಗಗಳಲ್ಲಿ ಆಳ್ವಿಕೆ ಮಾಡಿಕೊಳ್ಳಲು ಸಮ್ಮತಿಸಿದರು. 1346ರ ವೇಳೆಗೆ ನಿಶ್ಚಿತ ಭೂಭಾಗಗಳಲ್ಲಿ ತಮ್ಮ ಅಸ್ತಿತ್ವವನ್ನು ಕಾಯ್ದಿರಿಸಿಕೊಂಡು ನೊಳಂಬ ರಾಜರು ವಿಜಯನಗರ ರಾಜರ, ಮೈಸೂರು ಒಡೆಯರ ಸಾಮಂತ ರಾಜ್ಯವಾಗಿ ಮುನ್ನೆಡೆದು ಬಂದಿರುವುದು ಕಂಡು ಬರುತ್ತದೆ.

ನೊಳಂಬವಾಡಿ 32000 ಸಾವಿರ ಎಂದು ಕರೆಸಿ ಕೊಂಡು ಮುಂದೆ ತನ್ನದೇ ದಿಗ್ವಿಜಯ, ಅಸ್ಮಿತೆಯನ್ನು ಕಾಯ್ದುಕೊಂಡು ರಾಜ್ಯಭಾರ ಮಾಡಿದ ನೊಳಂಬ ಅರಸು ಮನೆತನ ಕರ್ನಾಟಕದ ಪ್ರಮುಖ ರಾಜಮನೆತನಗಳ ಸಾಲಿಗೆ ಸೇರುವಂತ ಮಹತ್ವದ ವೈಭವದ ಅಡಳಿತವನ್ನು ನೀಡಿರುವುದು ಕಂಡುಬರುತ್ತದೆ. ನೊಳಂಬ ಸಾಮ್ರಾಜ್ಯದ ಹುಟ್ಟಿಗೆ ಅದು ಹೆಚ್ಚು ಉಚ್ಛ್ರಾಯ ಸ್ಥಿತಿಯಲ್ಲಿ ವೈಭವದ ಅಡಳಿತಕ್ಕೆ ಕಾರಣಳಾದ ಚಾಮಲಾದೇವಿ, ಶ್ರೀ ಗುರು ಸಿದ್ಧರಾಮರ ಪಾತ್ರಗಳು ನೊಳಂಬ ಸಮುದಾಯಕ್ಕೆ ಸದಾ ವಂದಿತವಾದ ಪ್ರಾತಃಸ್ಮರಣೀಯರು.

## ಲಿಂಗಾಯತ ಧರ್ಮವನ್ನು ಬಲಪಡಿಸಲು 12 ಮಾರ್ಗಗಳು....

1. ಮನೆಯಲ್ಲಿರುವ ಎಲ್ಲರೂ ಇಷ್ಟಲಿಂಗವನ್ನು ಧರಿಸುವುದರೊಂದಿಗೆ, ದಿನಕ್ಕೆ ಒಮ್ಮೆಯಾದರೂ ಇಷ್ಟಲಿಂಗವನ್ನು ಪೂಜಿಸಿ.
2. ವಾರಕ್ಕೊಮ್ಮೆಯಾದರೂ ನಿಮ್ಮ ಕುಟುಂಬದೊಂದಿಗೆ ಶರಣರ ಸ್ಥಳಗಳಿಗೆ ಹೋಗಿ.
3. ಎಲ್ಲಾ ಲಿಂಗಾಯತರನ್ನು ಸಮಾನವಾಗಿ ಕಾಣಬೇಕು ಮತ್ತು ಜಾತಿಯ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡಬಾರದು.
4. ಸಾಧ್ಯವಾದಷ್ಟು ಲಿಂಗಾಯತರಿಗೆ ಸಹಾಯ ಮಾಡಿ.
5. ಲಿಂಗಾಯತ ಧರ್ಮದ ಪ್ರಗತಿಗೆ ಒಂದು ನಿರ್ದಿಷ್ಟ ಮೊತ್ತವನ್ನು ಖರ್ಚು ಮಾಡಬೇಕು.
6. ಲಿಂಗಾಯತ ಕಾರ್ಮಿಕರಿಗೆ ಉದ್ಯೋಗ ಒದಗಿಸಿ.
7. ಲಿಂಗಾಯತರು ನಡೆಸುವ ಅಂಗಡಿಗಳಿಂದ ಸರಕುಗಳನ್ನು ಖರೀದಿಸಿ.
8. ನಾವು ವಾಸಿಸುವ ಪ್ರದೇಶಗಳಲ್ಲಿ ಲಿಂಗಾಯತರ ವೃತ್ತವನ್ನು ರಚಿಸಬೇಕು.
9. ನೀವು ಯಾವ ಜಾತಿಗೆ ಸೇರಿದವರು ಎಂದು ಯಾವುದೇ ಲಿಂಗಾಯತರನ್ನು ಕೇಳಬೇಡಿ ಅಥವಾ ಹೇಳಬೇಡಿ.
10. ಲಿಂಗಾಯತ ಧರ್ಮದ ವಿರುದ್ಧ ಸುದ್ದಿಗಳನ್ನು ಪ್ರಕಟಿಸುವ ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಜಾಹೀರಾತು ವಸ್ತುಗಳನ್ನು ಖರೀದಿಸುವುದನ್ನು ನಾವು ನಿಲ್ಲಿಸುತ್ತೇವೆ.
11. ಲಿಂಗಾಯತ ಧರ್ಮದ ವಿರುದ್ಧ ಕೆಲಸ ಮಾಡುವ ರಾಜಕೀಯ ಪಕ್ಷಗಳನ್ನು ನಾವು ನಿರ್ಲಕ್ಷಿಸುತ್ತೇವೆ.
12. ಮನೆಯಿಂದ ಹೊರಡುವಾಗ ಲಿಂಗಾಯತರೆಲ್ಲರೂ ಹಣೆಯ ಮೇಲೆ ವಿಭೂತಿ ಧರಿಸುವುದು ಕಡ್ಡಾಯವಾಗಿದೆ.

# "ಇನ್ನಾರಿಗೆ ದೂರುವೆ ಕೂಡಲ ಸಂಗಮದೇವ"

ಕ್ರಿ.ಶ 12ನೇ ಶತಮಾನದ ಶರಣರ ನಡೆ ಮಾನವೀಯತೆಗೆ ಮೊದಲ ಆದ್ಯತೆ ನೀಡುವುದೇ ಆಗಿತ್ತು. ಜಾತಿಗಳನ್ನು ಅಳಿಸಿ ಸಮಸಮಾಜದ ನಿರ್ಮಾಣ ಮಾಡಲು ಕ್ರಾಂತಿಯನ್ನೆ ಪ್ರಾರಂಭಿಸಿದರು.ಶರಣರ ಸಮಾನತೆಯ ಹೋರಾಟ ಈಗಲೂ ಮುಂದುವರೆದಿದೆ ಎನ್ನಬಹುದು. ಅವರ ವಿಚಾರ ಧಾರೆಗಳಿಂದ ಪ್ರೇರಣೆ ಪಡೆದವರು ಸಮಾನತೆಯ ಅಶ್ವಮೇಧವನ್ನು ಮುನ್ನೆಡೆಸುತ್ತಿದ್ದಾರೆ. ಯಾಗದ ಕುದುರೆ ನಿಲ್ಲಿಸಿ ಯುದ್ಧಕ್ಕೆ ನಿಲ್ಲುವ ಪ್ರಸಂಗಗಳು ಅಲ್ಲಲ್ಲಿ ನಡೆಯುತ್ತಿವೆ. ತಾತ್ಪರ್ಯ ಇಷ್ಟೆ ಕೆಲವು ಊರುಗಳಲಿ, ಹಲವು ಕೇರಿಗಳಲ್ಲಿ, ಪದವೀಧರರಿರುವ ನಗರಗಳಲ್ಲಿ **'ನಾವು ಮನುಷ್ಯರು, ನಮ್ಮದು ಮನುಷ್ಯಜಾತಿ, ಮನುಷ್ಯ ಧರ್ಮ'** ಎಂದು ಹೃದಯತುಂಬಿ ಹಾಡಲು ಮುಕ್ತ ವಾತಾವರಣವೇ ಕಾಣುತ್ತಿಲ್ಲ. ಇದಕ್ಕಾಗಿ ಯಾವುದೋ ಒಂದು ವರ್ಗವನ್ನು ದೂಷಿಸುವುದು ತಪ್ಪಾಗುತ್ತದೆ. ಎಲ್ಲರಲ್ಲೂ ಜವಾಬ್ದಾರಿ ಹುಟ್ಟಬೇಕಾಗಿದೆ. ಸಮಾನತೆಯ ಅರಿವು ಸರ್ವರಲ್ಲೂ ಮೂಡಬೇಕಾಗಿದೆ. ಇದನ್ನು ಪ್ರತಿ ಮನೆಯಿಂದಲೇ ಆರಂಭಿಸಬೇಕಿದೆ. ಪ್ರತಿ ವ್ಯಕ್ತಿಯಿಂದಲೇ ಸೃಜಿಸಬೇಕಾಗಿದೆ. ಸಮಾನತೆಯ ದೀಕ್ಷೆಗೆ ಕಂಕಣವನ್ನು ನಮಗೆ ನಾವೇ ಕಟ್ಟಿಕೊಂಡು ಶರಣರ ಪಥದಲ್ಲಿ ಸಾಗಬೇಕಿದೆ.

ಸಂವಿಧಾನದ ಆಶಯದಲ್ಲಿ ಬದುಕುವ ಈ ಘಳಿಗೆಯಲ್ಲೂ ವಿಷವರ್ತುಲಗಳು ವಿಜೃಂಭಿಸುವಾಗ 12ನೇ ಶತಮಾನದಲ್ಲಿ ಸಮಾನತೆಗಾಗಿ ಹೋರಾಟವನ್ನು ಪ್ರಾರಂಭಿಸಿದವರಿಗೆ ಏನೆಲ್ಲ ವಿಘ್ನಗಳು ಎದುರಾಗಿರಬಹುದು? ಅದೆಲ್ಲವನ್ನೂ ಮೆಟ್ಟಿ ನಿಲ್ಲಲು ದೈವವೊಂದನ್ನು ಸಂಕೇತವಾಗಿ ಮಾಡಿಕೊಂಡು, ದೇಹ ಬಂದಿರುವುದೇ ಆ ದೈವದಿಂದ, ಇದರೊಳಗೆ ಇರುವ ಆತ್ಮವೇ ಅದರ ಪ್ರತಿರೂಪ. ಆತ್ಮವು ಅಮರವಾದುದು, ಜ್ಞಾತ್ಯಾತೀತ, ಧರ್ಮಾತೀತವಾದದ್ದು, ಅಗ್ನಿಯಷ್ಟೇ ಪವಿತ್ರ, ಪ್ರತಿಯೊಬ್ಬರಲ್ಲೂ ಅದು ಇರುವುದರಿಂದ ಮನುಷ್ಯರೆಲ್ಲರೂ ಒಂದೇ. ಆತ್ಮಜ್ಞಾನವೇ ಜೀವನದ ಸಾಕ್ಷಾತ್ಕಾರ. ಅದರ ದರ್ಶನ ಪಡೆದವನೇ ದಾರ್ಶನಿಕ ಎನ್ನುವುದನ್ನು ಸಾರುತ್ತ ಸಾಗಿದವರಿಗೆ ಎದುರಾದ ಸವಾಲುಗಳು ಒಂದೆ ಎರಡೇ! ಹಲವಾರು ಬಗೆಯ ಕಿರುಕುಳಗಳಿಗೆ ಮನಸ್ಸು ಕದಡಿ ಹೋಗಿರುತ್ತದೆ. ಅಂತಹ ಒಂದು ಸ್ಥಿತಿಯಲ್ಲಿ ಬಸವಣ್ಣನವರ ಈ ವಚನ ಹುಟ್ಟಿರಬಹುದು.




**ಡಾ. ಹಾಲಪ್ಪ ಹೆಚ್.ಕೆ.ಕುಂಟೆ**
ಕನ್ನಡ ಭಾಷಾ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವಕಾಲೇಜು
ಸಂತೇಬೆನ್ನೂರು, ಚನ್ನಗಿರಿ ತಾ.
ಮೊ : 9731190236


**"ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ**
**ಧರೆಹತ್ತಿ ಉರಿದಡೆ ನಿಲಲುಬಾರದು**
**ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ**
**ನಾರಿ ತನ್ನ ಮನೆಯಲ್ಲಿ ಕಳುವಡೆ**
**ತಾಯ ಮೊಲೆವಾಲು ನಂಜಾಗಿ ಕೊಲುವಡೆ**
**ಇನ್ನಾರಿಗೆ ದೂರುವೆಕೂಡಲಸಂಗಮದೇವ"**

ಇದರಲ್ಲಿ ಮೊದಲ ಎರಡು ಸಾಲುಗಳು 'ಶರಣರ ಗುಂಪಿನಲ್ಲಿ ಒಬ್ಬಿಬ್ಬರು ವೇಷಧಾರಿಗಳಾಗಿರುವಂಥವರು ದಾರಿತಪ್ಪಿದರೆ ಅವರನ್ನು ಸರಿಪಡಿಸಲು ಸಾಧ್ಯವಿದೆ, ಇಡೀ ಗುಂಪು ದಾರಿತಪ್ಪಿದರೆ ಸರಿಪಡಿಸಲು ಸಾಧ್ಯವಿಲ್ಲ. ಹಾಗೆಯೇ ಸಮಾಜದಲ್ಲಿ ಒಂದೆರಡು ವ್ಯಕ್ತಿಗಳನ್ನು ಸುಧಾರಣೆ ಮಾಡಬಹುದು. ಸಂಪೂರ್ಣ ಸಮಾಜವೇ ಹಾಳಾಗಿದ್ದರೆ ಸುಧಾರಣೆ ಅಸಾಧ್ಯವಾದದ್ದು. ಸಮಾಜದ ಪ್ರಮುಖರು, ಊರಿನ ಮುಖಂಡರು, ರಾಜ್ಯವನ್ನಾಳುವರಾಜ ಈ ಮೊದಲಾದವರಿಗೆ ಅನ್ವಯಿಸಬಹುದಾದರೆ: ಮುಖ್ಯಸ್ಥರೇ ದಾರಿ ತಪ್ಪಿದರೆ ನಿಯಂತ್ರಣ ಕಷ್ಟ ನಾವು ಆರಂಭಿಸಿದ ರಾಜನಿಗೆ ತಪ್ಪಾಗಿದೆಯಲ್ಲ! ಸಾಂಪ್ರದಾಯಿಕ ಮತದವರಿಗೆ ಅಪಥ್ಯವಾಗಿದೆಯಲ್ಲ! ಸಮಾನತೆಯ ಆಂದೋಲನ ಜಾತಿಯವರಿಗೆ, ಧರ್ಮದವರಿಗೆ ಆತ್ಮದ ಅರಿವೂ ಬೇಡ, ಸಮಾನತೆಯೂ ಬೇಡವಾಗಿದೆಯಲ್ಲ' ಎಂಬ ಖೇದ ಈ ಸಾಲುಗಳಲ್ಲಿದೆ. ಈ ಎರಡು ಸಾಲುಗಳನ್ನು ವ್ಯಕ್ತಿಗತವಾಗಿ ನೋಡುವುದಾದರೆ ಆತನಲ್ಲಿ ಒಂದೋಎರಡೋ ದುರ್ಗುಣಗಳಿದ್ದರೆ ನಿಯಂತ್ರಿಸಿದಂತೆ ಅವುಗಳನ್ನು ಒಲೆಯಲ್ಲಿನ ಹೇಳಿ ಬೆಂಕಿಯನ್ನು ಬುದ್ಧಿವಾದ ಗುಣಪಡಿಸಬಹುದು. ಪೂರ್ಣವಾಗಿ ವ್ಯಕ್ತಿತ್ವವೇ ದುರ್ಗುಣಗಳಿಂದ ತುಂಬಿ ಹೋದರೆ ಸರಿಪಡಿಸಲು ಸಾಧ್ಯವೇ ಇಲ್ಲ. ಇದು ಭೂಮಂಡಲವೇ ಬೆಂಕಿ ಹೊತ್ತಿ ಉರಿದಂತೆ.

ಉಳಿದ ನಾಲ್ಕು ಸಾಲುಗಳು ಮನೆಯ ಹಿರಿಯರನ್ನೋ, ಊರಿನ ಮುಖಂಡರನ್ನೋ, ಶರಣರತಂಡದ ಗುರುವನ್ನೋ, ರಾಜ್ಯವಾಳುವ ದೊರೆಯನ್ನೋ ಕುರಿತು ಮಾತನಾಡುತ್ತವೆ. ಏರಿ, ಬೇಲಿ, ನಾರಿ, ತಾಯಿ ಈ ನಾಲ್ಕು ರಕ್ಷಣೆ ಹಾಗೂ ಪೋಷಣೆಯ ಹೊಣೆಯನ್ನು ಹೊತ್ತಿರುವಂಥವುಗಳು.ಇದೇ ಅವುಗಳ ನಿಸರ್ಗ ಸಹಜವಾದ ಮೂಲ ಗುಣ.ಇದನ್ನು ಮರೆತು ಭಕ್ತಿಸಲು ಮುಂದಾದರೆ ನೀರು, ಫಸಲು, ಮನೆ ಹಾಗೂ

ಶಿಶುಗಳಿಗೆ ನಾಶವಾಗುವುದೆಂದರೆ ಕಿಡಿಗೇಡಿತನ ಮನುಷ್ಯರನ್ನು ಉಳಿಗಾಲವಿಲ್ಲ. ಇವೆಲ್ಲಾ ನಾರಿ ಮತ್ತು ತಾಯಿ ಇವರುಗಳಿಗೆ ರಾಕ್ಷಸರನ್ನಾಗಿಸಿದೆ ಎಂದರ್ಥ.ಅಂದರೆ ಜವಾಬ್ದಾರಿ ಸ್ಥಾನದಲ್ಲಿರುವ ಏರಿ, ಬೇಲಿ, ದುರ್ಗುಣಗಳ ಮೇಲೆಯೇ ಮೋಹವಾಗಿದೆ, ನ್ಯಾಯಕ್ಕಿಂತ ಅನ್ಯಾಯವನ್ನೇ ಆಹ್ವಾನಿಸಲು ಸದ್ಗುಣಗಳಿಗಿಂತ ಕಾತರಿಸುತ್ತಿದ್ದಾರೆ ಎನ್ನುವುದು ಆ ಸಾಲುಗಳಿಂದ ವ್ಯಕ್ತವಾಗುತ್ತದೆ.

ನೀರು, ಬೆಳೆ, ಮನೆ ಮತ್ತು ಶಿಶು ಇವುಗಳನ್ನು ಕಾಯುವುದು ತುಂಬಾ ಅನಿವಾರ್ಯ. ಏಕೆಂದರೆ ಸಸ್ಯಸಂಪತ್ತನ್ನು ಬೆಳೆಸುವುದು ನೀರು. ನೀರಿಲ್ಲವಾದರೆ ಹಸಿರೆನ್ನುವುದೆ ಇರುವುದಿಲ್ಲ. ಸಸ್ಯ ಸಂಪತ್ತನ್ನು ಸೇವಿಸಿ ಸಕಲ ಬದುಕುತ್ತವೆ. ಇಂತಹ ಬೆಳೆ/ಸಸ್ಯ ವಿಷವಾದರೆ ಜೀವಿಗಳು ಸಾಯುತ್ತವೆ. ಎಲ್ಲಾ ಜೀವಿಗಳ ವಾಸಸ್ಥಾನ ಮನೆ (ಗೂಡು, ಗುಹೆ, ಗೃಹ), ಮನೆ ಸಂತಾನಕ್ಕೆ ಅನಿವಾರ್ಯ, ಮನೆ ನಾಶವಾದರೆ ವಂಶವೃದ್ಧಿಗೆ ಆಪತ್ತು. ಸಂತಾನ ಉಳಿಸುವುದು ಸಾಯುತ್ತದೆ. ತಾಯಿಯ ಕರ್ತವ್ಯ. ತಾಯಿ ಕರ್ತವ್ಯ ಸಾಗಿದರೆ ಅವರನ್ನು ತಾತ್ಪರ್ಯವೆಂದರೆ ಯಜಮಾನರಾದವರು ತಪ್ಪುದಾರಿಯಲ್ಲಿ ನಂಬಿದವರಿಗೂ ಆಪಾಯ ಕಟ್ಟಿಟ್ಟ ಬುತ್ತಿ. ಅಂದರೆ, ಕಾಯುವವರೆ ಕೊಲ್ಲಲು ಮುಂದಾದರೆ ಆಶ್ರಯ ಪಡೆದವರು ಹೋಗುತ್ತಾರೆ.

ಬಸವಣ್ಣನವರ ವಚನಗಳು ಆತ್ಮ ವೀಕ್ಷೇಷಣೆ ಮಾಡಿಕೊಂಡಂತೆ ಸಮಾಜದ ವಿಶ್ಲೇಷಣೆಯನ್ನು ಪ್ರತಿಬಿಂಬಿಸುತ್ತವೆ. ಪ್ರಸ್ತುತ ಈ ವಚನ ವ್ಯಕ್ತಿ, ಶರಣರು ಅವರ ಆಧ್ಯಾತ್ಮಿಕ ಮಾರ್ಗ, ಸಮಾಜ, ದೇಶ ಹಾಗೂ ಜಗತ್ತನ್ನು ಕುರಿತು ವಿಮರ್ಶಿಸುತ್ತದೆ. ಧರೆಹತ್ತಿ ಉರಿದಡೆ ಎಂಬಲ್ಲಿ ಇಡೀ ವಿಶ್ವವೇ ದ್ವೇಷದ ಜ್ವಾಲೆಯಿಂದ ಸುಟ್ಟು ಭಸ್ಮವಾಗುತ್ತದೆ ಎನ್ನುವುದನ್ನು ಧ್ವನಿಸುತ್ತದೆ. ಒಂದೋ ಎರಡೂ ದೇಶಗಳಲ್ಲಿ ಯುದ್ಧ ಸಂಭವಿಸಿದರೆ ನಿಯಂತ್ರಿಸಬಹುದು. ಧರೆಯ ಮೇಲಣ ದೇಶಗಳೆಲ್ಲ ಯುದ್ಧೋತ್ಸಾಹದಲ್ಲಿದ್ದರೆ ನಿಯಂತ್ರಣ ಅಸಾಧ್ಯವಾದುದು.

ಬಹು ಚರ್ಚೆಗೆ ಒಳಗಾದ ವಚನಗಳಲ್ಲಿ ಇದೂಒಂದು. ಅರ್ಥೈಸಿದಷ್ಟು ಇದರ ವಿಷಯ ವ್ಯಾಪ್ತಿ ಹೆಚ್ಚುತ್ತಾ ಹೋಗುತ್ತದೆ. ವ್ಯವಸ್ಥೆಯೇ ದೋಷಪೂರಿತವಾದಾಗ, ನ್ಯಾಯಾಲಯದಲ್ಲಿ ನ್ಯಾಯ ಕಾಣದಿರುವಾಗ ಹಾಗೂ ಸಚಿವರು, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ಅಧಿಕಾರಿ–ಇವರೆಲ್ಲಾ ರಕ್ಷಿಸುವ ತಂದೆ ತಾಯಿಗಳಿದ್ದಂತೆ ಇವರುಗಳೇ ಲಂಚಕ್ಕೆ ಎಂತಹ ದೃಢಮನಸ್ಸಿವರಿಗೂ ಕೈಚಾಚಿ ಭಕ್ಷಿಸಲು ಮುಂದಾಗುವುದು ವಿನಾಶವನ್ನು ಸೂಚಿಸುತ್ತದೆ. ಆ ವೇಳೆ ಅಧೀರತೆ ಉಂಟಾಗುತ್ತದೆ.

"ಇನ್ನಾರಿಗೆ ದೂರುವೆ ಕೂಡಲಸಂಗಮದೇವ" ಸಮಾನತೆಯ ಜೀವನಕ್ಕೆ ಜನಮನ್ನಣೆ ದೊರೆಯದಿದ್ದರೂ ಚಿಂತೆಯಿಲ್ಲ, ಎನ್ನುವಲ್ಲಿ ಶರಣರ ಅಡ್ಡಿಪಡಿಸುತ್ತಿದ್ದಾರಲ್ಲ ಎನ್ನುವ ಬೇಸರ ಅಸಹಾಯಕತೆಯನ್ನು ಉಂಟುಮಾಡಿದೆ. ಮನುಷ್ಯರಾದ ನಾವು ಯಾರಿಗೂ ಹೇಳಿಕೊಳ್ಳಲಾಗದ ಅಂತರಂಗದ ಅಳಲನ್ನು ಭಗವಂತನೊಡನೆ ಹಂಚಿಕೊಂಡಂತೆ, ಬಸವಣ್ಣನವರು ಇಷ್ಟದೇವರಲ್ಲಿ ತಮ್ಮ ಮನದ ನೋವನ್ನು ನಿವೇದಿಸಿಕೊಂಡಿದ್ದಾರೆ.

ಪವಾಡಗಳನ್ನು ಮಾಡಿದ ಬಸವಣ್ಣನವರಿಗೆ ತ್ರಿಕಾಲಗಳ ಅರಿವೂ ಇರುವುದರಿಂದ ಈ ಬಗೆಯ ಗೊಂದಲಗಳು ಉಂಟಾಗಬಹುದೆ? ಎನ್ನುವ ಅನುಮಾನಗಳು ಬರುವುದು ಸಹಜ. ಆದರೆ ಆಧ್ಯಾತ್ಮಿಕತೆ ಎನ್ನುವುದು ಭಗವಂತನೊಡನೆ ನಿರಂತರ ಸಂವಹನ ಮಾಡುವಂತಹುದು. ಹಾಗೂ ಬಿಜ್ಜಳನ ರಾಜ್ಯದ ಕೋಶಾಧಿಕಾರಿಯಾಗಿದ್ದ ಬಸವಣ್ಣನವರು ಸಮಾಜ ಸುಧಾರಕರು ಹೌದು. ಅವರು ಸಮಾನತೆಯನ್ನು ತರಲು ಹೊರಟಾಗ ಅದಕ್ಕೆ ಹಲವಾರು ಅಡ್ಡಿಗಳುಂಟಾದವು. ಅವುಗಳನ್ನು ತಾಳ್ಮೆಯಿಂದಲೇ ಸಹಿಸಿಕೊಂಡು ಮುಂದೆ ಸಾಗಿದ ಸಹನಾಮೂರ್ತಿ. ತಮ್ಮ ಸನ್ನಡತೆಯಿಂದ ಕಳ್ಳರನ್ನು, ಕ್ರೂರಿಗಳನ್ನು ಶರಣರನ್ನಾಗಿ ಪರಿವರ್ತಿಸಿದವರು. ಇಂಥವರಿಗೂ ಕಷ್ಟಗಳು ಬಂದಾಗ ಮನಸ್ಸು ಹೊಯ್ದಾಡುತ್ತದೆ ಎನ್ನುವುದು ಇಲ್ಲಿ ಪ್ರಕಟವಾಗಿದೆ. ಅವರ ಈ ವಚನವು ಸರ್ವಕಾಲಿಕ ಸತ್ಯವನ್ನು ಸಾರುವ ವಚನವಾಗಿ ಜನಮಾನಸದಲ್ಲಿ ಉಳಿದುಕೊಂಡಿದೆ. ಅನುಭಾವ ಅನುಭವಕ್ಕಿಂತಲೂ ಮಿಗಿಲಾದುದು. ಅದರ ಅನುಭವ ಪಡೆದವರನ್ನು ಅನುಭಾವಿಗಳೆಂದೋ, ಸಂತರೆಂದೋ, ಸಾಧು ಸತ್ಪುರುಷರೆಂದೋ, ಅನುಗ್ರಹ–ನಿಗ್ರಹ ಶಕ್ತಿಯುಳ್ಳ ಅವಧೂತರೆಂದೋ, ಋಷಿ–ತಪಸ್ವಿಗಳೆಂದೋ, ಯೋಗಿಗಳೆಂದೋ, ಮಹಾತ್ಮರೆಂದೋ ಕರೆದು ಅಭಿಮಾನಪಡುತ್ತಾರೆ. ಇವರೆಲ್ಲರ ಗುರಿ ಒಂದೇ ಆತ್ಮವನ್ನು ಪರಮಾತ್ಮನಲ್ಲಿ ಲೀನಗೊಳಿಸುವುದು. ಇವರು ಭಗವಂತನನ್ನು ಕಾಣುವ ದಾರಿಗಳು ಭಿನ್ನವಾಗಿರಬಹುದು. ಆದರೆ ತಲುಪುವ ಗುರಿ ವೊಂದೇ ಆಗಿರುತ್ತದೆ. ಹಲವು ನದಿಗಳು ಕೊನೆಗೆ ಸಮುದ್ರವನ್ನೆ ಸೇರುವುದಿಲ್ಲವೆ ಹಾಗೆ. ಸಂಸಾರಿಯಾಗಿಯೂ, ಅಧಿಕಾರದಲ್ಲಿದ್ದೂ ಸಮಾಜ ಸುಧಾರಣೆಯನ್ನು ಯಶಸ್ವಿಯಾಗಿ ಮಾಡಬಹುದು ಎನ್ನುವುದನ್ನು ಬಸವಣ್ಣನವರು ಸಾಧಿಸಿ ತೋರಿಸಿದ್ದಾರೆ. ನಿರ್ಜನಾರಣ್ಯದಲ್ಲಿ ತಪಗೈದವರು ತಮ್ಮ ಆತ್ಮದ ಉದ್ಧಾರವನ್ನು ನೋಡಿಕೊಂಡು ಸದ್ದಿಲ್ಲದೆ ಮೋಕ್ಷವನ್ನು ಪಡೆಯುತ್ತಾರೆ. ಇಂತಹ ಬದುಕನ್ನು ಆಯ್ಕೆ ಮಾಡಿಕೊಳ್ಳದೆ ಸಂಘಟನೆಯ ಮೂಲಕ ಜನ ಸಾಮೂಹವನ್ನೇ ಆಧ್ಯಾತ್ಮದ ಮಾರ್ಗದಲ್ಲಿ ಕೊಂಡೊಯ್ದು ಬಸವಣ್ಣನವರ ಯಶೋಗಾಥೆ ಅವಿಸ್ಮರಣೀಯವಾದದ್ದು. ಅವರಷ್ಟು ತಾಳ್ಮೆ, ವಿನಯ, ಸಮಾನತೆಯ ಭಾವವನ್ನು ಇತರ ಸಮಾಜ ಸುಧಾರಕರಲ್ಲಿ ಕಾಣುವುದು ವಿರಳ. ಹೀಗಾಗಿಯೇ ಮನುಷ್ಯ ಸಮಾನತೆಯನ್ನು ಅನುಷ್ಠಾನಗೊಳಿಸಿ ಮಹಾಮಾನವತಾವಾದವನ್ನು ಜಗತ್ತಿಗೆ ಸಾರಿದ ಹಿರಿಮೆಗೆ ಪಾತ್ರರಾಗಿದ್ದಾರೆ.

# ಲಿಂಗಾಯತ ಮಠಗಳು

–ಡಾ. ರಾಕೇಶ್ ಬಿ.ಸಿ

ಹಿಂದೂಮಠಗಳು, ಬೌದ್ಧ ಮತ್ತು ಜೈನ ಮಠಗಳ ನಂತರ ಭಾರತದಲ್ಲಿ ಮಠಗಳ ಬೆಳವಣಿಗೆಯ ಮುಂದಿನ ಹಂತವನ್ನು ಕ್ರಿ.ಶ. 7–8ನೆಯ ಶತಮಾನದಲ್ಲಿ ಗುರುತಿಸಬಹುದು. ಆದರೆ ಕೆಲವೊಂದು ಆಧಾರಗಳ ಪ್ರಕಾರ ಎಂಟನೆಯ ಶತಮಾನದ ಅಂತ್ಯದವರೆಗೂ ಬೌದ್ಧ–ಜೈನ ಸನ್ಯಾಸಿಗಳ ಜೊತೆಗೆ ಕಾಳಾಮುಖರು, ಕಾಪಾಲಿಕರು, ಪಾಶುಪತರು ಇನ್ನೂ ಮೊದಲಾದ ಪಂಥಗಳಿಗೆ ಸೇರಿದ ಸನ್ಯಾಸಿಗಳಿದ್ದರು ಎನ್ನಲಾಗಿದೆ. ಈ ದೇವಸನಗಳಲ್ಲಿ ಹಾಗೂ ಮಠಗಳಲ್ಲಿ ಕಾಮಾತು ಸಸಿಗಳು ಸಾಗಿದ್ದರ ಆದರೆ ಕ್ರಿ.ಶ.7ನೆಯ ಶತಮಾನದಲ್ಲಿ ಶಂಕರಚಾರ್ಯರ ಒಂದು ಧರ್ಮದ ಪ್ರಚಾರಕ್ಕಾಗಿ ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಶಂಕರಾಚರ್ಯರ ಪ್ರಕಗಳನ್ನು ಸ್ಥಾಪಿಸಲು ಎರಡು ಮುಖ್ಯ ಕಾರಣಗಳಿವೆ. ಒಂದು, ಈ ಕಾಲಕ್ಕಾಗಲೇ ಬೌದ್ಧ ಧರ್ಮ ಕ್ಷೀಣಿಸುತ್ತಿತ್ತು, ಇನ್ನೊಂದು, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ಅಲಸ್ಕಗೊಳಿಸುವುದು, ಜೊತೆಗೆ ಒಂದೂ ಧರ್ಮದ ತತ್ವಗಳನ್ನು ಜನತೆಗೆ ತಿಳಿಯಪಡಿಸಲು ಇಂತಹ ಧಾರ್ಮಿಕ ಸಂಸ್ಥೆಗಳ ಅವಶ್ಯಕತೆ ಇತ್ತು.

ಶಂಕರಾಚಾರ್ಯರು ಸ್ಥಾಪಿಸಿದ ಈ ಮಠಗಳು ಭಾರತದ ಬೌದ್ಧಿಕ ಹಾಗೂ ಅಧ್ಯಾತ್ಮಿಕ ಬಳಕೆಗೆ ನಾಂದಿಯಾಗಿವೆ. ದೇಶದ ಸಾಂಸ್ಕೃತಿಕ ಏಕತೆಯ ಕಲ್ಪನೆಯನ್ನು ವೃದ್ಧಿಗೊಳಿಸುವ ದೃಷ್ಟಿಯಿಂದ ಶಂಕರಾಚಾರ್ಯರು ಗುಜರಾತ್ ರಾಜ್ಯದ ದ್ವಾರಕಾಪುರಿಯಲ್ಲಿ ಕಾಳಿಕಾ ಪೀಠವನ್ನು, ಒರಿಸ್ಸಾ ರಾಜ್ಯದ ಪುರಿಯಲ್ಲಿ ಗೋವರ್ಧನ ಪೀಠವನ್ನು, ಉತ್ತರ ಪ್ರದೇಶದ ಹಿಮಾಲಯದ ಸಮೀಪ, ಬದರಿಯಲ್ಲಿ ಜ್ಯೋತಿಷ್ಯ ಪೀಠವನ್ನು, ಕನ್ನಡ ನಾಡಿನ ಶೃಂಗೇರಿಯಲ್ಲಿ ಶಾರದಾ ಪೀಠವನ್ನು ಹೀಗೆ ದ್ವಾರಕ, ಪುಣ, ಬದರಿ, ಹಾಗೂ ಶೃಂಗೇರಿಯಲ್ಲಿ 'ಚತುರಾಮ್ನಾಯ' ಪೀಠಗಳನ್ನು ಸ್ಥಾಪಿಸಿದರು.

ಶಂಕರಾಚಾರ್ಯರ ತರುವಾಯ ರಾಮಾನುಜಾ ಚಾರ್ಯರು ಮೇಲುಕೋಟೆಯಲ್ಲಿ ವೈಷ್ಣವ ಮಠವನ್ನು ಸ್ಥಾಪಿಸಿದರು. ಇದರ ಏಳಿಗೆಗಾಗಿ ಸುಮಾರು 12 ವರ್ಷಗಳ ಕಾಲ ದುಡಿದರು. ಇಷ್ಟೇ ಅಲ್ಲದೆ ದೇಶದ ಇತರ ಭಾಗಗಳಲ್ಲಿ ಸುಮಾರು 700 ಮಠಗಳನ್ನು ಸ್ಥಾಪಿಸಿದರು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. (ಪಾಲಾಕ್ಷ, 1995, ಪುಟ 128), ಇವರ ತರುವಾಯ ಮಧ್ವಾಚಾರ್ಯರರು, 1. ಸೋಂದ ಮಠ, 2. ಶಿರೂರು ಮಠ, 3. ಕಣ್ಣೂರು ಮಠ, 4. ಪೇಜಾವರ ಮಠ, 5. ಫಲಿಮಾರು ಮಠ, 6. ಅದಮಾರು ಮಠ, 7. ಕೃಷ್ಣಾಪುರ ಮಠ, 8. ಪುತ್ತಿಗೆ ಮಠ ಎಂಬ ಅಷ್ಟಮಠಗಳನ್ನು ಸ್ಥಾಪಿಸಿದರು.

ಭಾರತದಲ್ಲಿ ಮಠಗಳನ್ನು ಕುರಿತು ಅಧ್ಯಯನ ಮಾಡಿರುವ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಕಮಿಷನ್ ಸಲ್ಲಿಸಿರುವ ವರದಿಯಲ್ಲಿ ಮಠಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಲಿಂಗಾಯತ ಮಠಗಳು ಲಿಂಗಾಯತ ಧರ್ಮದ ಇತಿಹಾಸದಷ್ಟೇ ಲಿಂಗಾಯತ ಮಠಗಳ ಇತಿಹಾಸದ ಮೂಲವೂ ನಿಗೂಢವಾಗಿದೆ. ಈ ಮಠಗಳು ಬಹು ಪ್ರಾಚೀನ ಕಾಲದವೆಂಬ ಅಭಿಪ್ರಾಯ ನೆಲಸಿದ್ದರೂ ಶಾಸನಗಳು ಮತ್ತು ಇತರೆ ಸಾಹಿತ್ಯ ಕೃತಿಗಳು ಈ ಮಠಗಳ ಇತಿಹಾಸ 12ನೆಯ ಶತಮಾನದ ನಂತರದ ಕಾಲವೆಂದು ತಿಳಿಸುತ್ತವೆ. ಅಂದರೆ ಕಾಳಾಮುಖ ಮಠಗಳ ಆರಂಭ ಕಾಲದವೆಂದು ಕಾಣುತ್ತವೆ. ಕನ್ನಡ ನಾಡಿನಲ್ಲಿ ಕ್ರಿ.ಶ. 10–12ನೆಯ ಶತಮಾನದಲ್ಲಿ ಕಾಳಾಮುಖ ಶೈವ ಮಠಗಳು ಅತ್ಯಂತ ಪ್ರಸಿದ್ಧವಾಗಿದ್ದವು. ತಪೋನಿಷ್ಠರೂ, ಯೋಗಿಗಳೂ ಆದ ಕಾಳಾಮುಖ ಗುರುಗಳು ಸ್ಥಾಪಿಸಿದ ಶೈವ ಮಠಗಳು ಬಸವಾದಿ ಶರಣರು ಕೈಗೊಂಡ ವೈಚಾರಿಕ ಕ್ರಾಂತಿಯ ಕಾಲದಲ್ಲಿ ಲಿಂಗಾಯತ ಮಠಗಳಾಗಿ ಪರಿವರ್ತನೆ ಹೊಂದಿರಬೇಕು. ಇದಕ್ಕೆ ಬೆಳಗಾವಿ ಜಿಲ್ಲೆಯ ಹುಲಿಮಠವು ಒಂದು ದೃಷ್ಟಾಂತ (**ಚಿದಾನಂದ ಮೂರ್ತಿ ಎಂ.,1966,ಪುಟ 156**).

ಶಿವಶರಣರ ಕ್ರಾಂತಿಯ ಕಾಲವು (12–13ನೆಯ ಶತಮಾನ) ಲಿಂಗಾಯತ ಮಠಗಳ ಇತಿಹಾಸದಲ್ಲಿ ಬಹುಮುಖ್ಯವಾಗಿದೆ. ಈ ಕಾಲದ ಶರಣರ ದೃಷ್ಟಿಯಲ್ಲಿ 'ಮಠ' ಎಂಬುದರ ಕಲ್ಪನೆಯೇ ಬೇರೆಯಾಗಿತ್ತು. ಈ ಕಾಲದ ಶಿವಶರಣರು ವಾಸಿಸುವ ಪ್ರತಿ ಮನೆಯೂ 'ಮಠ'ವಾಗಿತ್ತು. ಶರಣರು ಕೇವಲ ಸಾಮಾಜಿಕ ಬದುಕಿಗೆ ತಮ್ಮ ಕಾರ್ಯ ವ್ಯಾಪ್ತಿಯನ್ನು ಸೀಮಿತಗೊಳಿಸದೆ, ಧಾರ್ಮಿಕ ತತ್ವಗಳಿಗೂ ವಿಸ್ತರಿಸಿದರು. **'ಮಠ'** ಪದ ಆ ಕಾಲದ ಶರಣರ ವಚನಗಳಲ್ಲಿದೆ. ಆರ್.ಸಿ.ಹಿರೇಮಠ ಅವರ ಪ್ರಕಾರ 2,85,770 ದಾಸೋಹ ಮಠಗಳು, 10,000 ನಿತ್ಯ ನೇಮಿಗಳ ಮಠಗಳು, 15,000 ವ್ರತಸ್ಥ ಮಠಗಳು, 12,000 ಅಕ್ಕಪ್ರಸಾದಿಗಳ ಮಠಗಳು, 1064 ಶೀಲ ಸಂಪನ್ನರ ಮಠಗಳು ಇದ್ದವೆಂದು ತಿಳಿಯುತ್ತದೆ . (**ಹಿರೇಮಠ ಆರ್.ಸಿ., 1965, ಪುಟ 357**).

ಬಸವಾದಿಗಳು ಮಾಡಿದ ವಿಚಾರ ಕ್ರಾಂತಿಯು ಸಮಾಜದಲ್ಲಿ ಬೇರೂರಿದ್ದ ಗೊಡ್ಡು ಸಂಪ್ರದಾಯ ಹಾಗೂ ಮೂಢ ನಂಬಿಕೆಗಳನ್ನು ತೊಡೆದುಹಾಕಿತು. ಇದನ್ನು


ಮುಂದುವರಿಸಿಕೊಂಡು ಹೋಗಲು ಧಾರ್ಮಿಕ ಸಂಸ್ಥೆಯೊಂದನ್ನು ಸ್ಥಾಪಿಸುವುದು ಅವಶ್ಯಕವಾಗಿತ್ತು. ಪ್ರಾಚೀನ ಲಿಂಗಾಯತ ಈ ನೂತನ ವಿಚಾರ ಕ್ರಾಂತಿಯನ್ನು ಒಪ್ಪಲಿಲ್ಲ. ಈ ಮೊದಲೇ ಸ್ಥಾಪನೆಯಾಗಿದ್ದ ಪಂಚಾಚಾರ್ಯ ಪೀಠಗಳು ಬಸವಣ್ಣನವರ ವಿಚಾರ ಕ್ರಾಂತಿ, ತತ್ವಗಳನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಬಸವಣ್ಣನವರ ವಿಚಾರ ಕ್ರಾಂತಿಯನ್ನು ಅಂಗೀಕರಿಸಿ ಸಿದ್ಧರಾಮ, ರೇವಣಸಿದ್ಧ, ಮರುಳಸಿದ್ಧ ಮೊದಲಾದವರು ಲಿಂಗಾಯತ ಮಠಗಳ ಗುರುಸ್ಥಾನದಲ್ಲಿ ನಿಂತರು. ನೂತನ ಗುರುಪೀಠ ಗಳು ಪ್ರಾಚೀನ ಗುರುಪರಂಪರೆಯನ್ನು ಹಿಡಿದು ಸ್ಥಾಪಿಸಲ್ಪಟ್ಟವು. 12ನೆಯ ಶತಮಾನಕ್ಕಿಂತ ಹಿಂದೆ ಗುರುಪೀಠಗಳ ಜೊತೆಗೆ ನೂತನ ಆಚಾರ್ಯ ಪೀಠಗಳು ಹುಟ್ಟಿಕೊಂಡವು, ಅಂತಹ ಗುರು ಪೀಠಗಳಲ್ಲಿ ಸುತ್ತೂರು, ಯಳನಾಡು, ಅರಸೀಕೆರೆ, ನಂದಿಗುಡಿ, ಹೂಲಿ, ಶಿವಗಂಗೆ, ನಿಡುಮಾಮಿಡಿ, ತರಳಬಾಳು (ಸಿರಿಗೆರೆ) ಗುರುಪೀಠಗಳು ಮುಖ್ಯವಾದವುಗಳು.

ಕಲ್ಯಾಣ ಕ್ರಾಂತಿಯ ನಂತರ 14–15ನೆಯ ಶತಮಾನದಲ್ಲಿ ಲಿಂಗಾಯತ ಮಠಗಳಿಗೆ ನವಚೈತನ್ಯ ಬಂದದ್ದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರದ ಕಾಲದಲ್ಲಿ, ಈ ಕಾಲದಲ್ಲಿ ಲಿಂಗಾಯತರ ಎರಡು ಕೇಂದ್ರಗಳು ಆರಂಭವಾದವು. ಒಂದು ರಾಜಧಾನಿಯಾದ ವಿಜಯನಗರ ದಲ್ಲಿ, ಸೇನಾನಿ ಲಕ್ಕಣ್ಣ ದಂಡೇಶನ ನೇತೃತ್ವದಲ್ಲಿ ಸ್ಥಾಪಿತ ವಾಯಿತು. ಇನ್ನೊಂದು ನಾಗಿಣಿ ನದಿ ತೀರದ ಕುಣಿಗಲ್‌ನಲ್ಲಿ ತೋಂಟದ ಸಿದ್ಧಲಿಂಗ ಯತಿಗಳ ಆಧ್ಯಾತ್ಮಿಕ ಮಾರ್ಗದಲ್ಲಿ ಸ್ಥಾಪಿತವಾಯಿತು. **(ನರಸಿಂಹಾಚಾರ್ ಡಿ.ಎಲ್., 1936, ಪುಟ 355).** ಈ ಕೇಂದ್ರಗಳು ಲಿಂಗಾಯತ ಸಮಾಜದ ಮೇಲೆ ಪ್ರಬಲವಾದ ಪ್ರಭಾವ ಬೀರಿದವು. ಲಕ್ಕಣ್ಣ ದಂಡೇಶನ ಪ್ರೋತ್ಸಾಹದಿಂದ ಲಿಂಗಾಯತ ಸಾಹಿತ್ಯ ಹಾಗೂ ಧರ್ಮತತ್ವಗಳು ಹೊಸ ರೂಪ ಪಡೆದುಕೊಂಡವು. ಸಿದ್ಧಲಿಂಗ ಯತಿಗಳ ಪ್ರಭಾವದಿಂದ 700 ವಿರಕ್ತರು ನಾಡಿನಾದ್ಯಂತ ಹಳ್ಳಿ ಹಳ್ಳಿಗಳಲ್ಲಿ ಲಿಂಗಾಯತ ಮಠಗಳನ್ನು ಸ್ಥಾಪಿಸಿದರು. ಇವರಿಂದಲೇ ಲಿಂಗಾಯತ ಸಾಹಿತ್ಯ ಮತ್ತು ಸಂಸ್ಕೃತಿಗಳು ಪುನರುಜ್ಜೀವನಗೊಂಡು ಕರ್ನಾಟಕದಲ್ಲಿ ಮಾತ್ರವಲ್ಲದೆ ತಮಿಳುನಾಡು, ಆಂಧ್ರಪ್ರದೇಶ ಮುಂತಾದ ನೆರೆಯ ರಾಜ್ಯಗಳಲ್ಲಿ ವ್ಯಾಪಕವಾಗಿ ಪ್ರಚಾರಗೊಂಡವು **(ಉಮಾಪತಿ ಶಾಸ್ತ್ರಿ ಜಿ.ಎಂ ಮುನ್ನುಡಿ, 1969, ಪುಟ–62)**, ಮುಂದೆ ವಿಜಯನಗರ ಕಾಲದ ನಂತರ ಲಿಂಗಾಯತ ಮಠಗಳ ಪರಂಪರೆಯು ಕೆಳದಿ, ಕೊಡಗು, ಮೈಸೂರು, ಸ್ವಾದಿ ಬೀಳಗಿ, ಬಿದನೂರು, ಮಹಾನಾಡು ಮುಂತಾದ ಅರಸು ಮನೆತನದ ಆಳ್ವಿಕೆಯಲ್ಲಿ ಹಂಚಿ ಹೋದವು. ಈ ಕಾಲದಲ್ಲಿ ಲಿಂಗಾಯತ ಮಠಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಗುರಿಸಾಧನೆಯಲ್ಲಿ ಸಾಕಷ್ಟು ಶ್ರಮಿಸಿದವು.

ಕ್ರಿ.ಶ. 16ನೆಯ ಶತಮಾನದಲ್ಲಿ ಕೆಳದಿ ರಾಜ್ಯ ಸ್ಥಾಪನೆಯಾಯಿತು. ಕರ್ನಾಟಕದ ಬೇರೆ ಯಾವ ಭಾಗದಲ್ಲಿಯೂ ಕಾಣಿಸದಷ್ಟು ಲಿಂಗಾಯತ ಮಠಗಳು ಈ ಸಂಸ್ಥಾನದಲ್ಲಿ ಸ್ಥಾಪಿತವಾದವು **(ಚಿತ್ರಿಸ್ ಕೆ.ಎನ್ ಪುಟ 124)**. ಈ ರಾಜ್ಯದ ಮೂರು ರಾಜಧಾನಿಗಳಾದ ಕೆಳದಿ, ಇಕ್ಕೇರಿ ಮತ್ತು ಬಿದನೂರುಗಳಲ್ಲಿ ಅತಿ ಹೆಚ್ಚು ಮಠಗಳನ್ನು ಸ್ಥಾಪಿಸಿದರು. ಕೆಳದಿ ಅರಸರ ಕಾಲದಲ್ಲಿ ಐದು ರೀತಿಯ ಮಠಗಳಿದ್ದವು. ಅವು 1) ಮಹಾಮಹತ್ತಿನಮಠ, 2) ಮಹತ್ತಿನ ಮಠ, 3) ವಿರಕ್ತಮಠ, 4) ವಶೀಕೃತಮಠ, 5) ನಿರಾಸೆ ಮಠ ಜನ್ಮತಃ ಲಿಂಗಾಯತರಾದ ಕೆಳದಿ ಅರಸರು ತಾತ್ವಿಕ ಬೋಧನೆಗಳ ಅಡಿಯಲ್ಲಿ ಮಠಗಳ ಸ್ಥಾಪನೆಗೆ ಪ್ರೇರಣೆ ನೀಡಿದರು. ಆ ಕಾಲದಲ್ಲಿ ಇದ್ದಂತಹ ಮೂಢ ನಂಬಿಕೆ ಮುಂತಾದ ಸಂಪ್ರದಾಯಗಳನ್ನು ತೊಲಗಿಸಿ ಪರಿಶುದ್ಧ ಜೀವನ ನಡೆಸುವಂತೆ ಮಾಡಲು ಲಿಂಗಾಯತ ಮಠಗಳು ಶ್ರಮಿಸಿದವು. ಕೆಳದಿಯ ಪ್ರಸಿದ್ಧ ಅರಸರಲ್ಲಿ ಒಬ್ಬನಾದ ರಾಜ ಸೋಮಶೇಖರ ನಾಯಕನು ಬಿದನೂರು ಬಳಿಯ ಬಾಳೆಕೊಪ್ಪ ಎಂಬಲ್ಲಿ ಒಂದು ವಿರಕ್ತ ಮಠವನ್ನು ಕಟ್ಟಿಸಿದನು **(EC.VII S 428)**. ಈ ಕಾಲದಲ್ಲಿ ವ್ಯಾಪಾರಿಗಳು, ಶ್ರೀಮಂತರು ಹಾಗೂ ಶ್ರೀಸಾಮಾನ್ಯರು ಸಹ ಮಠಗಳನ್ನು ಕಟ್ಟಿಸಿದ್ದಾರೆ. ಜಂಬುಖಂಡಿ ಚೆನ್ನಿ ಎಂಬ ವೇಶ್ಯೆಯೂ ಹಿರಜೇನಿ ಎಂಬಲ್ಲಿ ಮಠವೊಂದನ್ನು ಕಟ್ಟಿಸಿದ್ದಾಳೆ **(ರಾಮಭಟ್ಟ ಬಿ.ಎಸ್., ಕೆಳದಿ ಮಠಗಳು, ಪುಟ 70)**.

ಕೆಳದಿ ಅರಸರ ಆಳ್ವಿಕೆಯ ಕಾಲದಲ್ಲಿ ವಿರಕ್ತ ಮಠಗಳಲ್ಲದೆ ಗುರುವರ್ಗದ ಮಠಗಳೂ ಇದ್ದವು, ಈ ಅರಸರು ತಮ್ಮ ಆಳ್ವಿಕೆಯಲ್ಲಿ ಎಲ್ಲ ರೀತಿಯ ಮಠಗಳಿಗೂ ಭೂದಾನ ನೀಡಿದ್ದಾರೆ ಎಂದು ಆ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ. ಈ ಎಲ್ಲ ಮಠಗಳು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಕೆಲಮಠಗಳ ಮಠಾಧಿಪತಿಗಳು ಸಂಗೀತ, ಜ್ಯೋತಿಷ್ಯ, ಸಾಹಿತ್ಯ, ವೈದ್ಯಕೀಯ ಕ್ಷೇತ್ರಗಳಲ್ಲಿ ಪರಿಣಿತರಾಗಿದ್ದರು **(ಅದೇ, ಪುಟ–71)** ಕ್ರಿ.ಶ. 1728ರ ಹಿಂದೆಯೇ ಕೊಡಗು ಸಂಸ್ಥಾನದಲ್ಲಿ ಲಿಂಗಾಯತ ಮಠಗಳು ಇದ್ದವು ಎಂದು ವೀರರಾಜೇಂದ್ರ ಒಡೆಯನ ತಾಮ್ರ ಶಾಸನದಿಂದ ತಿಳಿದು ಬರುತ್ತದೆ **(EC. Vol-1 ; 1927, No.63)**. ವೀರರಾಜೇಂದ್ರ ಒಡೆಯನು ಮಹದೇವಪುರ ಎಂಬಲ್ಲಿ ಒಂದು ವಿರಕ್ತ ಮಠವನ್ನು 18ನೆಯ ಶತಮಾನದ ಅಂತ್ಯಭಾಗದಲ್ಲಿ ಸ್ಥಾಪಿಸಿದ ಸಂಗತಿ ಶಾಸನಗಳಲ್ಲಿ ವ್ಯಕ್ತವಾಗಿದೆ **(ಅದೇ, ಪುಟ 29)**. ವೀರರಾಜೇಂದ್ರ ಒಡೆಯನು ತನ್ನ ಆಳ್ವಿಕೆಯ ಕಾಲದಲ್ಲಿ 57 ಲಿಂಗಾಯತ ಮಠಗಳನ್ನು ಸ್ಥಾಪಿಸಿ ಅವುಗಳಿಗೆ ಭೂಮಿಯನ್ನು ದಾನವಾಗಿ ಕೊಟ್ಟನು ಎಂದು ಹೇಳಲಾಗಿದೆ **(ಕೃಷ್ಣಯ್ಯ ಡಿ. ಎನ್, 1974, ಪುಟ 345)**. 13–19ನೆಯ ಶತಮಾನ ದಲ್ಲಿ ಕೊಡಗು ಸಂಸ್ಥಾನದಲ್ಲಿ ಲಿಂಗಾಯತ ಮಠಗಳ ಸಂಖ್ಯೆ ಹೆಚ್ಚಾಗಿದ್ದವು ಹಾಗೂ ಈ ಸಂಸ್ಥಾನದ ಅರಸರು ಅವುಗಳನ್ನು ಪ್ರೋತ್ಸಾಹಿಸುತ್ತಿದ್ದರು ಎಂದು ತಿಳಿದಿದೆ.

# ಹುತಾತ್ಮ ಮಲ್ಲಪ್ಪ ಜೀನಹಳ್ಳಿ



**ಕತ್ತಿಗೆ ಚನ್ನಪ್ಪ**
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

ಬ್ರಿಟಿಷರ ಕಾಲದಲ್ಲಿ ಅವರ ವಿರುದ್ಧ ದಂಗೆ ಎದ್ದ ಹುತಾತ್ಮರ ಹೆಸರುಗಳು ಭಾರತೀಯರಲ್ಲಿ ಕರ್ನಾಟಕದ ಅನೇಕ ಹುತಾತ್ಮರು ಸ್ಮರಣೀಯರಾಗಿದ್ದಾರೆ. ಅದರಲ್ಲಿ ಮೆಣಸಿನಹಾಳ್ ತಿಮ್ಮನಗೌಡ ಪಾಟೀಲ್‌ರವರ ಸಮಕಾಲೀನರಾದ ಮಲ್ಲಪ್ಪ ಕರಿಬಸಪ್ಪ ಜೀನಹಳ್ಳಿರವರು ಬ್ರಿಟಿಷರ ವಿರುದ್ಧ ಅಸಹಕಾರ ಚಳವಳಿಯಲ್ಲಿ ಭಾಗವಹಿಸಲು ಅನೇಕ ಕಾರಣಗಳು ಗತವೈಭವದ ಗರ್ಭದಲ್ಲಿ ಹುದಗಿಕೊಂಡಿವೆ. ಮಲ್ಲಪ್ಪ ಜೀನಹಳ್ಳಿರವರು ಹೊನ್ನಾಳಿ ತಾಲ್ಲೂಕು ಜೀನಹಳ್ಳಿ ಗ್ರಾಮದ ಮುಕ್ಕಣ್ಣಾರ ವಂಶಸ್ಥರು ಅಂದರೆ ನೊಳಂಬ ಅರಸು "ತ್ರಿನಯನ" ಮೂಲವಂಶದವರಾಗಿದ್ದು ಬೆಳಗುತ್ತಿ ಸಿಂಧೂ ಅರಸರ ಕಾಲದಲ್ಲಿ ಈ ಪ್ರಾಂತ್ಯವು ಜೈನರ ಆಡಳಿತಕ್ಕೆ ಒಳಪಟ್ಟಿತ್ತು. ಜಿನ ಅಂದರೆ ಜೈನ ಈ ಪ್ರಾಂತ್ಯದ ಜೈನ ಅರಸರನ್ನು ನೊಳಂಬ ಪಾಳೇಗಾರ ತಂಬರಸ ನಾಯಕನು ತುರುಗಳ ಕಾಳಗದಲ್ಲಿ ಸೋಲಿಸಿ ತಮ್ಮ ಆಡಳಿತದ ವ್ಯಾಪ್ತಿಗೆ ಸೇರಿಸಿಕೊಳ್ಳುತ್ತಾರೆ.


ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಮುಕ್ಕಣ್ಣಾರ ವಂಶಸ್ಥರು ಜೀನಹಳ್ಳಿ ಗ್ರಾಮದ ಪಟೇಲರಾಗಿ (ಗೌಡ) ಆಡಳಿತವನ್ನು ನೋಡಿಕೊಳ್ಳುತ್ತಿರುತ್ತಾರೆ. ಆಗಾಗಲೇ ಈ ಪ್ರಾಂತ್ಯದಲ್ಲಿ ಕಂಟ್ರೋಲ್ ಕಾಲ ಬಂದಿರುತ್ತದೆ. ಬ್ರಿಟಿಷರು ವ್ಯಾಪಾರದ ಹಿನ್ನಲೆಯಲ್ಲಿ ಭಾರತಕ್ಕೆ ಬಂದು ಒಂದೊಂದು ಸಾಮಂತ ರಾಜರ ಮತ್ತು ಪಾಳೇಗಾರರ ವಿರುದ್ಧ ಹೋರಾಟ ಮಾಡಿ ತಮ್ಮ ಕೈವಶ ಮಾಡಿಕೊಳ್ಳುತ್ತಾರೆ. ಈ ಹಿನ್ನಲೆಯಲ್ಲಿ ದಕ್ಷಿಣಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಅಲ್ಲಿಲ್ಲಿ ಕೂಗು ಎದ್ದಿರುತ್ತದೆ. ಅಂತಹ ಸಂಧರ್ಭದಲ್ಲಿ ಪರಂಗಿಯರು ಈ ಪಟೇಲ್ಕಿಯನ್ನು ಬೇರೆಯವರಿಗೆ ತಮ್ಮ ಹಿಂಬಾಲಕರಿಗೆ ಕಸಿದುಕೊಟ್ಟಿರುತ್ತಾರೆ. ಮುಕ್ಕಣ್ಣಾರ ಸಿದ್ಧರಾಮಪ್ಪ ತಂದೆ ಶಿವಪ್ಪ ಇವರು ಮುಕ್ಕಾಣ್ಣಾರ ವಂಶದವರಾಗಿದ್ದು (ಶಿವಮೊಗ್ಗ) ವಾಸ ಜೀನಹಳ್ಳಿ ಸಿದ್ಧರಾಮಪ್ಪ ಇವರ ತಮ್ಮನೇ ಮಲ್ಲಪ್ಪ ಜೀನಹಳ್ಳಿ ಇವರು ಜೀನಹಳ್ಳಿಯಿಂದ ಪರಂಗಿಯರ ವಿರುದ್ಧದ ಯಾತ್ರೆಯಲ್ಲಿ ಭಾಗವಹಿಸುತ್ತಾರೆ. ಆಗಲೇ ಶಿಕಾರಿಪುರ ತಾಲ್ಲೂಕು ಈಸೂರು ಗ್ರಾಮದಲ್ಲಿ ನಡೆದ ಚಳುವಳಿ ಮತ್ತು ದಂಗೆಯ ಕೂಗು ದೇಶದ ಉದ್ದಕ್ಕೂ ಹರಡಿರುತ್ತದೆ. "ಏಸೂರು ಕೊಟ್ಟರು ಈಸೂರು ಬಿಡೇವು" ಎಂಬ ಧ್ವನಿ ಒಕ್ಕೊರಲಿನಿಂದ ಕೂಡಿರುತ್ತದೆ.

ಈ ಕೂಗುನ್ನು ಕೇಳಿದ ಮಲ್ಲಪ್ಪ ಜೀನಹಳ್ಳಿ ಇವರು ಬೆಳಗುತ್ತಿ, ನರಿನಕೆರೆ ಗಂಗವ್ವನ ಸರದ ಮೂಲಕ ಕಾಲು ದಾರಿ ಹಿಡಿದು ಈಸೂರನ್ನು ಸೇರುತ್ತಾರೆ. ಅಲ್ಲಿ ಅವರ ಗುರುಗಳಾದ ನಾಗೇಶಾಚಾರ್ ಅವರ ಮಾರ್ಗದರ್ಶನದಲ್ಲಿ ಈಸೂರು ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಮಲ್ಲಪ್ಪನವರು ವಿಧುರರಾಗಿದ್ದು ದೇಶದ ಅಭಿಮಾನ ಹಾಗೂ ಪರಂಗಿಯರ ವಿರುದ್ಧದ ಹೋರಾಟದಲ್ಲಿ ಭಾಗಿಯಾಗುತ್ತಾರೆ. ಇವರು ಚಿಕ್ಕ ವಯಸ್ಸಿನಲ್ಲೆಯೇ ತಂದೆ, ತಾಯಿಯುವರುನ್ನು ಕಳೆದುಕೊಂಡಿರುತ್ತಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೀನಹಳ್ಳಿ ಮಲ್ಲಪ್ಪ ಭಾಗಿಯಾಗಿದ್ದು ಈ ಭಾಗದ ಜನರ ಹೆಮ್ಮೆ ಅನಿಸುತ್ತದೆ. ಆಗ ಬ್ರಿಟಿಷ್ ಅಧಿಕಾರಿಗಳು ಹಾಗೂ ಸರ್ಕಾರಿ ನೌಕರರ ವಿರುದ್ಧ ಹೋರಾಟ ಮಾಡಿದ ಈಸೂರಿನ ಮಹಾನೀಯರುಗಳಲ್ಲಿ ಮಲ್ಲಪ್ಪ ಜೀನಹಳ್ಳಿ ಒಬ್ಬರು. ಕಾಲಘಟ್ಟದಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದು ತೀರ್ಥರಾಮೇಶ್ವರ ಗುಡ್ಡದಲ್ಲಿ ಆಡಗಿದ್ದೂ ರಾತ್ರಿ ವೇಳೆ ಜೀನಹಳ್ಳಿಗೆ ಬಂದು ಊಟಮಾಡುವ ಸಂದರ್ಭದಲ್ಲಿ ಬಂಧಿಸಿ ಎಳೆದುಕೊಂಡು ಹೋಗಿ ಬ್ರಿಟೀಷರು ಗಲ್ಲಿಗೇರಿಸಿದವರಲ್ಲಿ ಮಲ್ಲಪ್ಪ ಜೀನಹಳ್ಳಿ ಒಬ್ಬರು. ಇವರು ಖೈದಿ ನಂ. 7869 ಆಗಿದ್ದು ದಿನಾಂಕ: 08–03–1943ರಲ್ಲಿ ಗಲ್ಲಿಗೇರಿಸಲ್ಪಡುತ್ತಾರೆ. (ನೇಣುಗಂಬಕ್ಕೆ ಕೊರಳನ್ನೊಡ್ಡುತ್ತಾರೆ.) ಇವರ ವಂಶಸ್ಥರಾದ ಶ್ರೀ ಪರಮೇಶ್ವರಪ್ಪ ಜೀನಹಳ್ಳಿರವರು ಜೀನಹಳ್ಳಿ ಗ್ರಾಮದಲ್ಲಿ ವಾಸವಿದ್ದು ನಮ್ಮ ವಂಶದವರು ಬ್ರಿಟಿಷರ ವಿರುದ್ಧ ಹೋರಾಡಿದ್ದು ನಮಗೆ ಹೆಮ್ಮೆಯಿಂದು ಹೇಳಿಕೊಳ್ಳುತ್ತಾರೆ.

"ಲಿಂಗಬಾಹ್ಯನ ಆಚಾರ ಬ್ರಷ್ಟನ ತಪ್ಪುತನ
ಗುರುಲಿಂಗಜಂಗಮನ ಕೊಂದವನ
ಪಾದೋದಕ ಪ್ರಸಾದ ದೂಷಕನ
ವಿಭೂತಿರುದ್ರಾಕ್ಷಿನಿಂದಕನಕಂಡಡೆ
ಶಕ್ತಿಯುಳ್ಳಡೆ ಸಂಹಾರ ಮಾಡುವುದು
ಶಕ್ತಿ ಇಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು
ಶಿವಮಂತ್ರವ ಜಪಿಸುವುದು
ಅಷ್ಟೂ ಆಗದಿದ್ದಡೆ, ಆ ಸ್ಥಳವ ಬಿಡುವುದು
ಅಲ್ಲದಿದ್ದಡೆ ಕುಂಬಾಪಾತಕನಾಐಕನರಕದಲ್ಲಿಕ್ಕುವ
ಶ್ರೀಗುರು ಸಿದ್ದೇಶ್ವರನು."

**– ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ**

# ಪರಿಸರ



**ಆರ್.ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

**"ವೃಷೋರಕ್ಷತಿ ರಕ್ಷಿತಃ"** ಪರಿಸರ ಸಂರಕ್ಷಿಸಿ ಜೀವ ಜಂತುಗಳನ್ನು ಉಳಿಸಿ, ಗಾಳಿ, ಬೆಳಕು, ನೀರು, ನೆಲ, ಗಿಡ–ಮರಗಳು, ಪ್ರಾಣಿ ಪಕ್ಷಿಗಳು ಸೇರಿ ಪರಿಸರ ಎನ್ನುತ್ತೇವೆ. ಕಾಡಿದ್ದರೆ ಕಾರ್ಮೋಡ, ಕಾರ್ಮೋಡವಿದ್ದರೆ ಮಳೆ, ಮಳೆ ಬಂದರೆ ಇಳೆ, ಇಳೆ ಇದ್ದರೆ ಬೆಳೆ, ಆಗಲೇ ಭೂಮಿ ಹೆಚ್ಚು ಹಸಿರಾಗುವುದು.

ಗಿಡಗಳನ್ನು ನೆಟ್ಟು ಬೆಳೆಸಿದರೆ ಮರವಾಗುತ್ತದೆ. ಪ್ರಾಣಿ–ಪಕ್ಷಿಗಳು ಉಸಿರಾಡಲು ಮರದಿಂದ ಶುದ್ಧ ಗಾಳಿ, ಬಿಸಿಲಿನಿಂದ ದಣಿವು ಕಡಿಮೆ ಮಾಡಿಕೊಳ್ಳಲು ನೆರಳು, ಪ್ರಾಣಿ ಪಕ್ಷಿಗಳಿಗೆ ಆಶ್ರಯ, ಹಸಿವಿಗೆ ಹಣ್ಣು (ಆಹಾರ) ಮರದ ಬೇರುಗಳು ನೀರಿನ ಅಂಶವನ್ನು ಈರಿ, ಭೂಮಿಯ ಫಲವತ್ತತೆಯನ್ನು ಜಾಸ್ತಿ ಮಾಡುತ್ತದೆ.

ಗಿಡ–ಮರಗಳು ವಿಷಕಾರಿ ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ಫಲಭರಿತ ಮರಗಳು ಭಾಗುತ್ತವೆ. ಇದರ ಫಲ ಪಡೆದ ಮಾನವ ಬೀಗುತ್ತಾನೆ. "ಪರೋಪಕಾರರ್ಥಂ ಇದಂ ಶರೀರಂ" ಎಂಬಂತೆ ವೃಕ್ಷಗಳು ಪರೋಪಕಾರಿಗಳಾಗಿರುತ್ತವೆ. ಒಮ್ಮೆ ಒಬ್ಬರು ಮರವನ್ನು ಕೇಳಿದರಂತೆ, ಮನುಷ್ಯರು ನಿನಗೆ ಕಲ್ಲು ಹೊಡೆಯುತ್ತಾರೆ, ಅವರಿಗೆ ನೀನು ಹಣ್ಣು ಕೊಡುತ್ತೀಯ ಎಂದು, ಅದಕ್ಕೆ ಆ ವೃಕ್ಷವು 'ಯಾರು ನಮಗೆ ಕಲ್ಲು ಹೊಡೆಯುತ್ತಾರೋ ಅವರಿಗೆ ಹಣ್ಣು ಕೊಡು ಎಂದು ನಮ್ಮ ತಾಯಿ ಹೇಳಿದ್ದಾರೆ' ಅದಕ್ಕೆ ನಾನು ಕೊಡುತ್ತೇನೆ. ಯಾರು ನಮಗೆ ಕೆಡಕು ಮಾಡುತ್ತಾರೋ ಅವರಿಗೆ ನಾವು ಉಪಕಾರ ಮಾಡಬೇಕು, ಅಪಕಾರ ಮಾಡಬಾರದು.

ಇಂದು ಮನುಷ್ಯ ಕಾಡು ಕಡಿದು ನಾಡು ಮಾಡಿದ್ದಾನೆ, ಕಾಡೆಲ್ಲ ನಾಡಾಗಿದೆ. ಶುದ್ಧ ನೆಲ, ಜಲ, ವಾಯು ಸಿಕ್ಕುವುದೇ ಕಷ್ಟಕರವಾಗಿದೆ. ಇವುಗಳು ಶುದ್ಧವಾಗಬೇಕಾದರೆ ಪ್ರತಿಯೊಬ್ಬರು ಅರ್ಥ ಮಾಡಿಕೊಂಡು ಗಿಡ–ಮರಗಳನ್ನು ಬೆಳೆಸಬೇಕು. ಪರಿಸರವನ್ನು ರಕ್ಷಿಸಬೇಕು, ನಾವು ದೇವರ ಮುಂದೆ ಲಕ್ಷ ದೀಪಗಳನ್ನು ಹಚ್ಚಿ ಲಕ್ಷ ದೀಪೋತ್ಸವ ಮಾಡುವಂತೆ, ಲಕ್ಷೋಪ ಲಕ್ಷ ಸಸಿಗಳನ್ನು ನೆಟ್ಟು ಬೆಳಸಿ ಸಸ್ಯೋತ್ಸವ ಮಾಡಬೇಕು, ಇದು ನಾವು ಸಮಾಜಕ್ಕೆ ಮಾಡುವ ಕೆಲಸ, ಆಗ ಈ ಕಾರ್ಯ ದೇವರ ಕಾರ್ಯವಾಗುತ್ತದೆ. ಪರಿಸರ ಹಾಳು ಮಾಡುವುದರಿಂದ ನಮ್ಮನ್ನ ನಾವೇ ಹಾಳು ಮಾಡಿಕೊಂಡಂತೆ ಹಸಿರು ಕಾಣದೆ ಉಸಿರು ಕಟ್ಟುತ್ತಿದ್ದೇವೆ. "ಹಸಿರೇ–ಉಸಿರು" ನಾವು ಆರೋಗ್ಯವಾಗಿರಬೇಕಾದರೆ ಪರಿಸರ ಬಹಳ ಅಗತ್ಯ. ಕಾಡು ನಸಿಸಿರುವುದರಿಂದ ಕಾಡು ಪ್ರಾಣಿಗಳ ಸಂತತಿ ನಾಶ ವಾಗುತ್ತಿದೆ.

ಇವುಗಳನ್ನು ರಕ್ಷಿಸಲು ಕಾಡನ್ನು ಬೆಳೆಸಬೇಕು.

ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತಾಪ ಜಾಸ್ತಿ ಯಾಗಿ ಹವಾಮಾನ ವೈಪರಿತ್ಯದಿಂದಾಗಿ ತಾಪಮಾನ ಗರಿಷ್ಠ ಮಟ್ಟಕ್ಕೆ ತಲುಪಿದೆ. ಸ್ವಲ್ಪ ಮಟ್ಟಿಗಾದರೂ ತಾಪಮಾನ ಕಡಿಮೆ ಮಾಡಲು ಬೆಂಗಳೂರು ನಗರಗಳಂತಹ ದೊಡ್ಡ ದೊಡ್ಡ ಪ್ರದೇಶಗಳಲ್ಲಿ ಪ್ರತಿ ಮನೆಯಲ್ಲೂ ಒಂದು ಚಿಕ್ಕ ಗಾರ್ಡನ್ ಇರಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಆದ್ದರಿಂದ ನಗರಗಳಲ್ಲಿ ಮನೆಯ ಸುತ್ತ–ಮುತ್ತ ಅಥವಾ ಟೆರೆಸ್ ಮೇಲೆ ಒಂದಷ್ಟು ಗಿಡಗಳನ್ನು ಬೆಳೆಸಿದರೆ ಅಂದ ಕೊಡುವುದರ ಜೊತೆಗೆ ಮನೆಯನ್ನು ಸುಂದರವಾಗಿ ಹಾಗೂ ತಂಪಾಗಿಡುವಲ್ಲಿ ಗಿಡಗಳು ಸಹಕರಿಸುತ್ತವೆ.

ಆದ್ದರಿಂದ ಮನೆಯ ಸುತ್ತ ಎಷ್ಟು ಸಾಧ್ಯವೋ ಅಷ್ಟು ಗಿಡಗಳನ್ನು ಬೆಳೆಸುವುದು ಉತ್ತಮ ಹಾಗೂ ಅನಿವಾರ್ಯವಾಗಿರುತ್ತದೆ. ಆಗ ಸ್ವಲ್ಪ ಮಟ್ಟಿಗಾದರೂ ತಾಪ ಕಡಿಮೆಯಾಗುತ್ತದೆ.

ಪ್ರತಿ ವರ್ಷ ಜೂನ್ 5 ರಂದು "ವಿಶ್ವ ಪರಿಸರ ದಿನವನ್ನಾಗಿ ಆಚರಿಸುತ್ತಿರುವುದು ಸಂತೋಷವೇ, ಇದು ಅರ್ಥ ಪೂರ್ಣವಾಗಬೇಕಾದರೆ ಪ್ರತಿಯೊಬ್ಬ ನಾಗರೀಕರು ಒಂದೊಂದು ಸಸಿ ನೆಟ್ಟು ಬೆಳಸಿ ಮರವನ್ನಾಗಿಸಿದರೆ ನಮ್ಮ ಬದುಕು ಸಾರ್ಥಕವಾಗುತ್ತದೆ. ಆಗ ನಾವು ಪರಿಸರದೊಂದಿಗೆ ಬದುಕಲು ಸಾಧ್ಯವಾಗುತ್ತದೆ. ಆದ್ದರಿಂದ ಪರಿಸರ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ

**"ಸಸಿ ಬೆಳಸಿ–ಮುಂದಿನ ಪೀಳಿಗೆ ಉಳಿಸಿ"**

**"ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ**
**ಮೃದು ವಚನವೆ ಸಕಲ ಜಪಂಗಳಯ್ಯಾ**
**ಮೃದು ವಚನವೆ ಸಕಲ ತಪಂಗಳಯ್ಯಾ**
**ಸದುವಿನಯವೆ ಸದಾಶಿವನೊಲುಮೆಯಯ್ಯಾ**
**ಕೂಡಲ ಸಂಗಯ್ಯನಂತದೊಲ್ಲನಯ್ಯ"**

**– ಬಸವಣ್ಣನವರು**

# ನೊಳಂಬರ ಕೆರೆಕಟ್ಟೆಗಳು

**ಅರಳಗುಪ್ಪೆ** : ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಅರಸೀಕೆರೆ ಮಾರ್ಗವಾಗಿ ಚಲಿಸುವ ರೈಲುಗಳಲ್ಲಿ ಸಂಚರಿಸುವಾಗ 130 ಕಿ.ಮೀ ದೂರದಲ್ಲಿ ಇರುವುದು ಅರಳಗುಪ್ಪೆ ಮಹಾಗ್ರಾಮ. ಪಶ್ಚಿಮಕ್ಕೆ 15 ಕಿ.ಮೀ ದೂರದಲ್ಲಿ ಕಲ್ಪತರು ನಗರ ತಿಪಟೂರು, ದಕ್ಷಿಣಕ್ಕೆ ತುರುವೇಕೆರೆ, ಉತ್ತರಕ್ಕೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಗಳಿವೆ.

ಈ ಮಾರ್ಗದಲ್ಲಿ ಸಂಚರಿಸುವ ಪ್ಯಾಸೆಂಜರ್ ರೈಲುಗಳ ನಿಲುಗಡೆ ಇದೆ. ತಿಪಟೂರಿನಿಂದ ಪ್ರತಿದಿನ ನಿಗದಿತ ಸಮಯದಲ್ಲಿ ಬಸ್ ಸೌಲಭ್ಯವಿದೆ. ಸ್ವಂತ ವಾಹನಗಳಲ್ಲಿ ಬರುವವರಿಗೆ ಬೆಂಗಳೂರು ಹೊನ್ನಾವರ ಬಿ.ಹೆಚ್. ರಸ್ತೆಯಲ್ಲಿ ಕೆ.ಬಿ. ಕ್ರಾಸ್ ನಂತರ ಬಿಳಿಗೆರೆ ಗ್ರಾಮದಿಂದ ಎಡಭಾಗಕ್ಕೆ 8 ಕಿ.ಮೀ ದೂರದಲ್ಲಿರುವ ಅರಳಗುಪ್ಪೆ ಕಲೆ ಹಾಗೂ ಸಾಂಸ್ಕೃತಿಕ ಕೇಂದ್ರ ಇಲ್ಲಿಗೆ ಬರುವವರಿಗೆ ಮಾರ್ಗ ಮಧ್ಯದಲ್ಲಿ ಸಿಗುವ ಸ್ಥಳಗಳೆಂದರೆ ಕಂಚಿರಾಯನಬೆಟ್ಟ, ಕರಡಿ ಹಾಗೂ ಬೊಮ್ಮನಹಳ್ಳಿ ರಂಗನಾಥಸ್ವಾಮಿಬೆಟ್ಟ ತುರುವೇಕೆರೆ ಮಾರ್ಗದಲ್ಲಿ ಪ್ರಸಿದ್ಧ ಮಲ್ಲಾಘಟ್ಟ ಹಾಗೂ ನೊಣವಿನ ಕೆರೆಗಳಿವೆ. ಪೂರ್ವಭಾಗಕ್ಕೆ ಸಿಮೆಂಟ್ ಕಾರ್ಖಾನೆ ಅಮ್ಮಸಂದ್ರದಲ್ಲಿದೆ. ಇಲ್ಲಿಂದ ಬಾಣಸಂದ್ರದವರೆಗೂ ಡೊಂಕಿಲ್ಲದ ನೇರ ರೈಲ್ವೆ ಮಾರ್ಗ ಸಂಚರಿಸುವಾಗ ಎರಡು ಬದಿಗಳಲ್ಲೂ ಕಾಣುವ ಕೆರೆ ಕಟ್ಟೆ, ಅಡಿಕೆ ತೆಂಗಿನ ತೋಟಗಳು, ಈ ನಡುವೆ ಕಾಣುವುದು ಕಂಚಿರಾಯಸ್ವಾಮಿ ಬೆಟ್ಟ, ಬೊಮ್ಮನಹಯಳ್ಳಿ ಶ್ರೀ ರಂಗನಾಥಸ್ವಾಮಿ ಬೆಟ್ಟ ಅರಳಗುಪ್ಪೆ ಸಮೀಪ ಬರುತ್ತಿದ್ದಂತೆ ಕಾಣುವುದು. ಕೆರೆ ಹಾಗು ನೊಳಂಬರ ಕಲ್ಲೇಶ್ವರ ದೇವಾಲಯ ಮತ್ತು ಶಾಲೆಗಳು ಗ್ರಾಮದೇವತೆ ಕೆಂಪಮ್ಮ ದೇವಾಲಯ ಹೊಯ್ಸಳರ ಕಾಲದ ಚನ್ನಕೇಶವ ದೇವಾಲಯ ಸಂಚಾರಿಗಳಿಗೆ ಕಾಣುವುದಿಲ್ಲ. ಊರಿನ ಒಳಭಾಗಕ್ಕೆ ಹೋದಾಗ ನೋಡಬಹುದು. ಕಲ್ಲೇಶ್ವರ ದೇವಾಲಯ 9ನೇ ಶತಮಾನದಲ್ಲಿ ಹಾಗೂ 13ನೇ ಶತಮಾನದಲ್ಲಿ ಚನ್ನಕೇಶವ ದೇವಾಲಯ ನಿರ್ಮಾಣವಾಗಿರುವುದು ತಿಳೀಯುತ್ತದೆ. ಜೊತೆಗೆ 8 ದೇವಾಲಯಗಳು ಇಲ್ಲಿವೆ.




**ಶಿವಕುಮಾರ್ .ಎಸ್**
ಈಡೇನಹಳ್ಳಿ, ತಿಪಟೂರು ತಾ.
ತುಮಕೂರು ಜಿಲ್ಲೆ.


ಅರಳಗುಪ್ಪೆಯ ಕಾಲಘಟ್ಟಗಳಲ್ಲಿ ಹಲವಾರು ರಾಜರುಗಳ ಆಳ್ವಿಕೆಗೆ ಸೇರಿದೆ. ಹೊಯ್ಸಳರು, ಗಂಗರು, ನೊಳಂಬರು, ಮೈಸೂರು ಅರಸರು, ಹಾಗಲವಾಡಿ ಮಹಾನಾಡ ಪ್ರಭುಗಳ ಆಡಳಿತಕ್ಕೆ ಒಳಪಟ್ಟಿರುವುದು ತಿಳಿದುಬರುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಹಂಪೆಯಲ್ಲಿ ಮುತ್ತುರತ್ನ ಹವಳ ಅರಳುಗಳನ್ನು ಗುಪ್ಪೆಯಾಗಿ ಇಟ್ಟು ವ್ಯಾಪಾರ ನಡೆಸುತ್ತಿದ್ದರೆಂಬ ವಿಷಯ ಇತಿಹಾಸ ಕೃತಿಗಳ ಮೂಲಕ ತಿಳಿಯುತ್ತದೆ. ಹಾಗೆಯೇ ಅರಳಗುಪ್ಪೆ ಹೆಸರು ಬರಲು ಹಲವಾರು ಕಾರಣಗಳನ್ನು ತಿಳಿಸುತ್ತಾರೆ. ಕಲ್ಲೇಶ್ವರ ದೇವಾಲಯದ ಮುಂದಿನ ಆವರಣ ವ್ಯಾಪಾರ ಕೇಂದ್ರವಾಗಿದ್ದು ಇಲ್ಲಿ ಅರಳುಗಳನ್ನು ಗುಪ್ಪೆಯಾಗಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದರು. ಆದ್ದರಿಂದ ಗ್ರಾಮಕ್ಕೆ ಅರಳುಗುಪ್ಪೆ ಎಂದು ಕರೆಯುತ್ತಾರೆ.

ಕೆಲವರು ತಿಳಿಸುವಂತೆ ಇಲ್ಲಿ ಅರಳೀಮರಗಳು ಗುಂಪು ಗುಂಪಾಗಿದ್ದವು. ಆ ಮರಗಳ ಗುಂಪಿಗೆ, ಅರಳಿಗುಂಪು ಎಂದು ಹೇಳುತ್ತಿದ್ದು ನಂತರ ಗುಂಪು ಎಂಬ ಪದವನ್ನು ಗುಪ್ಪೆ ಎಂದು ರೂಢಿಮಾಡಿಕೊಂಡು ಅರಳುಗುಪ್ಪೆ ಎಂದು ಕರೆಯಲಾಗಿದೆ. ಕಲ್ಲೇಶ್ವರ ದೇವಾಲಯದ ಬಳಿ ಭತ್ತದಿಂದ ತಯಾರಾದ ಅರಳುಗಳನ್ನು ಹೋಮಕ್ಕೆ ಬಳಸುತ್ತಿದ್ದು ನಂತರ ಊರಿಗೆ ಅರಳುಗುಪ್ಪೆ ಎಂದು ಕರೆದಿದ್ದಾರೆ ಎಂದೂ ತಿಳಿಸುತ್ತಾರೆ. ಸರಿಯಾದ ಕಾರಣ ಏನೆಂಬುದು ತಿಳಿಯಲಾಗುವುದಿಲ್ಲ.

ಕಲ್ಲೇಶ್ವರ ದೇವಾಲಯ ಆವರಣ ಹಾಗು ದೇವಾಲಯದ ಸ್ಥಂಭಗಳಲ್ಲಿ ಮತ್ತು ಕೆರೆಯ ಸಮೀಪ ಹಲವಾರು ಶಿಲಾ ಶಾಸನಗಳಿರುವುದನ್ನು ಕಾಣಬಹುದು. ಕೆರೆಯ ಊಳಿನಲ್ಲಿ ಕೆಲವು ಮುಚ್ಚಿಹೋಗಿವೆ ಎಂದು ಸ್ಥಳೀಯರ ನೇಕರು ತಿಳಿಸುತ್ತಾರೆ. 1886 ಕ್ಕೆ ಪೂರ್ವದಲ್ಲಿ ತುಮಕೂರು ಜಿಲ್ಲೆಯ ಅಂದಿನ ಹೊನ್ನವಳ್ಳಿ ತಾಲ್ಲೂಕು ಕೇಂದ್ರವಾಗಿದ್ದು ನಂತರ ತಿಪಟೂರು ತಾಲ್ಲೂಕು ಕೇಂದ್ರವಾಗಿ ಬದಲಾಗಿ ಅರಳಗುಪ್ಪೆಯು ತಿಪಟೂರು ತಾಲ್ಲೂಕಿಗೆ ಸೇರಿದೆ. ಇದಕ್ಕೆ ಕಾರಣ ರೈಲುಮಾರ್ಗ ಹಾಗೂ ರಾಜ್ಯದ ಮುಖ್ಯ ಹೆದ್ದಾರಿ ಸೌಲಭ್ಯ. 1950 ರಿಂದ ಇಲ್ಲಿ ಪ್ಯಾಸೆಂಜರ್ ರೈಲುಗಳ ನಿಲುಗಡೆ ಭಾಗ್ಯ ಲಭಿಸಿದೆ. ಕೋ ಆಪರೇಟಿವ್ ಸೊಸೈಟಿ ಸರ್ಕಾರಿ ಆರೋಗ್ಯ ಕೇಂದ್ರ ಬ್ಯಾಂಕ್, ಶಿಶುವಿಹಾರ ಹಾಗು ಪ್ರೌಢಶಾಲೆವರೆಗೆ ಅನುಕೂಲದ ವ್ಯವಸ್ಥೆ ಇದ್ದು ಜೊತೆಗೆ ದಿನಾಚರಣೆ ಬೇಕಾಗುವ ಅಗತ್ಯ ವಸ್ತುಗಳು ಸಿಗಲು ಅಂಗಡಿ ಹಿಟ್ಟಿನಗಿರಣಿ ಸೌಲಭ್ಯಗಳು ಇಲ್ಲಿವೆ.

ಅತ್ಯಂತ ಪುರಾತನ ಕಲ್ಲೇಶ್ವರ ದೇವಾಲಯದ ಪುಣ್ಯಸ್ಥಳ ಅರಳಗುಪ್ಪೆಯಲ್ಲಿ

ಸರ್ವಜನಾಂಗದ ಬಂದುಗಳು ಇದ್ದು, ಪುರಾತನ ಕಾಲದಲ್ಲಿ ಇರುತ್ತಿದ್ದಂತೆ. ಇಲ್ಲಿಯು ಪ್ರತ್ಯೇಕವಾಗಿ ಸಂಬಂಧಪಟ್ಟ ಸಮುದಾಯದ ವಾಸದ ಮನೆಗಳ ರಸ್ತೆಗಳು ಹಳೆಯ ಊರಿನಲ್ಲಿವೆ. ನಾಗರೀಕತೆ ಹಾಗು ಕಾಲಘಟ್ಟದಲ್ಲಾಗುವ ಬೆಳವಣಿಗೆಯಿಂದ ಊರು ವಿಶಾಲವಾಗಿ, ಸುಧಾರಣೆಯಾಗಿ ಬೆಳೆಯುತ್ತಿದೆ. ಗ್ರಾಮದಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ದೇವತೆಗಳ ಜಾತ್ರಾ ಮಹೋತ್ಸವಗಳು ಸುತ್ತಮುತ್ತಲಿನ ಗ್ರಾಮದ ಭಕ್ತಾದಿಗಳ ಸಹಕಾರದಿಂದ ನಡೆಯುತ್ತಿದ್ದವು. ಪ್ರಸ್ತುತ ಇಂದಿನ ದಿನಗಳಲ್ಲಿ ಬದಲಾವಣೆ, ಸುಧಾರಣೆ, ಮುಂತಾದ ಕಾರಣಗಳಿಂದ ಮೊದಲ ವೈಭವ ಇಲ್ಲವಾಗಿದೆ ಎನ್ನಬಹುದು. ಬಯಲುಸೀಮೆ ಯಕ್ಷಗಾನ ಕಲಾಪ್ರದರ್ಶನಕ್ಕೆ ಹೆಸರಾಗಿದ್ದ ಅರಳಗುಪ್ಪೆಯಲ್ಲೂ ಇಂದಿನ ನವೀನ ಮಾಧ್ಯಮದ ಪ್ರಭಾವದ ಪರಿಣಾಮದಿಂದ ಸ್ಥಳೀಯ ಪೂರ್ವ ಕಲೆ, ಸಂಸ್ಕೃತಿ ಜಾನಪದ ಸಂಘೀತ, ವೀರಗಾಸೆ, ಡೊಳ್ಳುಕುಣಿತ, ಜಾನಪದಗೀತೆ, ಗೀಗಿ ಪದಗಳು, ಸೋಬಾನೆ ಪದಗಳು ವೈಭವದ ಆಚರಣೆಗಳು ಕೆಲವು ಸೊರಗುತ್ತಿವೆ. ನಾಶವಾಗಿವೆ, ಮಾಯವಾಗಿವೆ, ಅಳವಿನ ಅಂಚಿನಲ್ಲಿವೆ. ಗ್ರಾಮದೇವತೆ ಕೆಂಪಮ್ಮದೇವಿಯ ಜಾತ್ರೆ ವೈಭವವಾಗಿ ನಡೆಯುತ್ತಿದೆ.

ಮೊದಲೆ ತಿಳಿಸಿರುವಂತೆ ಗ್ರಾಮದ ಸುತ್ತಮುತ್ತ ವಿವಿಧ ರೀತಿಯ ವೃಕ್ಷಗಳ ಗುಂಡುತೋಪುಗಳು ಹೇರಳವಾಗಿದ್ದವು. ಮರಗಿಡಗಳಲ್ಲಿ ಕುಳಿತು ಚೆನ್ನಾಟವಾಡುತ್ತ ಮಧುರ ಕಂಠದಿಂದ ಕೂಗಿ ಆಡುತ್ತಿದ್ದ ಹಕ್ಕಿಪಕ್ಷಿಗಳಂತು ದಯಾನೀಯ ಪರಿಸರದ ಹೊಡೆತಕ್ಕೆ ಸಿಕ್ಕು ನಾಶವಾಗಿವೆ. ಅಳಿವಿನ ಅಂಚಿನಲ್ಲೂ ಅಳಿದುಳಿದ ಪಕ್ಷಿಗಳಿವೆ. ಪೂರ್ವಿಕ ನೊಳಂಬ ಅರಸರ ಆಸೆ, ಆಕಾಂಕ್ಷೆಯಂತೆ ನಿರ್ಮಾಣವಾಗಿರುವ ಕೆರೆಕಟ್ಟೆಗಳ ಮಹಾಗಂಗಾಪ್ರಸಾದದ ಸೌಲಭ್ಯದಿಂದ ಬೆಳೆದುನಿಂತಿದ್ದ ವನವೃಕ್ಷಮಾತೆ ಇಂದು ಬಾಡಿ ನಿಶ್ಯಕ್ತಳಾಗಿ ಕಾಂತಿರಹಿತವಳಾಗಿದ್ದಾಳೆ ಎನ್ನಬಹುದು. ಉಳಿದ ಅಲ್ಪವೃಕ್ಷಗಳು ಹಾಗೂ ಕೆರೆಯ ಅಂಗಳದಲ್ಲಿ ಕನಿಷ್ಟ ಸಂಖ್ಯೆಯಲ್ಲಿ ಇಂದಿನ ಮಕ್ಕಳು ನೋಡುವ ಹಕ್ಕಿಪಕ್ಷಿಗಳ ಸಂಖ್ಯೆ ಗಣನೀಯವಾಗಿ ಇಳಿದಿದೆ. ದೇವಾಲಯಗಳಿಗೆ ಕೊಡುವಷ್ಟೇ ಮಹತ್ವವನ್ನು ನೊಳಂಬರ ಮಹಾನ್‌ತತ್ವವಾದ ಪರಿಸರ, ಕೆರೆ, ಕಟ್ಟೆಗಳ ಪರಿಶುದ್ಧತೆಗೆ ಕೊಟ್ಟುಪರಿಸರವನ್ನು ಉತ್ತಮಗೊಳಿಸಿಕೊಳ್ಳುವ ಮುಖ್ಯ ಜವಾಬ್ದಾರಿ ಎಲ್ಲಾ ಜನಾಂಗದ ಬಂಧುಗಳಿಗೂ ಸೇರಿದೆ.

ಕಲ್ಲೇಶ್ವರ ದೇವಾಲಯದ ವ್ಯಾಪ್ತಿಯಲ್ಲಿ ಐದು ಶಿವಲಿಂಗಗಳು ಒಂದು ಕಲ್ಯಾಣಿ ಹಾಗು ಕೆರೆಯನ್ನು ಕಟ್ಟಿಸಿದ ಬಗ್ಗೆ ದೇವಾಲಯದ ಕಂಬದಲ್ಲಿನ ಶಾಸನದಿಂದ ತಿಳಿಯಬಹುದು. ಕೆರೆಯ ತೂಬಿನಬಳಿ ನೊಳಂಬರ ಶಾಸನವಿದ್ದ ಬಗ್ಗೆ ಇತಿಹಾಸ ಕೃತಿಗಳಲ್ಲಿ ತಿಳಿಯಬಹುದು. ಕಾಲಘಟ್ಟದಲ್ಲಿ ಸ್ವತಂತ್ರರಾಗಿ ಹಾಗೂ ಗಂಗ ಅರಸರ ಸಾಮಂತರಾಗಿ ಆಳ್ವಿಕೆ ನಡೆಸಿರುವ ನೊಳಂಬ ಅರಸರು ಅಂದಿನ ಗಂಗರಸರ ಅನುಧಾನ ಸದ್ಬಳಕೆ ಮುಖೇನ ಹಲವಾರು ಕೆರೆ, ಕಟ್ಟೆ ಕಲ್ಯಾಣಿಗಳನ್ನು ನಿರ್ಮಿಸಿದ್ದಾರೆ. ಇದು ಅರಳುಗುಪ್ಪೆ ಗ್ರಾಮಕ್ಕೆ ಹೊರತಾಗಿಲ್ಲ. ಹಾಗಲವಾಡಿ ಪಾಳೆಯಗಾರರಿಂದ ಅರಳಗುಪ್ಪೆಯಲ್ಲಿ ಮುದುಗೆರೆ ಎಂಬ ಕೆರೆ ನಿರ್ಮಾಣವಾಗಿರುವ ಬಗ್ಗೆ ತಿಳಿಯುತ್ತದೆ. 1091ರ ಸಮಯದಲ್ಲಿ ದೂರಗೌಂಡ ಎಂಬುವರಿಂದಲೂ ಕಲ್ಲಿನ ಕೆರೆ ನಿರ್ವಾಣವಾಗಿರುವ ಬಗ್ಗೆ ತಿಳೀಯುತ್ತದೆ. ಸಂಧ್ಯಾಮಂಟಪದ ಕೆರೆ ಎಂಬ ಬಗ್ಗೆಯು ಕೃತಿಗಳಲ್ಲಿ ತಿಳಿಯುತ್ತದೆ.

ಬೌಂಡರು, ಕುಡಿಯರು, ಕುಡು ಒಕ್ಕಲಿಗರು, ಗೊಂಡರು ಲಾಳಗೊಂಡರು, ನೊಣಬರು, ಕಟ್ಟೆಮನೆಯವರು, ನೊಳಂಬ ಅರಸರವರು, ಮಹಾನಾಡ ಪ್ರಭುಗಳು ಮೂರುದಿನದವರು, ನಾಲ್ಕು ದಿನದವರು, ನೊಳಂಬಗೌಡರು ಇತ್ಯಾದಿ ನಾಮಗಳು, ಕಾಲಾನುಸಾರವಗಿ ಸಂಬಂಧಪಟ್ಟ ಭೂ ವ್ಯಾಪ್ತಿಯಲ್ಲಿ ರೂಡಿನಾಮವಾಗಿ ಬಂದಿರುವ ಹೆಸರುಗಳು. ಇದಕ್ಕೆ ಸಾಕ್ಷ್ಯವೆಂಬಂತೆ ಹಲವಾರು ಊರುಗಳ ಹೆಸರು ಇದೇ ರೀತಿಯಲ್ಲಿವೆ. ಗುಡಿಗೊಂಡನಹಳ್ಳಿ, ಗೊರಗೊಂಡನಹಳ್ಳಿ, ಹುಚ್ಚಗೊಂಡನಹಳ್ಳಿ, ರಾಮಗೊಂಡನಹಳ್ಳಿ ಇದೇ ರೀತಿಯ ಹೆಸರಿನ ಈ ಸ್ಥಳಗಳಲ್ಲಿ ಪ್ರಮುಖವಾಗಿ ಮೂಲನಿವಾಸಿಗಳಾಗಿ ನೊಳಂಬರು ಇರುವುದು. ಇಂತಹ ಊರುಗಳ ಭಿನ್ನ ಭಿನ್ನ ಉಪನಾಮದ ಈ ಬಂಧುಗಳೆಲ್ಲರೂ ಒಂದೆ. ನೊಳಂಬರು ಇವರು ಮೂಲ ಪಲ್ಲವರು, (ಪಲ್ಲವ ನೊಳಂಬರು) ಈಶ್ವರ ವಂಶದವರು. ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಬೇಕಿರುವುದು ಉತ್ತಮ ಪರಿಸರ. ಇದಕ್ಕೆ ಪೂರಕವಾಗಿ ಕೆರೆ ಕಟ್ಟೆ ಕುಡಿಯುವ ನೀರಿನ ಬಾವಿಗಳ ನಿರ್ವಾಣವೆ ಇವರೆಲ್ಲರ ಧ್ಯೇಯವಾಗಿದ್ದಿತು. ಈ ಪರಿಪಾಲನೆಯು ಅರಳಗುಪ್ಪೆ ಸಾಂಸ್ಕೃತಿಕ ಗ್ರಾಮದಲ್ಲಿ ನಡೆದು ಬಂದಿರುವುದನ್ನು ಕಾಣಬಹುದು. ಇಂದು ಹಾಗು ಮುಂದೆ ಜಾಗೃತವಾಗಿ ಪರಿಸರ ಶುದ್ಧಜಲಸಂರಕ್ಷಣೆಯ ಕಡೆ ಗಮನಿಸಬೇಕಾಗಿದೆ.

ನೊಳಂಬರ ಬಹುಪಾಲು ವೀರಗಲ್ಲುಗಳು ಸಾಮಾನ್ಯವಾಗಿ ಕೆರೆ, ಕಟ್ಟೆ ಸಮೀಪವಿದ್ದರು. ಹೊಲ, ತೋಟ, ಗುಂಡುತೋಪು ಪ್ರದೇಶಗಳಲ್ಲಿಯು ಕಾಣಬಹುದು. ಕೋಲಾರ ಜಿಲ್ಲೆಯಲ್ಲಿ ಎಕರೆಗಟ್ಟಲೆ ಪ್ರದೇಶಗಳಲ್ಲಿ ನೊಳಂಬರ ವೀರಗಲ್ಲುಗಳು ಕಾಣುತ್ತವೆ. ಈ ಪ್ರದೇಶ (ಸ್ಥಳಗಳನ್ನು) "ವೀರಗಾರರನೆತ್ತು" ಅಥವಾ "ಬೂದಿನೆತ್ತು"

ಎಂದು ಕರೆಯುತ್ತಾರೆ. ಇದೇ ರೀತಿ ಶಾಸನಗಳೂ ದೇವಾಲಯ, ಕೆರೆಕಟ್ಟೆಗಳ ಬಳಿ ಹೆಚ್ಚಾಗಿ ಕಾಣುತ್ತವೆ. ಅರಳಗುಪ್ಪೆಯ ಕೆರೆಯಬಳಿ, ಹಾಗು ದೇವಾಲಯದ ಬಳಿ, ವೀರಗಲ್ಲುಗಳೂ, ಶಾಸನಗಳು ಇರುವುದನ್ನು ತಿಳಿಯಬಹುದು. ಕಲ್ಲೇಶ್ವರ ದೇವಾಲಯದ ಬಳಿ ಮಹಾಸತಿಕಲ್ಲು (ಮಾಸ್ತಿಕಲ್ಲು) ವೀರಗಲ್ಲುಗಳೂ ಕೆಲವನ್ನು ಸಂರಕ್ಷಿಸಿ ಇಡಲಾಗಿದೆ. ಗಂಗರು, ನೊಳಂಬರಾಜ್ಯದ ಗಡಿಭಾಗದಂತಿರುವ ಅರಳಗುಪ್ಪೆಯಲ್ಲಿ ಸಂಭವಿಸಿರುವ ಯುದ್ಧಗಳ ಪರಿಣಾಮದಿಂದ ಹಲವಾರು ವೀರರು, ವೀರನಾರಿಯರು ಹುತಾತ್ಮರಾಗಿ ಅವರುಗಳಿಗೆ ಸಂಭಂಧಿಸಿದಂತೆ ಸ್ಮಾರಕ ವೀರಗಲ್ಲು ಮಾಸ್ತಿಗಲ್ಲುಗಳನ್ನು ನೆಟ್ಟಿರುತ್ತಾರೆ. ಹಲವಾರು ಶಾಸನ, ವೀರಗಲ್ಲುಗಳು ನಾಶವಾಗಿ, ವಿವಿಧ ಭಾಗಗಳಲ್ಲಿ ಚದುರಿ, ನಾಪತ್ತೆಯಾಗಿರುವುದಾಗಿ ತಿಳಿಯುತ್ತದೆ.

ನೊಳಂಬರಿಂದ ನಿರ್ಮಾಣವಾಗಿರುವ ಕಲ್ಲೇಶ್ವರಸ್ವಾಮಿ ದೇವಾಲಯ ಹಾಗು ವಿಶಾಲವಾದ ಕೆರೆಯ ಮಧ್ಯಭಾಗದಲ್ಲಿ ರಸ್ತೆ ನಿರ್ಮಾಣವಾಗಿ, ವಿಭಾಗವಾದಂತೆ ಕಾಣುತ್ತದೆ. ಅರಳಗುಪ್ಪೆಯ ಸುತ್ತಲಿರುವ ಗ್ರಾಮಗಳಾದ, ಸೋಮಲಾಪುರ, ಹೊಸಳ್ಳೀ, ಬೊಮ್ಮೇನಹಳ್ಳಿ, ವೆಂಕಟಾಪುರ, ಮುದ್ದತಿಹಳ್ಳಿ ಮುಂತಾದ ಪ್ರದೇಶಗಳಲ್ಲಿ ಕೆರೆ ಹಾಗು ಕಟ್ಟೆಗಳು ಎಲ್ಲಾ ಕೆರೆ, ಕಟ್ಟೆ ಆಶ್ರಿತ ಪ್ರದೇಶದಲ್ಲು ಇಂದು ಅಡಿಕೆ, ತೆಂಗಿನ ತೋಟಗಳಿವೆ. ಗುಂಡುತೋಪುಗಳು ನಾಶವಾಗಿವೆ. ಕಾಲಕಾಲಕ್ಕನುಸಾರವಾಗಿ, ಆಡಳಿತ, ಹಾಗು ಆಚರಣೆಗಳು ಬದಲಾಗಿ ಅರಳಗುಪ್ಪೆಯ ವಿಶಾಲವಾದ ಕೆರೆ, ಕಿರಿದಾಗಿ, ವಿಭಜನೆಯಾಗಿ ಸ್ವರೂಪಬದಲಾಗಿದೆ, ಕಾಲಘಟ್ಟದಲ್ಲಿ ಅಂದಿನ ಜನಾಂಗ ಬೇರೆ ಬೇರೆ ಹೆಸರಿನಿಂದಲು ಕರೆದಿರಬಹುದು. ಹಲವು ಬಾರಿ ದುರಸ್ತಿಗೊಂಡು, ಕೆರೆ ನವೀಕರಣಗೊಂಡಿರುಬಹುದು. ಅಂದಿನ ರಾಜವಂಶದವರಿಂದ ಆಗಿದ್ದರಿಂದ ಆಗಲೂ ಬೇರೆ ಹೆಸರಿನಿಂದ ಕರೆದಿರಬಹುದು. ದೇವರೊಬ್ಬ ನಾಮ ಹಲವು ಎನ್ನುವಂತೆ ಒಂದೇ ಕೆರೆ ಬೇರೆ ಬೇರೆ ಹೆಸರಿನಿಂದಲೂ ಕರೆದಿರುವುದು ಕರೆಯುತ್ತಿರುವುದು ಈಗಲೂ ಇದೆ. ಹಾಗೆಯೇ ಅರಳಗುಪ್ಪೆ ಕೆರೆ ನೊಳಂಬ ಅರಸರಿಂದ ನಿರ್ಮಾಣವಾಗಿ ಇಂದು ಕಿರಿದಾಗಿದ್ದರೂ ಪರಿಸರ, ಜನ, ಜಾನುವಾರು, ಪಶುಪಕ್ಷಿ, ಸಸ್ಯ ಸಂಕುಲಕ್ಕೆ ಜಲಾಮೃತ ನೀಡುವಲ್ಲಿ ಸಕ್ರಿಯವಾಗಿದ್ದು ಪೂಜನೀಯವಾಗಿದೆ. ಇಂದಿನ ಆಡಳಿತ ವ್ಯವಸ್ಥೆಯಲ್ಲೂ ಅಭಿವೃದ್ಧಿ ಕೆಲಸಗಳಾಗಿದ್ದು "ಅರಳಗುಪ್ಪೆಕೆರೆ" ಎಂದು ಕರೆಸಿಕೊಳ್ಳುತ್ತಿದೆ.

ಅರಳಗುಪ್ಪೆ ಸಮೀಪದ ಮದ್ದಿಹಳ್ಳಿ ಬಳಿ ಹುಲಿಕಡ್ಡಿ ಗಿಡಗಳ ಮಣೆಯ ನಡುವೆ ಮಹಾಸತಿ (ಮಾಸ್ತಿಕಲ್ಲು) ಇದ್ದು ಶ್ರಾವಣದಲ್ಲಿ ಸುತ್ತಮುತ್ತಲ ಗ್ರಾಮದ ನೊಳಂಬ ಬಂಧುಗಳು ಒಂದು ಪೂಜೆ ಸಲ್ಲಿಸುತ್ತಾರೆ.

ಮಾನ್ಯ ಸದಸ್ಯ ಬಂಧುಗಳೇ, ಜೂನ್ 7ನೇ ತಾರೀಕು ಭಾನುವಾರ ಬೆಳಿಗ್ಗೆ ನಮ್ಮ ಹಾವೇರಿ ಉಪ ಸಮಿತಿಯಲ್ಲಿ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ಕೆ ಹಾವೇರಿಯ ನಮ್ಮ ಉಪಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಹಾಗೂ ನಮ್ಮ ಎಲ್ಲಾ ಸದಸ್ಯ ಬಂಧುಗಳಿಗೆ ಹೃತ್ಪೂರ್ವಕ ಧನ್ಯವಾದ ಅರ್ಪಿಸುತ್ತೇನೆ ಮತ್ತು ಚಿಕ್ಕಬಾಸೂರಿನಲ್ಲಿ 852ನೇ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ಗುರು ಸಿದ್ದರಾಮೇಶ್ವರ ದೇವಸ್ಥಾನದ ಕಾಮಗಾರಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ ಈ ಕಾರ್ಯಕ್ಕೆ ನಮ್ಮ ಎಲ್ಲಾ ಚಿಕ್ಕಬಾಸೂರಿನ ಸಮಾಜ ಮುಖಂಡ ಬಂಧುಗಳಿಗೆ ಧನ್ಯವಾದ ಅರ್ಪಿಸುತ್ತೇನೆ.

ಅದೇ ರೀತಿ ಹೊಳಲ್ಕೆರೆಯಲ್ಲಿ ಅತ್ಯಂತ ಯಶಸ್ವಿ ಯಾಗಿ ನಡೆದ 853 ನೇ ಜಯಂತಿ ಮಹೋತ್ಸವದ ಅಧ್ಯಕ್ಷರಾದ ಶಶಿಧರವರು ಹಾಗೂ ಖಜಾಂಚಿಗಳದ ಕುಬೇರಪ್ಪನವರು ನಮ್ಮ ಸಂಘದ ಅಧ್ಯಕ್ಷರಾದ ಬಿ.ಕೆ. ಚಂದ್ರಶೇಖರ್‌ರವರಿಗೆ ಜಯಂತಿ ಮಹೋತ್ಸವದ ಲೆಕ್ಕಪತ್ರದ ವರದಿ ಸಲ್ಲಿಸುತ್ತಾರೆ. ಅವರಿಗೆ ಸಂಘದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ಈ ಎಲ್ಲಾ ಕಾರ್ಯಗಳಲ್ಲಿ ನಮ್ಮ ಜೊತೆಯಾಗಿ ಭಾಗವಹಿಸಿ ನಮ್ಮ ಕಾರ್ಯಕ್ರಮಗಳ ಯಶಸ್ವಿಗೆ ಕಾರಣೀಭೂತರಾದ ಅಧ್ಯಕ್ಷರು ಉಪಾಧ್ಯಕ್ಷರು ಮಾಜಿ ಅಧ್ಯಕ್ಷರು, ಖಜಾಂಚಿಗಳು, ಜಂಟಿ ಕಾರ್ಯದರ್ಶಿಗಳು ಹಾಗೂ ಎಲ್ಲಾ ಸದಸ್ಯ ಬಂಧುಗಳಿಗೂ ಸಂಘದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ ವಂದನೆಗಳು.

**ಕೆ.ಬಿ. ಶಶಿಧರ್,** ಕಾರ್ಯದರ್ಶಿ
ನೊ.ಲಿಂ.ಸಂಘ, ಬೆಂಗಳೂರು

**"ಮಡಿಕೆಯ ಮಾಡುವಡೆ ಮಣ್ಣೆ ಮೊದಲು**
**ತೊಡಿಗೆಯ ಮಾಡುವಡೆ ಹೊನ್ನೆ ಮೊದಲು**
**ಶಿವಪಥವನರಿವಡೆ ಗುರುಪಥವೆ ಮೊದಲು**
**ಕೂಡಲಸಂಗಮ ದೇವರನರಿವಡೆ**
**ಶರಣರ ಸಂಗದ ಮೊದಲು"**

**– ಬಸವಣ್ಣ**

# ಆರೋಗ್ಯಕ್ಕಾಗಿ ಆಯುರ್ವೇದ ಮಾಲಿಕೆ-6, 7 ಅಭ್ಯಂಗದ ನಂತರ

**ಸ್ನಾನ ವಿಧಿ :** ಸ್ನಾನ ಎಂದರೆ ಶರೀರಕ್ಕೆ ನೀರೆರೆದು ಕೊಳ್ಳುವುದು. ಕೆಲವರು ಸ್ನಾನಮಾಡಲೂ ಸೋಂಬೇರಿತನ ತೋರಿ ತಮ್ಮ ಅನಾರೋಗ್ಯಕ್ಕೆ ತಾವೇ ಕಾರಣವಾಗುತ್ತಿದ್ದಾರೆ. ಪ್ರತಿಯೊಬ್ಬರೂ ಪ್ರತಿನಿತ್ಯ ಸ್ನಾನ ಮಾಡಲೇಬೇಕು. ಬಾವಿ, ಕೆರೆ, ನದಿ, ಸಮುದ್ರಗಳಲ್ಲಿ ಮುಳುಗಿ ಸ್ನಾನ ಮಾಡುವುದನ್ನು ಅವಗಾಹನ ಎನ್ನುತ್ತಾರೆ. ಇದಕ್ಕೆ ಟಬ್ ಬಾತನ್ನೂ ಸೇರಿಸಬಹುದು.

ಪ್ರಸೇಚನವೆಂದರೆ ತಂಬಿಗೆ, ಚಂಬು, ಕೊಡ, ಮಗ್‌ಗಳಿಂದ ನೀರನ್ನು ಮೊಗೆದು ಸುರಿದುಕೊಂಡು ಸ್ನಾನ ಮಾಡುವುದು.ಹ್ಯಾಂಡ್ ಶವರ್, ಹೆಡ್ ಶವರ್ ಇತರೆ ಶವರ್ ಗಳೂ ಈ ಗುಂಪಿಗೆ ಸೇರುತ್ತವೆ.


**ಸ್ನಾನದ ಗುಣಗಳು :** ಸ್ನಾನವು ಅಗ್ನಿ ದೀಪನೀಯ, ವೀರ್ಯವರ್ಧಕ, ಆಯುರ್ವರ್ಧಕ, ಓಜೋವರ್ಧಕ, ಬಲಕಾರಕ, ನವೆ, ಕೊಳೆ, ಸುಸ್ತು ನಿವಾರಕ. ಬೆವರು, ತೂಕಡಿಕೆ, ಬಾಯಾರಿಕೆ, ಉರಿಗಳನ್ನು ದೂರ ಮಾಡುತ್ತದೆ.

**ಎಣ್ಣೆ ಹಚ್ಚಿದ ನಂತರ ಮಾಡಿದ ಸ್ನಾನದ ಗುಣ :** ರೋಮಕೂಪ, ರಕ್ತನಾಳ ಜಾಲ ರಂಧ್ರಗಳ ಮೂಲಕ ಶರೀರ ಪೋಷಣೆ ಹೊಂದುತ್ತದೆ. ಇದರಿಂದಾಗಿ ಶರೀರದ ಬಲವು ಹೆಚ್ಚುವುದು. ಯಾವ ರೀತಿ ಮರದ ಬುಡಕ್ಕೆ ನೀರೆರದರೆ ಹೇಗೆ ಮರ ಬೆಳೆದು ಫಲ ನೀಡುವುದೋ ಅದೇ ರೀತಿ, ಎಣ್ಣೆ ಹಚ್ಚಿದ ನಂತರ ಸ್ನಾನ ಮಾಡುವುದರಿಂದ ಮನುಷ್ಯನ ಆರೋಗ್ಯ ವರ್ಧಿಸುತ್ತದೆ.

**ಬಿಸಿ ನೀರಿನ ಸ್ನಾನ ಮತ್ತು ತಣ್ಣೀರಿನ ಸ್ನಾನ :**

**ಬಿಸಿ ನೀರಿನ ಸ್ನಾನದ ಗುಣ :** ಬಿಸಿನೀರಿನ ಸ್ನಾನ ಬಲವನ್ನು ಹೆಚ್ಚಿಸಿ ವಾತಕಫ ದೋಷಗಳ ನಿವಾರಣೆ ಮಾಡುತ್ತದೆ. ಬಿಸಿ ನೀರಿನಿಂದ ತಲೆಯನ್ನು ಬಿಟ್ಟು ಮೈ ಸ್ನಾನ ಮಾಡುವುದರಿಂದ ಬಲ ಹೆಚ್ಚಾಗುತ್ತದೆ. ತಲೆಗೆ ಅತಿಯಾದ ಬಿಸಿ ನೀರಿನಿಂದ ಸ್ನಾನ ಮಾಡಿದರೆ ಕಣ್ಣುಗಳ ದೃಷ್ಟಿಗೆ ತೊಂದರೆಯಾಗುವುದು ಮತ್ತು ಕೂದಲಿಗೆ ಹಾನಿಯಾಗಿ ಕೂದಲುದುರುವುದು. ಆದರೆ ಕಫ ವಾತ, ನೋವು ಶಮನವಾಗುವುದು.

**ತಣ್ಣೀರಿನ ಸ್ನಾನದ ಗುಣಗಳು :** ತೂಕಡಿಕೆ, ದಾಹ, ಆಯಾಸ, ತುರಿಕೆ, ಬೆವರು, ಬಾಯಾರಿಕೆ, ಕೊಳೆ ಮುಂತಾದವು ನಿವಾರಣೆಯಾಗಿ ಇಂದ್ರಿಯಗಳನ್ನು ಚುರುಕಾಗಿಸುವುದು. ರಕ್ತ ಸಂಚಾರ ಸರಿಯಾಗುವುದು, ಹಸಿವು ಚುರುಕಾಗುವುದು ( ತಣ್ಣೀರು ಶರೀರದ ಹೊರಮೈನ ತಾಪವನ್ನು ಒಳಸೇರುವಂತೆ ಮಾಡುವುದರಿಂದ ಹಸಿವು ಹೆಚ್ಚಿ ಆಹಾರ ಪಚನ ಸರಿಯಾಗಿ ಆಗುವುದು)




ಡಾ|| ಶ್ರೀಪ್ರಸಾದ್ ಎಚ್.ಎಸ್.
ಬಿಎಎಂಎಸ್ (ಆ), ಬಿಎಎಂಎಸ್ (ಇಂ)
ಶ್ರೀಪ್ರಸಾದ್ ಆಯುರ್ವೇದ # 9
ಮನುವನ, ವಿಜಯನಗರ.
ಬೆಂಗಳೂರು-40. 080-23301090


**ಬೆಳಗಿನ ಸ್ನಾನದ ಗುಣ :** ಬೆಳಿಗ್ಗೆ ಸ್ನಾನ ಮಾಡುವುದರಿಂದ ಶರೀರದ ಕೊಳೆ ಹಾಗೂ ಮನಸ್ಸಿನ ಪಾಪಗಳು ನಿವಾರಣೆಯಾಗುತ್ತವೆ, ರಾತ್ರಿ ಕಂಡ ಕೆಟ್ಟ ಕನಸುಗಳ ಪರಿಣಾಮಗಳು ಇಲ್ಲವಾಗುತ್ತವೆ, ಇದು ಶರೀರವನ್ನು ಪವಿತ್ರ ಗೊಳಿಸಿ, ತೇಜಸ್ಸನ್ನು ಹೆಚ್ಚಿಸುವುದರ ಜೊತೆಗೆ ವ್ಯಕ್ತಿಯ ರೂಪವನ್ನು ಸ್ಪಷ್ಟಗೊಳಿಸುತ್ತದೆ. ಶರೀರಕ್ಕೆ ಸುಖವನ್ನು ಕೊಟ್ಟು ಲೈಂಗಿಕತೆ ಹಾಗೂ ಅಗ್ನಿಯನ್ನು ವೃದ್ಧಿಸುತ್ತದೆ. ಸ್ತ್ರೀಯರಲ್ಲಿಯೂ ಲೈಂಗಿಕತೆಯನ್ನು ಹೆಚ್ಚಿಸುತ್ತದೆ ಹಾಗೂ ಶ್ರಮ ನಿವಾರಿಸುತ್ತದೆ. ಈ ಹತ್ತೂ ಗುಣಗಳು ಬೆಳಗಿನ ಸ್ನಾನದಿಂದ ಸಿಗುವಂತವು.

**ನೆಲ್ಲಿಕಾಯಿ ಮಿಶ್ರಿತ ನೀರಿನ ಸ್ನಾನ ಗುಣ :** ಯಾರು ನೆಲ್ಲಿಕಾಯಿ ಕಷಾಯವನ್ನು ಹಚ್ಚಿಕೊಂಡು ಸ್ನಾನ ಮಾಡುತ್ತಾರೋ ಅವರಿಗೆ ನಿಶ್ಚಿತವಾಗಿಯೂ ಕೂದಲುಗಳು ಬೆಳ್ಳಗಾಗದೆ ಚರ್ಮ ಸುಕ್ಕುಗಟ್ಟದೆ ನೂರು ವರ್ಷಗಳ ಪರ್ಯಂತ ಜೀವಿಸುತ್ತಾರೆ.

**ಬಿಸಿ ನೀರಿನ ವಿಶೇಷ :** ಆಯುರ್ವೇದದ ಪ್ರಸಿದ್ಧ ವೈದ್ಯರುಗಳಾದ ಅಶ್ವಿನಿ ಕುಮಾರರು ಹೇ ಮನುಷ್ಯನೇ, ಬೆಚ್ಚಗಿರುವ ನೀರಿನ ಸ್ನಾನ ಮಾಡುವುದು, ಹಾಲು ಕುಡಿಯುವುದು, ಯೌವ್ವನಭರಿತ ಸ್ತ್ರೀಯೊಡನೆ ಸಂಭೋಗ (ವಯಸ್ಸಾದ ನಂತರ ಸಂಭೋಗ ನಿಯಮಿಸಲು) ಸ್ನಿಗ್ಧ ಮಿಶ್ರಿತ ಸ್ವಲ್ಪ ಊಟ ಮಾಡುವುದು ಇವು ನಿನ್ನ ಶರೀರದ ಆರೋಗ್ಯವನ್ನು ಕಾಪಾಡುವಂತವುಗಳಾಗಿವೆ ಎಂದಿದ್ದಾರೆ.

**ಸ್ನಾನದ ನಂತರ**

**ವಸ್ತ್ರಧಾರಣೆ ಮತ್ತು ಗಂಧಾನುಲೇಪನ:** ವಸ್ತ್ರ ಉಡುಗೆ ಕೊಡುಗೆಗಳು ಇತ್ತೀಚಿನ ಕಾಲದಲ್ಲಿ ಕಾಲಕ್ಕನು ಗುಣವಾಗಿ ಅಥವಾ ಆರೋಗ್ಯಕ್ಕೆ ಪೂರಕವಾಗಿಲ್ಲದೆ ಬರೀ ಫ್ಯಾಷನ್, ಅಂದ ಚೆಂದ, ಆಡಂಬರ ಗಳಿಗಾಗಿ ಮೀಸಲಾಗಿ ಬಿಟ್ಟಿದೆ. ನಾವುಗಳು ತೊಡುವ ಉಡುಗೆ ತೊಡುಗೆಗಳು ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ ಅಲ್ಲದೆ ಅವು ನಮ್ಮ ವ್ಯಕ್ತಿತ್ವದ ಪ್ರತೀಕವೂ ಹೌದು.

ಆಯುರ್ವೇದವು ಶಾಸ್ತ್ರೋಕ್ತವಾಗಿ ಕಾಲಕ್ಕೆ ತಕ್ಕಂತೆ ವಸ್ತ್ರಧಾರಣೆ ಮತ್ತು ಗಂಧ ಲೇಪನಗಳ ಬಗ್ಗೆ ಹೇಳಿ ಅವುಗಳು ಆರೋಗ್ಯವನ್ನು ಕಾಪಾಡುವ ಬಗೆಯನ್ನೂ ಹೇಳಿದೆ.

**ಶೀತಕಾಲ :** ಶೀತಕಾಲದಲ್ಲಿ ಧರಿಸುವ ವಸ್ತ್ರವು ಪಿತಾಂಬರದಂತಿದ್ದು ಅದರ ಮೇಲೆ ಗಾಢ ಚಿತ್ರಗಳು ಇರಬಹುದು ಹಾಗೂ ಕೆಂಪು ಬಣ್ಣದ ಬಟ್ಟೆ ಶಾಖವನ್ನು ನೀಡಿ ದೇಹವನ್ನು ಕಾಪಾಡುವುದು, ಇದರಿಂದ ವಾತ ಮತ್ತು ಕಫ ದೋಷಗಳ ಶ್ರಮನವಾಗುವುದು.

**ಉಷ್ಣಕಾಲ :** ಉಷ್ಣಕಾಲದಲ್ಲಿ ಕಾಷಾಯ ಬಣ್ಣದ ವಸ್ತ್ರ ಉತ್ತಮ, ಈ ರೀತಿಯ ಬಟ್ಟೆಯ ಧಾರಣೆಯು ಬುದ್ಧಿಯನ್ನು ಹೆಚ್ಚಿಸುವುದಲ್ಲದೆ ಶೀತ ಗುಣವನ್ನು ಹೊಂದಿದ್ದು ಪಿತ್ತದೋಷ ಶಮನ ಮಾಡುತ್ತದೆ. ಈ ಕಾಷಾಯ ಬಣ್ಣದ ವಸ್ತ್ರದಲ್ಲೂ ವಿಶೇಷವಾಗಿ ಹಗುರವಾದ ಬಟ್ಟೆ ಇದ್ದರೆ ಇನ್ನೂ ಒಳಿತು.

**ಮಳೆಗಾಲ :** ಮಳೆಗಾಲದಲ್ಲಿ ಶುಕ್ಲ, ಶ್ವೇತ ವರ್ಣದ ವಸ್ತ್ರಧಾರಣೆ ಉತ್ತಮ, ಇದು ಶುಭದಾಯಕವಾಗಿದ್ದು, ಶೀತ ಗುಣವನ್ನು ಹೊಂದಿದ್ದು ಬಿಸಿಲಿನ ತಾಪದಿಂದ ರಕ್ಷಿಸುತ್ತದೆ. ಧರಿಸುವ ವಸ್ತ್ರವು ಉಷ್ಣವೂ ಅಲ್ಲದ ಶೀತವೂ ಅಲ್ಲದ ಗುಣವನ್ನು ಹೊಂದಿರಬೇಕು.

**ಹೊಸ ಮತ್ತು ನಿರ್ಮಲ ವಸ್ತ್ರದ ಗುಣ :** ಹೊಚ್ಚ ಹೊಸ ಅಥವಾ ಶುಭ್ರವಾದ ಬಟ್ಟೆಗಳನ್ನು ಧರಿಸುವುದು ಯಶಸ್ಸು, ಕಾಮ, ಆಯಸ್ಸು, ಸಂಪತ್ತು ಹಾಗೂ ಆನಂದವನ್ನು ನೀಡುತ್ತದೆ ಚರ್ಮಕ್ಕೆ ಒಳಿತನ್ನುಂಟು ಮಾಡುತ್ತದೆ, ವಶೀಕರಣ ಶಕ್ತಿಯನ್ನು ಪಡೆದಿರುತ್ತದೆ ಹಾಗೂ ಅಭಿರುಚಿಯನ್ನು ಹೆಚ್ಚಿಸುತ್ತದೆ.

**ಮಲಿನ / ಹರಿದ ವಸ್ತ್ರ ಗಳನ್ನು ಧರಿಸಬಾರದು :** ಇತ್ತೀಚೆಗೆ ಫ್ಯಾಷನ್ ಹೆಸರಿನಲ್ಲಿ ಧರಿಸುವ ಬಟ್ಟೆಗಳನ್ನು ಯದ್ವಾತದ್ವಾ ಹರಿದು, ತೂತಿಕ್ಕಿ, ಗುಂಡಿಕ್ಕಿ, ಸವೆಸಿ, ಬಣ್ಣಹೋಗಿಸಿ ಒಟ್ಟಾರೆ ವಿಕಾರಗೊಳಿಸಿ ಅದನ್ನೇ ಚೆಂದದ ಧಿರಿಸಿನಂತೆ ಧರಿಸುವವರು ಹೆಚ್ಚಾಗಿದ್ದಾರೆ, ಅವು ತಮ್ಮ ವಿರೂಪತೆಯಿಂದ ಅನ್ಯರ ಗಮನ ಸೆಳೆಯಬಹುದೇ ಹೊರತು ಮೆಚ್ಚುಗೆ ಪಡೆಯದು, ಇಂತಹ ಹರಿದ ವಸ್ತ್ರಗಳನ್ನು ಧರಿಸಬಾರದು. ಹರಿದ ಮತ್ತು ಮಲಿನ ವಸ್ತ್ರಗಳನ್ನು ಧರಿಸುವುದರಿಂದ ಉಂಟಾಗುವ ದೋಷಗಳೆಂದರೆ ಇದರಿಂದ ನವೆ, ಕ್ರಿಮಿಗಳು, ಮಾನಸಿಕ ಗ್ಲಾನಿ, ದರಿದ್ರತೆ ಹಾಗೂ ಶೋಭಾ ಹೀನತೆಗಳು ಉಂಟಾಗಬಹುದು. ವಸ್ತ್ರಗಳು ಮನುಷ್ಯನನ್ನು ರೂಪಿಸುತ್ತವೆ ಎಂಬ ಮಾತಿದೆ, ಪ್ರತಿಯೊಬ್ಬರೂ ತಮ್ಮ ವಸ್ತ್ರಗಳನ್ನು ಅನ್ಯರ ಜೊತೆ ಹಂಚಿಕೊಳ್ಳಬಾರದು ಹಾಗೆಯೇ ಬೇರೆಯವರ ಬಟ್ಟೆಗಳನ್ನು ಧರಿಸಬಾರದು.

**ಋತುಗಳಿಗನುಸಾರವಾಗಿ ಲೇಪಿಸುವ ಲೇಪಗಳ ಗುಣ:** ಶೀತಕಾಲದಲ್ಲಿ ಮೈಗೆ ಲೇಪಿಸುವ ಕುಂಕುಮ, ಚಂದನ ಹಾಗೂ ಅಗರು ಮಿಶ್ರಿತವಾದ ಲೇಪಗಳು ಒಳಿತಾದವು, ಇವು ಉಷ್ಣ, ವಾತ ಹಾಗೂ ಕಫ ದೋಷಗಳನ್ನು ನಿವಾರಿಸುತ್ತದೆ.

**ಉಷ್ಣಕಾಲದಲ್ಲಿ :** ಲೇಪಿಸಲು ಚಂದನ, ಕರ್ಪೂರ, ಸುಗಂಧ ಪದಾರ್ಥಗಳನ್ನು ಬೇರೆಸಿದ ಲೇಪವು ಸುವಾಸನೆಯನ್ನು ಹೊಂದಿದ್ದು ಶೀತಲವಾಗಿರುತ್ತದೆ, ಹಾಗಾಗಿ ಇದನ್ನು ಉಷ್ಣಕಾಲದಲ್ಲಿ ಬಳಸಬೇಕು.

**ಮಳೆಗಾಲದಲ್ಲಿ :** ಮಳೆಗಾಲದಲ್ಲಿ ಹಚ್ಚುವ ಲೇಪನಕ್ಕೆ ಅತಿ ಶೀತವು ಅಲ್ಲದ ಉಷ್ಣವೂ ಅಲ್ಲದ ಗುಣವಿರಬೇಕು, ಹಾಗಾಗಿ ಆ ಕಾಲದಲ್ಲಿ ಶ್ರೀಗಂಧ, ಕೇಸರ ಹಾಗೂ ಮೃಗನಾಭಿಗಳನ್ನು ಬಳಸಿದ ಲೇಪನ ಬಳಸುವುದು ಸೂಕ್ತವಾಗಿದೆ.

**ಸಾಮಾನ್ಯ ಲೇಪದ ಗುಣಗಳು :** ಶರೀರದ ಮೇಲೆ ಸುವಾಸನಾ ಯುಕ್ತ ವಸ್ತುಗಳ ಲೇಪನವು ಬಾಯಾರಿಕೆ, ತಲೆಸುತ್ತು, ದುರ್ಗಂಧ, ಸುಸ್ತು ಹಾಗೂ ಮೈ ಉರಿಗಳನ್ನು ನಿವಾರಿಸುತ್ತದೆ, ಸೌಭಾಗ್ಯ, ತೇಜಸ್ಸು, ಚರ್ಮದ ಬಣ್ಣ, ಕಾಂತಿ, ಓಜಸ್ಸು ಮತ್ತು ಬಲಗಳನ್ನು ವೃದ್ಧಿಸುತ್ತದೆ.

ಸ್ನಾನ ಯಾರು ಮಾಡುವುದಿಲ್ಲವೋ ಅವರು ಲೇಪಗಳನ್ನು ಬಳಸಬಾರದು.

ಆಧುನಿಕ ಯುಗದ ರಾಸಾಯನಿಕ ಬೆರೆತ, ಕೃತಕ ಬಾಡಿ ಡಿಯೋಗಳು, ಟಾಲ್ಕ್ ಪೌಡರ್‌ಗಳು, ಆಫ್ಟರ್ ಶೇವ್‌ಗಳು, ಫರ್‌ಫ್ಯೂಮ್, ಸೆಂಟ್, ಸ್ಪ್ರೇಗಳು ಕ್ರೀಂಗಳು, ಲೋಷನ್‌ಗಳು, ಅಪಾದ ಮಸ್ತಕದವರೆಗೂ ಸಿಕ್ಕಾಪಟ್ಟೆ ಅಲಂಕಾರಿಕ ವಸ್ತುಗಳು, ದ್ರವ್ಯಗಳು ಬಂದಿವೆ. ಹೀಗೆ ಹೇಳುತ್ತಾ ಹೋದರೆ ಹಿಂದೆಂದಿಗಿಂತಲೂ ಈಗ ಇಂತಹವುಗಳ ಬಳಕೆ ಮಿತಿ ಮೀರಿದೆ. ಇವುಗಳ ಆಯ್ಕೆ ಮಾಡುವಾಗಲೀ ಬಳಕೆ ಮಾಡು ವಾಗಲೀ ಎಚ್ಚರವಹಿಸುವುದು ಒಳಿತು. ಅದರಲ್ಲೂ ಕೃತಕ ರಾಸಾಯನಿಕ ಕ್ರೀಮ್ ಲೋಶನ್ ಇತ್ಯಾದಿಗಳು ಚರ್ಮಕ್ಕೆ ಹಾನಿತರಬಹುದು. ಬಾಡಿ ಡಿಯೋ, ಪರ್‌ಫ್ಯೂಮ್‌ಗಳನ್ನು ಮಿತವಾಗಿ, ಹಿತವಾಗಿ ಬಳಸಬೇಕಲ್ಲದೆ ಮೈಗೆ ಅತಿಯಾಗಿ ಸುರಿದುಕೊಂಡು ಘಾಟೆನ್ನಿಸುವಂತೆ ಆಗಬಾರದು. ಆರೋಗ್ಯವಂತ, ಸದೃಢ ಶರೀರ, ಮನಸ್ಸುಗಳು, ಸಕಾಲಿಕ ಸರಳ ವಸ್ತ್ರಧಾರಣೆ, ಅಲಂಕಾರ, ಪ್ರಕೃತಿದತ್ತ ನೈಜ ಸೌಂದರ್ಯ ಸಹಜ ನಗು ಇವುಗಳೇ ಜನರ ಮೆಚ್ಚುಗೆ ಗಳಿಸುವುದು ಎಂಬುದನ್ನು ಮರೆಯಬಾರದು.


**ನೊಳಂಬವಾಣಿ ಪತ್ರಿಕೆಯ ಚಂದದಾರರಾಗಲು ಮನವಿ**

# ಇ–ಕೃಷಿ : ಭಾರತದ ವ್ಯವಸಾಯದಲ್ಲಿ ಡಿಜಿಟಲ್ ಕ್ರಾಂತಿ

ಭಾರತದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರವು ಪ್ರಮುಖವಾಗಿದ್ದು ಸರಿ ಸುಮಾರು ಪ್ರತಿಶತ 57 ರಷ್ಟು ಗ್ರಾಮೀಣ ಕುಟುಂಬಳು ಕೃಷಿಯನ್ನೇ ಅವಲಂಬಿಸಿವೆ (ಓಂಂಖಆ, 2021–22). ರೈತರು ಕೀಟ ಮತ್ತು ರೋಗಗಳ ಹರಡುವಿಕೆ ಮಣ್ಣಿನ ಆರೋಗ್ಯ ಪೋಷಕಾಂಶಗಳ ನಿರ್ವಹಣೆ ಮತ್ತು ಸಮರ್ಥ ನೀರಿನ ಬಳಕೆಯಂತಹ ಪ್ರಮುಖ ಸವಾಲುಗಳನ್ನು ಎದಿರುಸುತ್ತಿದ್ದಾರೆ. ಈ ಎಲ್ಲಾ ಸವಾಲುಗಳಿಂದ ಬೆಳೆಗಳ ಬೆಳವಣಿಗೆ ಮತ್ತು ಇಳುವರಿಯು ಕುಂಠಿತವಾಗುತ್ತಿದೆ. ಈ ಡಿಜಿಟಲ್ ಯುಗದಲ್ಲಿ ರೈತರ ಕಷ್ಟಗಳನ್ನು ಶಮನಗೊಳಿಸಲು ಮೊಬೈಲ್ ಅಪ್ಲಿಕೇಶನ್‌ಗಳು ಸರಿಯಾದ ಮಾಹಿತಿಯನ್ನು ಒದಗಿಸಿ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸಹಾಯ ಮಾಡುತ್ತಿವೆ.

ಈ ಮೊಬೈಲ್ ಅಪ್ಲಿಕೇಶನ್‌ಗಳು ರೈತರಿಗೆ ಕೃಷಿ ಉಪಕರಣಗಳು ಇತ್ತೀಚಿನ ತಂತ್ರಜ್ಞಾನಗಳು ರೋಗ ಮತ್ತು ಕೀಟಗಳ ಗುರುತಿಸುವಿಕೆ ಮತ್ತು ಹವಾಮಾನ ವರದಿಗಳಂತಹ ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತಿವೆ. ಇದಲ್ಲದೇ, ರೈತರು ಈ ಅಪ್ಲಿಕೇಶನ್‌ಗಳ ಮೂಲಕ ಕೃಷಿ ತಜ್ಞರಲ್ಲಿ ತಮ್ಮ ಸಮಸ್ಯೆಗಳನ್ನು ನೇರವಾಗಿ ಚರ್ಚಿಸಿ ಸಲಹೆಗಳನ್ನು ಪಡೆದುಕೊಳ್ಳಬಹುದಾಗಿದೆ.

ಕೃಷಿ ಸಂಬಂಧಿತ ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ರೈತರಿಗೆ ಉಚಿತವಾಗಿ ಸಲಹೆಗಳನ್ನು ನೀಡಲು ಭಾರತ ಸರ್ಕಾರವು ಹಲವಾರು ಮೊಬೈಲ್ ಅಪ್ಲಿಕೇಶನ್‌ಗಳನ್ನು ಪರಿಚಯಿಸಿದೆ. ಈ ಅಪ್ಲಿಕೇಷನ್‌ಗಳನ್ನು mkisan.gov.in ನ ಅಧಿಕೃತ ವೆಬ್‌ಸೈಟ್ ಮೂಲಕ ಅಥವಾ ಗೂಗಲ್ ಪ್ಲೇ ಸ್ಟೋರ್ ಮೂಲಕ ಸುಲಭವಾಗಿ ಪಡೆದುಕೊಳ್ಳಬಹುದು. ಇದು ರೈತರಿಗೆ ನೇರವಾಗಿ ಉಪಯುಕ್ತ ಮಾಹಿತಿಗಳನ್ನು ತಲುಪಿಸುವುದರೊಂದಿಗೆ ಸಂಶೋಧನೆ ಮತ್ತು ಪ್ರಾಯೋಗಿಕ ಕೃಷಿಯ ನಡುವಿನ ಅಂತರವನ್ನು ಕಡಿಮೆ ಮಾಡಲು ನೆರವು ಮಾಡುತ್ತದೆ.



**ಡಾ. ಶಶಿಕುಮಾರ್ ಎಸ್.**
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ, ಬಾಗಲಕೋಟ.
Email: shashikumar2482@gmail.com
Cell: 9741900255

**ಆ್ಯಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್‌ಗಳು:**

**1. ಮೈ ಐ.ಪಿ.ಐ. ಆ್ಯಪ್ :** ಈ ಆ್ಯಪ್‌ನ ವಿವಿಧ ಆವೃತ್ತಿಗಳನ್ನು ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್ ಸ್ಟೋರ್‌ನಿಂದ ಸುಲಭವಾಗಿ ಡೌನ್‌ಲೋಡ್ ಮಾಡಬಹುದು. ಇದು ವಿವಿಧ ಬೆಳೆಗಳಲ್ಲಿ ಕಂಡುಬರುವ ರೋಗಗಳು, ಕೀಟಗಳು ಮತ್ತು ಕಳೆ ಸಮಸ್ಯೆಗಳನ್ನು ಒಳಗೊಂಡ ವಾಣಿಜ್ಯ ಉತ್ಪಾದನೆಗೆ ಅಗತ್ಯವಿರುವ ನಿರ್ವಹಣಾ ಮಾರ್ಗಸೂಚಿಗಳನ್ನು ಒದಗಿಸುತ್ತದೆ. ಈ ಶಿಫಾರಸ್ಸುಗಳಲ್ಲಿ ರೈತರಿಗೆ ಸುಲಭವಾಗಿ ಅರ್ಥವಾಗುವಂತೆ ವಿವರವಾದ ವಿವರಣೆಗಳು, ಚಿತ್ರಗಳು ಕೋಷ್ಟಕಗಳು ಮತ್ತು ಆಡಿಯೋ ತುಣುಕುಗಳು ಕೂಡ ಲಭ್ಯವಿರುತ್ತವೆ. ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಬಾಧಿಸುವ ಪ್ರಮುಖ ಕೀಟಗಳು ಮತ್ತು ರೋಗಗಳು ಉತ್ತಮ ಗುಣಮಟ್ಟದ ಚಿತ್ರಗಳನ್ನು ಸೇರಿಸುವ ಮೂಲಕ, ಈ ಆ್ಯಪ್ ರೈತರಿಗೆ ಸಮಸ್ಯೆಗಳನ್ನು ಸುಲಭವಾಗಿ ಗುರುತಿಸಲು ಸಹಾಯ ಮಾಡುವುದಲ್ಲದೆ, ಪರಿಣಾಮಕಾರಿಯಾಗಿ ಸಮಗ್ರ ರೋಗ ಕೀಟ ನಿರ್ವಹಣಾ ಪದ್ಧತಿಗಳನ್ನು ಅನುಸರಿಸಲು ಅನುವು ಮಾಡಿಕೊಡುತ್ತದೆ. ರೋಗ ಮತ್ತು ಕೀಟಗಳನ್ನು ಸರಿಯಾಗಿ ಗುರುತಿಸಿದ ನಂತರ, ಈ ಆ್ಯಪ್ ಅವುಗಳಿಂದ ಉಂಟಾಗಬಹುದಾದ ಹಾನಿಯ ಕುರಿತು ಸಮಗ್ರವಾಗಿ ಮಾಹಿತಿ ಒದಗಿಸುವುದರ ಜೊತೆಗೆ ಕೀಟಗಳ ಸಂಪೂರ್ಣ ಜೀವನ ಚಕ್ರ, ಕಳೆಗಳ ಜೀವಶಾಸ್ತ್ರ, ರೋಗದ ಲಕ್ಷಣಗಳು ಮತ್ತು ಅವುಗಳ ಹರಡುವಿಕೆಯ ಕುರಿತು ಸವಿಸ್ತಾರವಾದ ವಿವರಣೆಯನ್ನು ನೀಡುತ್ತದೆ. ಇದರಿಂದ ರೈತರು ಮುಂಚಿತವಾಗಿಯೇ, ಪರಿಹಾರ ಕ್ರಮಗಳನ್ನು ಕೈಗೊಂಡು ಭವಿಷ್ಯದಲ್ಲಿ ಉಂಟಾಗಬಹುದಾದ ನಷ್ಟಗಳನ್ನು ತಡೆಗಟ್ಟಬಹುದು. ಕೀಟ ಮತ್ತು ರೋಗ ನಿರ್ವಹಣಾ ವಿಧಾನಗಳನ್ನು ರಾಸಾಯನಿಕ ನಿಯಂತ್ರಣ, ಕೀಟನಾಶಕ ನಿರೋಧಕ ಕಾಳಜಿಗಳು ಮತ್ತು ರಾಸಾಯನಿಕವಲ್ಲದ ನಿರ್ವಹಣೆಯನ್ನು ಒಳಗೊಂಡಂತೆ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಈ ಅಪ್ಲಿಕೇಶನ್ ತನ್ನ ಮುಖಪುಟದಲ್ಲಿ ಕೀಟನಾಶಕಗಳ ಹುಡುಕಾಟ ಮಾಡುವ ಅವಕಾಶವನ್ನು ಒದಗಿಸುತ್ತದೆ. ಕೀಟನಾಶಕಗಲ್ಲಿನ ಸಕ್ರಿಯ ಪದಾರ್ಥಗಳು ಮತ್ತು ವಿವಿಧ ಕಂಪನಿಗಳ ಉತ್ಪನ್ನಗಳ ಮಾಹಿತಿಯನ್ನು ಒದಗಿಸುತ್ತದೆ. ವಿವಿಧ ಬೆಳೆಗಳು ಮತ್ತು ಸಾಮಾನ್ಯವಾಗಿ ಅವುಗಳಲ್ಲಿ ಕಂಡುಬರುವ ರೋಗ ಮತ್ತು ಕೀಟಗಳ ಮಾಹಿತಿಯೊಂದಿಗೆ ಅವುಗಳನ್ನು ನಿಯಂತ್ರಿಸಲು ಬಳಸಬಹುದಾದ ವಿವಿಧ ರೋಗನಾಶಕ ಮತ್ತು ಕೀಟನಾಶಕಗಳನ್ನು ಅದರ ಬಳಕೆಯ ಮಾಹಿತಿಗಳನ್ನು ಸಂಪೂರ್ಣವಾಗಿ ವಿವರಿಸುತ್ತದೆ. ಈ ಅಪ್ಲಿಕೇಶನ್‌ನ ಶೋಧ ಕಾರ್ಯವು ವಿವಿಧ ಬೆಳೆಗಳು ಮತ್ತು ಕೀಟಗಳ ಕೀಟನಾಶಕಗಳ

ಬಳಕೆಯನ್ನು ತ್ವರಿತವಾಗಿ ಹೋಲಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ ಒಬ್ಬ ರೈತನು ಮಾವು, ಪೇರಲ ಮತ್ತು ಲಿಚ್ಚಿಯ ತೋಪನ್ನು ಹೊಂದಿದ್ದರೆ, ಎಲ್ಲ ಮೂರು ಬೆಳೆಗಳಲ್ಲಿಗೆ ಕೀಟನಾಶಕಗಳ ವ್ಯಾಪಾರ ಹೆಸರು ಲಭ್ಯವಿದ್ದರೆ ಸುಲಭವಾಗಿ ಅಪ್ಲಿಕೇಶನ್‌ನಲ್ಲಿ ಪರಿಶೀಲಿಸ ಬಹುದು. ಇದಲ್ಲದೆ, ರೈತರಿಗೆ ಅತಿ ಅವಶ್ಯಕವಾಗಿರುವ ವಿವಿಧ ಬೆಳೆಗಳ ನಿರ್ಧಿಷ್ಟ ರೋಗಗಳು ಮತ್ತು ಕೀಟಗಳ ವಿರುದ್ಧ ಶಿಫಾರಸ್ಸು ಮಾಡಲಾದ ಪ್ರಮಾಣದ ದರಗಳನ್ನು (ಡೋಸ್) ಒದಗಿಸುತ್ತದೆ.

**2. ಪ್ಲ್ಯಾಂಟಿಕ್ಸ್ :** ಇದು ಬರ್ಲಿನ್ ಮೂಲದ ಮೊಬೈಲ್ ಅಪ್ಲಿಕೇಶನ್ ಆಗಿದ್ದು, ಪೀಟ್–ಜಿ.ಎಂ.ಬಿ.ಎಚ್. ಕಂಪನಿಯು ಅಭಿವೃದ್ಧಿಪಡಿಸಿದೆ. ಪೀಡಿತ ಬೆಳೆಗಳ ಚಿತ್ರಗಳನ್ನು ವಿಶ್ಲೇಷಿಸುವ ಮೂಲಕ ರೋಗದ ಸೋಂಕು, ಕೀಟ ಹಾನಿ ಮತ್ತು ಪೋಷಕಾಂಶಗಳ ಕೊರತೆಯನ್ನು ತ್ವರಿತವಾಗಿ ಗುರುತಿಸಲು ರೈತರಿಗೆ ಸಹಾಯ ಮಾಡುತ್ತದೆ. ಇದು ನಿಖರವಾಗಿ ಸಮಸ್ಯೆಗಳನ್ನು ಗುರುತಿಸಿ ಸೂಕ್ತವಾದ ಪರಿಹಾರಗಳನ್ನು ಕೆಲವೇ ಕ್ಷಣಗಳಲ್ಲಿ ಒದಗಿಸುತ್ತದೆ. ಆ್ಯಪ್‌ನ್ನು ರೈತರಿಗೆ ಉಪಯುಕ್ತವಾಗುವಂತೆ ವಿಶಿಷ್ಟವಾಗಿ ವಿನ್ಯಾಸ ಗೊಳಿಸಲಾಗಿದೆ. ಇದರ ದತ್ತಾಂಶವು 700 ಕ್ಕೂ ಅಧಿಕ ಸಸ್ಯಗಳ ಅಸ್ವಸ್ಥತೆಗಳನ್ನು ಒಳಗೊಂಡಿದ್ದು, ಬೆಳೆಗಳ ಪ್ರಕಾರ ಮತ್ತು ಬೆಳವಣಿಗೆಯ ಹಂತವನ್ನು ಆಧರಿಸಿ, ಕಾರಣಗಳು, ಅಸ್ವಸ್ಥತೆ ತಡೆಗಟ್ಟಲು ಸಲಹೆಗಳು ಮತ್ತು ನಿರ್ವಹಣಾ ತಂತ್ರಗಳನ್ನು ಸಂಪೂರ್ಣವಾಗಿ ವಿವರಿಸುತ್ತದೆ. ಈ ಅಪ್ಲಿಕೇಶನ್ ಜಾಗೃತಿ ಚರ್ಚಾ ವೇದಿಕೆಯನ್ನು ಸೃಷ್ಟಿಸುವುದರ ಜೊತೆಗೆ ರೈತರು ಇಲ್ಲಿ 15,000 ದೈನಂದಿನ ಪೋಸ್ಟ್‌ಗಳು ಮತ್ತು 80,000 ದೈನಂದಿನ ವೀಕ್ಷಣೆಗಳೊಂದಿಗೆ ಜ್ಞಾನವನ್ನು ವಿನಿಮಯ ಮಾಡಿಕೊಳ್ಳಬಹುದಾಗಿದೆ. ಫಲಾನುಭವಿಗಳು ಭೂಮಿ ಸಿದ್ಧತೆಯಿಂದ ಹಿಡಿದು ನೀರಾವರಿ ಮತ್ತು ಕೀಟ ನಿಯಂತ್ರಣದವರೆಗೆ ನಾಟಿ ಮಾಡಿದ ದಿನಾಂಕಗಳ ಆಧಾರದ ಮೇಲೆ ತಜ್ಞರ ಮಾರ್ಗದರ್ಶನಗಳನ್ನು ಪಡೆಯಬಹುದು. ವಿವಿಧ ಬೆಳೆಗಳು ಮತ್ತು ಹೊಲದ ಗಾತ್ರಗಳ ಅನುಸಾರ ನೀಡಬೇಕಾದ ಸೂಕ್ತವಾದ ರಸಗೊಬ್ಬರಗಳು ಬಳಕೆಯ ಪ್ರಮಾಣ ಮತ್ತು ಅನ್ವಯದ ವೇಳಾಪಟ್ಟಿಯನ್ನು ನಿಖರವಾಗಿ ಶಿಫಾರಸ್ಸು ಮಾಡುತ್ತದೆ. ಈ ಆ್ಯಪ್ 50 ಕಿ. ಮೀ. ವ್ಯಾಪ್ತಿಯೊಳಗೆ ಕೀಟಗಳು ಮತ್ತು ರೋಗ ಹರಡುವಿಕೆಯ ಬಗ್ಗೆ ನೈಜ ಸಮಯದ ಅಧಿಸೂಚನೆಗಳನ್ನು ನೀಡಲು ಜಿಯೋಟ್ಯಾಗ್ ಮಾಡಲಾದ ಫೋಟೋಗಳನ್ನು ಬಳಸುತ್ತದೆ ಮತ್ತು ನಷ್ಟ ತಡೆಗಟ್ಟಲು ರೈತರು ಕೈಗೊಳ್ಳಬಹುದಾದ ಸಿಂಪಡಿಸುವಿಕೆ, ಕಳೆ ನಿರ್ವಹಣೆ ಮತ್ತು ನೀರಾವರಿ ಸೇರಿದಂತೆ ಹಲವು ಕಾರ್ಯಗಳನ್ನು ನಿಗಧಿಪಡಿಸುವಲ್ಲಿ ಸಹಾಯ ಮಾಡುತ್ತದೆ. ಸ್ಥಳಗಳ ನಿರ್ಧಿಷ್ಟ ಹವಾಮಾನ ಮುನ್ಸೂಚನೆ ಗಳನ್ನು ಒದಗಿಸುತ್ತದೆ. ಈ ಅಪ್ಲಿಕೇಶನ್ ರೈತರಿಗೆ ಸರಿಯಾದ ಕೃಷಿ ಉತ್ಪನ್ನಗಳನ್ನು ಪತ್ತೆಹಚ್ಚಲು ಮತ್ತು ಹತ್ತಿರದ ಪೂರೈಕೆದಾರರೊಂದಿಗೆ ಸಂಪರ್ಕಿಸಲು ಸೂಕ್ತವಾದ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ.

**3. ಎ.ಜಿ. ಪಿ.ಎಚ್‌ಡಿ ಕ್ಷೇತ್ರ ಕೀಟ ಗುರುತಿಸುವಿಕೆ ಮತ್ತು ನಿಯಂತ್ರಣ ಅಪ್ಲಿಕೇಶನ್ :** ಬಳಕೆದಾರರಿಗೆ ಕೀಟಗಳನ್ನು ಗುರುತಿಸುವಲ್ಲಿ ಮತ್ತು ನಿರ್ವಹಣಾ ತಂತ್ರಗಳನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುವ ಸಲುವಾಗಿ ಈ ಅಪ್ಲಿಕೇಶನ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಪ್ರಮುಖ ಬೆಳೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೀಟಗಳು ಮತ್ತು ಕಳೆಗಳ ಕುರಿತು ಚಿತ್ರಗಳ ಮೂಲಕ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ. ಹಾಗೆಯೇ, ಅವುಗಳ ನಿರ್ವಹಣಾ ಕ್ರಮಗಳನ್ನು ಶಿಫಾರಸ್ಸು ಮಾಡುತ್ತದೆ. ಹೆಚ್ಚುವರಿಯಾಗಿ, ಈ ಆ್ಯಪ್ ಕ್ಷೇತ್ರದಲ್ಲಿ ಸಹಾಯ ಮಾಡುವಾಗ ಕೀಟ ಸಂಬಂಧಿತ ಮಾಹಿತಿಯನ್ನು ನೇರವಾಗಿ ಸಂಗ್ರಹಗೊಳಿಸಿಡುತ್ತದೆ. ಬಳಕೆದಾರರು ಕ್ಷೇತ್ರ ವರದಿಗಳನ್ನು ಮತ್ತು ತಮ್ಮ ಅವಲೋಕನಗಳನ್ನು ಸಲ್ಲಿಸಬಹುದು. ರೈತರಿಗೆ ಪ್ರಯೋಜನಕಾರಿಯಾದ ಎ.ಜಿ. ಪಿ.ಎಚ್‌ಡಿ ಅಭಿವೃದ್ಧಿಪಡಿಸಿರುವ ಇತರ ಅಪ್ಲಿಕೇಶನ್‌ಗಳೆಂದರೆ;

**ಎ.ಜಿ. ಪಿ.ಎಚ್‌ಡಿ. ಕೊಯ್ಲು ನಷ್ಟ ಕ್ಯಾಲ್ಕುಲೇಟರ್:** ಈ ಅಪ್ಲಿಕೇಶನ್ ಬಳಕೆದಾರರಿಗೆ ಗೋಧಿ, ಬಾರ್ಲಿ, ಸೋಯಾಬೀನ್ ಮತ್ತು ಮೆಕ್ಕೆಜೋಳದಂತಹ ಬೆಳೆಗಳಲ್ಲಿ ಕೊಯ್ಲಿನ ಪೂರ್ವ ಮತ್ತು ಕೊಯ್ಲಿನ ಸಮಯದಲ್ಲಿ ಉಂಟಾಗಬಹುದಾದ ಇಳುವರಿ ನಷ್ಟಗಳನ್ನು ಲೆಕ್ಕ ಹಾಕಲು ಅನುವು ಮಾಡಿಕೊಡುತ್ತದೆ.

**ಎ.ಜಿ. ಪಿ.ಎಚ್‌ಡಿ. ನಾಟಿ ಉತ್ತಮಗೊಳಿಸುವಿಕೆ :** ಇದು ಪ್ರತಿ ಎಕರೆಗೆ ನಿರ್ಧಿಷ್ಟ ಗಿಡಗಳ ಸಂಖ್ಯೆಯ ಸಾಂದ್ರತೆಯನ್ನು ಸಾಧಿಸಲು ಸೂಕ್ತವಾದ ಸಸ್ಯ ಅಂತರವನ್ನು ನಿರ್ಧರಿಸಲು ರೈತರಿಗೆ ಸಹಾಯ ಮಾಡುತ್ತದೆ. ಈ ಅಪ್ಲಿಕೇಶನ್ ರೈತರಿಗೆ ಸಸಿಗಳ ವಿರಳೀಕರಣ ಮಾಡುವಲ್ಲಿ ಅಮೂಲ್ಯವಾದ ಸಲಹೆಗಳನ್ನು ಸಹ ನೀಡುತ್ತದೆ.

**ಎ.ಜಿ. ಪಿ.ಎಚ್‌ಡಿ. ಪೋಷಕಾಶ ಕೊರತೆಯ ಅಪ್ಲಿಕೇಶನ್:** ಈ ಆ್ಯಪ್ ವಿವಿಧ ಬೆಳೆಗಳಲ್ಲಿ ಕಂಡುಬರುವ ಪೋಷಕಾಂಶಗಳ ಕೊರತೆಯ ಲಕ್ಷಣಗಳನ್ನು ಗುರುತಿಸುವಲ್ಲಿ ಬಳಕೆದಾರರಿಗೆ ನೆರವು ಮಾಡುತ್ತದೆ. ಕೊರತೆಯ ಲಕ್ಷಣಗಳನ್ನು ಸುಲಭವಾಗಿ ಪತ್ತೆ ಹಚ್ಚಲು ಚಿತ್ರಗಳನ್ನು ಒದಗಿಸುತ್ತದೆ.

**4. ಅಗ್ರಿವಿ ಅಪ್ಲಿಕೇಶನ್ :** ಇದು ರೈತರಿಗೆ ತಮ್ಮ

ಹೊಲಗಳ ನಕ್ಷೆಯನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ. ಹವಾಮಾನ ದತ್ತಾಂಶ, ಮಣ್ಣಿನ ವಿಶ್ಲೇಷಣೆ ಮತ್ತು ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು ಬೆಳೆಗಳ ನೈಜ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವುದರೊಂದಿಗೆ ನಿಖರವಾದ ನಿರ್ಧಾರ ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ಇದು ಆ ಪ್ರದೇಶಗಳಿಗೆ ಸೂಕ್ತವಾದ ಬೆಳೆ ಆಯ್ಕೆಯಿಂದ ಹಿಡಿದು ತಳಿ ಆಯ್ಕೆ, ನಾಟಿ ಸಮಯ ಮತ್ತು ರಸಗೊಬ್ಬರಗಳ ಬಳಕೆ ಮತ್ತು ಕೀಟನಾಶಕಗಳ ಸಿಂಪಡಿಕೆಯ ಕುರಿತು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಇದರಿಂದಾಗಿ ಉತ್ಪಾದಕತೆಯು ಹೆಚ್ಚುತ್ತದೆ ಮತ್ತು ರೈತರ ಆರ್ಥಿಕ ಪ್ರಯೋಜನಗಳು ಉತ್ತೇಜನಗೊಳ್ಳುತ್ತದೆ. ಇದರ ಸುಧಾರಿತ ವೈಶಿಷ್ಟಗಳಲ್ಲಿ ತಾನಾಗಿಯೇ ಹಾನಿ ಮಾಡಬಹುದಾದ ಕೀಟಗಳ ಮತ್ತು ರೋಗಗಳ ಅಧಿಸೂಚನೆಗಳು ಸೇರಿವೆ. ಇದರಿಂದಾಗಿ ರೈತರು ಮುಂಚಿತವಾಗಿ ನಿರ್ವಹಣಾ ಕ್ರಮಗಳನ್ನು ಕೈಗೊಂಡು ಸಂಭವಿಸಬಹುದಾದ ಇಳುವರಿ ನಷ್ಟ ಮತ್ತು ಕೀಟ ಹರಡುವಿಕೆಯನ್ನು ತಡೆಗಟ್ಟಬಹುದು. ವಿವಿಧ ಬೆಳೆಗಳಿಗೆ ಸೂಕ್ತವಾದ ಸಮಗ್ರ ನಿರ್ವಹಣಾ ಪದ್ಧತಿಗಳನ್ನು ವಿವರವಾಗಿ ತಿಳಿಸುವುದರ ಜೊತೆಗೆ ಪರಿಸ್ಥಿತಿಗೆ ಹೆಚ್ಚು ಸೂಕ್ತವಾಗಿರುವ ನಿರ್ವಹಣಾ ಕ್ರಮವನ್ನು ಹೇಗೆ ಮತ್ತು ಯಾವ ಸಮಯದಲ್ಲಿ ಮಾಡಿದರೆ ಉತ್ತಮ ಫಲಿತಾಂಶ ದೊರಕುತ್ತದೆ ಎಂಬುದರ ವಿವರವಾದ ವಿವರಣೆಯನ್ನು ನೀಡುತ್ತದೆ. ಅಲ್ಲದೇ, ದೀರ್ಘಾವಧಿಯ ಯೋಜನೆಯನ್ನು ಬೆಂಬಲಿಸಲು ಈ ಅಪ್ಲಿಕೇಶನ್ ವಿವರವಾದ 7 ದಿನಗಳ ಹವಾಮಾನ ಮುನ್ಸೂಚನೆ ಮತ್ತು 3 ವರ್ಷಗಳ ಐತಿಹಾಸಿಕ ಹವಾಮಾನ ದತ್ತಾಂಶವನ್ನು ಒದಗಿಸುತ್ತದೆ. ಬಳಕೆದಾರರಿಗೆ ಕೃಷಿ ಸಂಬಂಧಿತ ದಾಖಲೆಗಳು ಮತ್ತು ವರದಿಗಳನ್ನು ಒಂದೇ ಸ್ಥಳದಲ್ಲಿ ಸಂಗ್ರಹ ಮಾಡಿಡಲು ಹಾಗೂ ಅಗತ್ಯವಿದ್ದಾಗ ಸುಲಭವಾಗಿ ಬಳಕೆ ಮಾಡಲು ಅನುವು ಮಾಡಿಕೊಡುತ್ತದೆ.

**5. ರೈಸ್ ಎನ್‌ಕ್ಸ್ಟರ್ಟ್ ಅಪ್ಲಿಕೇಶನ್ :** ಭತ್ತದ ಕೃಷಿಯ ನಿರ್ವಹಣೆಗಗಿ ಆಲ್ ಇನ್ ಒನ್ ಡಿಜಿಟಲ್ ವೇದಿಕೆಯನ್ನು ಒದಗಿಸಲು ಈ ಅಪ್ಲಿಕೇಶನ್‌ನ್ನು ವಿನ್ಯಾಸ ಗೊಳಿಸಲಾಗಿದೆ. ಈ ಅಪ್ಲಿಕೇಶನ್‌ನ್ನು ಅಂತರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆ, ಫಿಲಿಫೈನ್ಸ್ ಅಭಿವೃದ್ಧಿಪಡಿಸಿದೆ. ಇದು ಕೀಟಗಳು, ರೋಗಗಳು, ಜಂತು ಹುಳುಗಳು, ಕಳೆಗಳು ಮತ್ತು ಪೋಷಕಾಂಶಗಳ ಅಸಮತೋಲನ ಸೇರಿದಂತೆ ಹಲವಾರು ಕ್ಷೇತ್ರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ. ಅಲ್ಲದೇ, ಇದು ಭತ್ತದ ವಿವಿಧ ತಳಿಗಳು, ಉಪಕರಣಗಳು, ಹವಾಮಾನ ಕುರಿತಾದ ವರದಿಗಳು, ಭತ್ತದ ಕುರಿತಾದ ಸುದ್ಧಿಗಳನ್ನು ರೈತರಿಗೆ ನೀಡುತ್ತದೆ. ಇದರ ಪ್ರಮಯಖ ವೈಶಿಷ್ಟ್ಯವೆಂದರೆ ಇ–ಸಲಹಾ ಸೇವೆಯನ್ನು ಒಳಗೊಂಡಿರುವುದು, ಇಲ್ಲಿ ರೈತರು ತಮ್ಮ ಸಮಸ್ಯೆಗಳನ್ನು ಸವಿಸ್ತಾರವಾಗಿ ಬರೆದು ಫೋಟೋಗಳು ಅಥವಾ ಧ್ವನಿ ಮುದ್ರಿಕೆಗಳ ಮೂಲಕ ಸಲ್ಲಿಸಬಹುದು. ಅದಕ್ಕೆ ಸೂಕ್ತವಾದ ಪರಿಹಾರ ಗಳನ್ನು ಎಸ್.ಎಂ.ಎಸ್‌ಗಳ ಮೂಲಕ ಪಡದುಕೊಳ್ಳಬಹುದು. ಈ ಅಪ್ಲಿಕೇಶನ್ ನಿಖರವಾದ ಕೀಟ ಮತ್ತು ರೋಗ ನಿರ್ವಹಣಾ ಮಾರ್ಗದರ್ಶಿ ಮತ್ತು ರಸಗೊಬ್ಬರ ಕ್ಯಾಲ್ಕು ಲೇಟರ್‌ನ್ನು ಸಹ ಒಳಗೊಂಡಿದೆ. ಈ ಆ್ಯಪ್ ರೈತರು ಮತ್ತು ಖರೀದಿದಾರರ ನಡುವೆ ಸಂಪರ್ಕ ಕಲ್ಪಿಸಿಕೊಡು ವುದಲ್ಲದೇ ತಮ್ಮ ಉತ್ಪನ್ನವನ್ನು ಉತ್ತಮ ಬೆಲೆಗೆ ಮಾರಾಟ ಮಾಡಲು ನೆರವು ಮಾಡುತ್ತದೆ. ಈ ಅಪ್ಲಿಕೇಶನ್‌ನ್ನು ರೋಗ ಮತ್ತು ಕೀಟದ ಬಾಧೆಗೆ ಪರಿಹಾರ ಕಂಡುಕೊಳ್ಳಲು ಬಳಸು ವಾಗ, ಕೀಟದ ಪ್ರಕಾರ ಹಾನಿಗೊಳಗಾದ ಬೆಳೆ ಹಂತ ಮತ್ತು ಕೀಟ ವರ್ಗ ಸೇರಿದಂತೆ ನಿರ್ಧಿಷ್ಟ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಲು ಸೂಚನಾ ಮಾರ್ಗದರ್ಶಿಗಳನ್ನು ನೀಡಲಾಗುತ್ತದೆ. ನಂತರ ದೃಶ್ಯ ದೃಢೀಕರಣಕ್ಕಾಗಿ ಉಲ್ಲೇಖ ಚಿತ್ರಗಳನ್ನು ಒದಗಿಸುತ್ತದೆ. ಇದರಿಂದ ರೈತರು ತಮ್ಮ ಹೊಲದ ಬೆಳೆಗಳ ರೋಗಗಳನ್ನು / ಕೀಟಗಳನ್ನು ಹೋಲಿಕೆ ಮಾಡಿಕೊಳ್ಳಬಹುದು. ಬಳಕೆದಾರರು ಸಾಮ್ಯತೆ ಕಂಡು ಬಂದಲ್ಲಿ, ಹೌದು ಎಂಬ ಆಯ್ಕೆಯನ್ನು ಒತ್ತುವ ಮೂಲಕ ಚಿತ್ರಗಳನ್ನು ಪರಿಶೀಲಿಸುತ್ತಾರೆ. ನಂತರ ವ್ಯವಸ್ಥೆಯು ನಿರ್ಧಿಷ್ಟ ಕೀಟನಾಶಕಗಳ ಬಳಕೆ ಮತ್ತು ಪ್ರಮಾಣವನ್ನು ಒಳಗೊಂಡಂತೆ ಸೂಕ್ತವಾದ ನಿರ್ವಹಣಾ ತಂತ್ರಗಳನ್ನು ಒದಗಿಸುತ್ತದೆ.

**6. ಮಾವು ಕೃಷಿ ಅಪ್ಲಿಕೇಶನ್ :** ಭಾರತದ ವಿವಿಧ ಕೃಷಿ ಹವಾಮಾನ ಪ್ರದೇಶಗಳಲ್ಲಿನ ಮಾವು ಬೆಳೆಗಾರರಿಗೆ ಉಪಯುಕ್ತವಾಗಲೆಂದು ಈ ಅಪ್ಲಿಕೇಶನ್‌ನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಅಭಿವೃದ್ಧಿಪಡಿಸಲಾಗಿದೆ. ಇದು ಮಾವು ಬೆಳೆಗೆ ಸೂಕ್ತವಾದ ಮಣ್ಣು, ಹವಾಮಾನ, ನಾಟಿ ಪದ್ಧತಿಗಳು, ಅಂತರ, ಕೋಯ್ಲು ಹೀಗೆ ಹಲವಾರು ವಿಷಯಗಳ ಕುರಿತು ಶಿಫಾರಸ್ಸು ನೀಡುತ್ತದೆ. ಈ ಆ್ಯಪ್‌ನ ಪ್ರಮುಖ ಲಕ್ಷಣವೆಂದರೆ ಕೀಟ ಮತ್ತು ರೋಗ ನಿಯಂತ್ರಣದ ಬಗೆಗಿನ ವಿವರವಾದ ಮಾಡ್ಯೂಲ್‌ನ್ನು ಒಳಗೊಂಡಿರುವುದು. ಈ ಮಾಡ್ಯೂಲ್‌ಗಳು ಹಣ್ಣಿನ ನೊಣಗಳು, ಮಾವಿನ ಜಿಗಿ ಹುಳುಗಳು, ಜಟೆಕೊರಕ, ಹಿಟ್ಟು ತಿಗಣೆಗಳು, ಚಿಗುರು ಮತ್ತು ಕಾಂಡ ಕೊರೆಯುವ ಕೀಟಗಳಂತಹ ಪ್ರಮುಖ ಕೀಟಗಳ ಗುರುತಿಸುವಿಕೆ ಮತ್ತು ಅವುಗಳ ನಿರ್ವಹಣೆಗೆ ಚಿತ್ರಾತ್ಮಕ ಸಂದೇಶಗಳನ್ನು ಒಳಗೊಂಡಿರುತ್ತದೆ. ಹಲವಾರು ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾದ ರೋಗಗಳಾದ ಚಿಬ್ಬು ರೋಗ, ಹೂವು ಮತ್ತು ಎಲೆ ಒಣಗುವ ರೋಗಗಳು, ಬೂದುರೋಗ

ಮತ್ತು ಕೊಂಬೆ ಒಣಗುವ ರೋಗಗಳ ನಿರ್ವಹಣಾ ವಿಧಾನಗಳನ್ನು ಸಹ ಒದಗಿಸುತ್ತದೆ. ವೈಜ್ಞಾನಿಕವಾಗಿ ಬೆಳೆ ನಿರ್ದಿಷ್ಟ ಉತ್ತಮವಾದ ಸಲಹೆಗಳನ್ನು ನೀಡುವ ಮೂಲಕ ಕೀಟನಾಶಕಗಳ ವಿವೇಕಯುತ ಬಳಕೆಯನ್ನು ಉತ್ತೇಜಿಸುತ್ತದೆ. ಆ ಮೂಲಕ ಜೀವ ವೈವಿಧ್ಯತೆಯ ಮೇಲೆ ಉಂಟಾಗುವ ನಕರಾತ್ಮಕ ಪರಿಣಾಮವನ್ನು ಕಡಿಮೆಗೊಳಿಸುತ್ತದೆ.

**7. ಕೃಷಿ ಜಾಗೃಣ್ ಆ್ಯಪ್ :** ಭಾರತದ ಪ್ರಮುಖ ಕೃಷಿ ಮಾಧ್ಯಮ ಮತ್ತು ಮಾಹಿತಿ ಸಂಸ್ಥೆಗಳಲ್ಲಿ ಒಂದಾದ ಕೃಷಿ ಜಾಗರಣ್ ಈ ಅಪ್ಲಿಕೇಶನ್‌ನ್ನು ಅಭಿವೃದ್ಧಿಪಡಿಸಿದೆ. ರೈತರಿಗೆ ತುರ್ತು ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಂದ್ರೀಕರಿಸುವ ಇತರ ಆ್ಯಪ್‌ಗಳಿಗಿಂತ ಇದು ಭಿನ್ನವಾಗಿದ್ದು, ಎಲ್ಲಾ ಕೃಷಿ ಸಂಬಂಧಿತ ಮಾಹಿತಿಯ ಒಟ್ಟು ಮೂಲವಾಗಿ ಕಾರ್ಯ ನಿರ್ವಹಿಸುತ್ತದೆ. ರೈತರಿಗೆ ಇತ್ತೀಚಿನ ಕೃಷಿ ನವೀಕರಣಗಳು, ಯಂತ್ರೋಪಕರಣಗಳು, ಕೃಷಿ ಸಂಬಂಧಿತ ಸುದ್ದಿಗಳು, ಕೀಟಗಳು ಮತ್ತು ರೋಗಗಳು ನಿಯಂತ್ರಣ ಕ್ರಮಗಳು, ಕೃಷಿ ಮಾರ್ಗದರ್ಶಿಗಳು ಹಾಗೂ ದಿನಚರಿಗಳನ್ನು ಒದಗಿಸುವ ಮುಖ್ಯ ವಾಹಿನಿಯಾಗಿ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ಯೋಜನೆಗಳು, ಕೃಷಿ ಸಬ್ಸಿಡಿ ಯೋಜನೆಗಳು, ಕೃಷಿ ವಿಮಾ ಯೋಜನೆಗಳು ಮತ್ತು ಸರ್ಕಾರದ ಕೃಷಿ ನೀತಿಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಈ ಅಪ್ಲಿಕೇಶನ್ ಹೆಚ್ಚು ಉಪಯುಕ್ತವಾಗಿದೆ. ಕೃಷಿ ಕ್ಷೇತ್ರದಲಿನ ಇತ್ತೀಚಿನ ತಂತ್ರಜ್ಞಾನಗಳು ಮತ್ತು ಉದ್ಯೋಗವಕಾಶಗಳ ಬಗ್ಗೆ ರೈತರಿಗೆ ಅರಿವು ಮೂಡಿಸುತ್ತದೆ. ಇತ್ತೀಚಿನ ಮತ್ತು ಸ್ಥಳೀಯ ಮಾಹಿತಿಯೊಂದಿಗೆ ತಾಂತ್ರಿಕ ನಾವೀನ್ಯತೆಗಳನ್ನು ಕೊಡುವಲ್ಲಿ ಉಪಯುಕ್ತವಾಗಿದೆ.

**8. ಪಪಾಯ ಕೃಷಿ ಅಪ್ಲಿಕೇಶನ್ :** ಈ ಅಪ್ಲಿಕೇಶನ್‌ನ್ನು ಸಂಪೂರ್ಣ ಪಪಾಯ ಕೃಷಿ ಪ್ರಕ್ರಿಯೆಗೆ ಸಮಗ್ರ ಪರಿಹಾರವನ್ನು ಒದಗಿಸುವ ಪ್ರಾಥಮಿಕ ಉದ್ದೇಶದೊಂದಿಗೆ ಭಾರತೀಯ ತೋಟಗರಿಕಾ ಸಂಸ್ಥೆ, ಬೆಂಗಳೂರು ಅಭಿವೃದ್ಧಿಪಡಿಸಿದೆ. ಭೂಮಿ ಸಿದ್ಧತೆ, ನಾಟಿ ತಂತ್ರಗಳು, ತಳಿಗಳ ಆಯ್ಕೆ, ಪೋಷಕಾಂಶದ ಅವಶ್ಯಕತೆಗಳು, ನೀರಾವರಿ ವಿಧಾನಗಳು ಮತ್ತು ಕೋಯ್ಲು ತಂತ್ರಜ್ಞಾನಗಳಂತಹ ಕೃಷಿಯಲ್ಲಿನ ಎಲ್ಲಾ ಅವಶ್ಯಕತೆಗಳ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಪಪಾಯ ಗಿಡಗಳನ್ನು ಬಾಧಿಸುವ ಕೀಟಗಳಾದ ಹಣ್ಣಿನ ನೊಣಗಳು, ಹೇನುಗಳು, ಬಿಳಿ ನೊಣಗಳು ಮತ್ತು ಕೆಂಪು ಜೇಡಗಳಂತಹ ಕೀಟಗಳ ಪತ್ತೆ ಹಚ್ಚುವಿಕೆ ಮತ್ತು ಅವುಗಳ ನಿರ್ಮೂಲನ ಕ್ರಮಗಳನ್ನು ಒಳಗೊಂಡಿರುತ್ತದೆ. ಅಲ್ಲದೇ, ಈ ಆ್ಯಪ್ ರೋಗ ನಿರ್ವಹಣೆ ಕುರಿತು ಮಾಹಿತಿ ಒದಗಿಸುತ್ತದೆ. ಪ್ರಮುಖ ರೋಗಗಳಾದ ಚಿಬ್ಬು ರೋಗ, ಬೂದು ರೋಗ ಮತ್ತು ಬೇರು ಕೊಳೆಯುವಿಕೆಯಂತಹ ರೋಗಗಳ ಪತ್ತೆ ಹಚ್ಚುವಿಕೆ ಮತ್ತು ಅವುಗಳ ನಿರ್ವಹಣಾ ವಿಧಾನಗಳನ್ನು ಸವಿಸ್ತಾರವಾಗಿ ತಿಳಿಸುತ್ತದೆ. ಈ ಆ್ಯಪ್ ಪಪಾಯ ಬೆಳೆಗಾರರಿಗೆ ಹೊಸದಾಗಿ ಅಭಿವೃದ್ಧಿಪಡಿಸಿದ ತಳಿಗಳ ಕುರಿತು ಮಾಹಿತಿ ನೀಡುತ್ತಲೇ ಇರುತ್ತದೆ ಮತ್ತು ನಿರ್ದಿಷ್ಟ ಪ್ರದೇಶಕ್ಕೆ ಸೂಕ್ತವಾದ ತಳಿಗಳ ಆಯ್ಕೆ ಮಾಡಲು ನೆರವು ನೀಡುತ್ತದೆ. ಹೀಗಾಗಿ, ಬೆಳೆ ನಿರ್ದಿಷ್ಟ, ಸಂಶೋಧನೆ ಮತ್ತು ಉತ್ತಮ ಕೀಟ ನಿರ್ವಹಣೆಯನ್ನು ಸುಗಮಗೊಳಿಸುವುದಲ್ಲದೆ, ಬೆಳೆಗಾರರಿಂದ ಸುಧಾರಿತ ಪಪಾಯ ತಳಿಗಳನ್ನು ವೇಗವಾಗಿ ಅಳವಡಿಸಿಕೊಳ್ಳುವಂತೆ ಮಾಡಿ ಇಳುವರಿಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

**9. ಕ್ರಾಪ್ ಡಾಕ್ಟರ್ ಆ್ಯಪ್** : ಇದು ರೈತರು ಮತ್ತು ಕೃಷಿಗೆ ಸಂಬಂಧಿಸಿದ ಇತರ ಪಾಲುದಾರರಿಗಾಗಿಯೇ ವಿನ್ಯಾಸಗೊಳಿಸಲಾದ ರೋಗ ನಿರ್ಣಯದ ಸಮಸ್ಯೆ ಪರಿಹರಿಸುವ ಮೊಬೈಲ್ ಅಪ್ಲಿಕೇಶನ್ ಆಗಿದ್ದು, ಅಗತ್ಯವಿರುವ ಕೃಷಿ ಮಾಹಿತಿ ಮತ್ತು ಸೇವೆಗಳಿಗೆ ತ್ವರಿತವಾಗಿ ಮಾಹಿತಿ ಪಡೆದುಕೊಳ್ಳಲು ಸಹಾಯ ಮಡುತ್ತದೆ. ಈ ಅಪ್ಲಿಕೇಶನ್ ಹಿಂದಿ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿಯೂ ಲಭ್ಯವಿದ್ದು, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಪಯುಕ್ತವಾಗುವಂತೆ ವಿನ್ಯಾಸಗೊಳಸಲಾಗಿದೆ. ಹಾನಿಗೊಳಗಾದ ಮತ್ತು ಸೊಂಕಿತ ಬೆಳೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಅಪ್‌ಲೋಡ್ ಮಾಡುವ ಮೂಲಕ ಬೆಳೆಯ ಸಮಸ್ಯೆಗಳನ್ನು ಗುರುತಿಸುವುದು. ಬೆಳೆಗಳ ರೋಗಗಳು, ಕೀಟಗಳು ಮತ್ತು ಪೋಷಕಾಂಶಗಳ ಕೊರತೆಯನ್ನು ಶೀಘ್ರವಾಗಿ ಗುರುತಿಸಿ ಪರಿಹಾರವನ್ನು ತ್ವರಿತವಾಗಿ ಸೂಚಿಸುತ್ತದೆ. ಆಯ್ದ ಚಿತ್ರಗಳನ್ನು ಅವಲಂಬಿಸಿ, ಈ ಅಪ್ಲಿಕೇಶನ್ ಸಂಭಾವ್ಯ ರೋಗ ನಿರ್ಣಯ ಮತ್ತು ಸೂಕ್ತವಾದ ನಿರ್ವಹಣಾ ಶಿಫಾರಸ್ಸುಗಳನ್ನು ಒದಗಿಸುತ್ತದೆ. ಈ ಅಪ್ಲಿಕೇಶನ್ ಪ್ರಮುಖ ಬೆಳೆಗಳಾದ ಭತ್ತ, ತರಕಾರಿಗಳು, ಬೇಳೆ ಕಾಳುಗಳು ಮತ್ತು ಎಣ್ಣೆ ಕಾಳುಗಳಮತಹ ಬೆಳೆಗಳಲ್ಲಿ ಪರಿಣಿತಿಯನ್ನು ಹೊಂದಿದೆ. ಇತ್ತೀಚಿನ ಆವೃತ್ತಿಯು ಸರ್ಕಾರಿ ಕೃಷಿ ಯೋಜನೆಗಳು ಮತ್ತು ಸಬ್ಸಿಡಿಗಳು, ಆಧುನಿಕ ಕೃಷಿ ಯಂತ್ರೋಪಕರಣಗಳು ಮತ್ತು ಇತರ ಸಂಬಂಧಿತ ಸುದ್ದಿಗಳ ಬಗ್ಗೆ ನಿಖರ ಮಾಹಿತಿಯನ್ನು ಒದಗಿಸುತ್ತದೆ. ಈ ಆ್ಯಪ್ ಖಂಡಿತವಾಗಿಯು ರೈತರು ಮತ್ತು ತಜ್ಞರ ನಡವೆ ಸೇತುವೆಯಾಗಿ ಕಾರ್ಯನಿಹಿಸುತ್ತಿದೆ. ಈ ಆ್ಯಪ್‌ನ್ನು ಇಂದಿರಾಗಾಂಧಿ ಕೃಷಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ರಾಷ್ಟ್ರೀಯ ಮಾಹಿತಿ ಕೇಂದ್ರವು ಅಭಿವೃದ್ಧಿಪಡಿಸಿದೆ.

**10. ಕಿಸಾನ್ ಸುವಿಧಾ ಆ್ಯಪ್ :** ಭಾರತೀಯ ಕೃಷಿಯಲ್ಲಿನ ವಿವಿಧ ಆವಿಷ್ಕಾರಗಳಲ್ಲಿ 2016 ರಲ್ಲಿ ಭಾರತ ಸರ್ಕಾರದಿಂದ ಪರಿಚಯಿಸಲ್ಪಟ್ಟ ಕಿಸಾನ್ ಸುವಿಧಾ ಎಂಬ ಡಿಜಿಟಲ್

ಸೇವೆಯು ಅಗ್ರಸ್ಥಾನದಲ್ಲಿದೆ. ಇದು ಹಲವಾರು ವೈಶಿಷ್ಟ್ಯಗಳು ಮತ್ತು ಕಾರ್ಯಗಳನ್ನು ಹೊಂದಿರುವ ರೈತರಿಗೆ ಅಗತ್ಯವಿರುವ ಎಲ್ಲಾ ಮಾಹಿತಿಗಳು ಒಂದೇ ಸೂರಿನಲ್ಲಿ ಲಭ್ಯವಿರುವ ವೇದಿಕೆಯಾಗಿದೆ.

ಇದೊಂದು ಬಹುಭಾಷಾ ವೇದಿಕೆಯಾಗಿದ್ದು, ಹಲವು ಭಾಷೆಗಳಲ್ಲಿ ಲಭ್ಯವಿದೆ. ಈ ಆ್ಯಪ್ ಕೇವಲ ಆ ಕ್ಷಣದ ಹವಾಮಾನ ನೀಡುವುದಲ್ಲದೆ, ಮುಂದಿನ 5 ದಿನಗಳ ಹವಾಮಾನ ವರದಿಯನ್ನು ನೀಡುತ್ತದೆ. ಇದರಿಂದಾಗಿ, ರೈತರು ತಮ್ಮ ಹೊಲಗಳಲ್ಲಿ ವಿವಿಧ ಕೆಲಸಗಳ ನಿರ್ಧಾರವನ್ನು ಮಾಡಬಹುದು. ರಾಸಾಯನಿಕ ಸಿಂಪಡಣೆ ಅಥವಾ ಕೋಯ್ಲಿನಂತಹ ಮಹತ್ತರ ಆಯ್ಕೆಗಳನ್ನು ಮಾಡುವಲ್ಲಿ ಬಹುಪಕಾರಿ ಹವಾಮಾನ ಸಂಬಂಧಿತ ಮಾಹಿತಿ ಅಷ್ಟೆ ಅಲ್ಲದೇ ಬೀಜಗಳ ಲಭ್ಯತೆ, ರಸಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ವಿವಿಧ ಬೆಳೆಗಳಿಗೆ ಉಪಲಬ್ಧವಿರುವ ಸ್ಥಳೀಯ ಮಾರುಕಟ್ಟೆ ದರದ ಮಾಹಿತಿ, ಉಗ್ರಾಣ ಮತ್ತು ಕೋಲ್ಡ್ ಸ್ಟೋರೇಜ್ ಬಗ್ಗೆಯು ಮಾಹಿತಿಯನ್ನು ಒದಗಿಸುತ್ತದೆ. ವಿವಿಧ ಬೆಳೆಗಳಲ್ಲಿ ಹಾನಿ ಉಂಟು ಮಾಡುವ ವಿವಿಧ ಕೀಟಗಳು ಮತ್ತು ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಿ ನಿರ್ವಹಣಾ ಕ್ರಮಗಳನ್ನು ಸೂಚಿಸುತ್ತದೆ. ಇದರಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣಾ ಪದ್ಧತಿಗಳನ್ನು ಸೇರಿಸಿದ್ದು, ರೈತರಿಗೆ ರಾಸಾಯನಿಕಗಳ ಬಳಕೆ ಕಡಿತಗೊಳಿಸುವಂತೆ ಉತ್ತೇಜಿಸುತ್ತದೆ. ಈ ಅಪ್ಲಿಕೇಶನ್ ಕೂಡ ರೈತರು ಮತ್ತು ಕೃಷಿ ತಜ್ಞರ ನಡುವೆ ಸಂಪರ್ಕ ಕಲ್ಪಿಸಿಕೊಟ್ಟು ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಹಾಯ ಮಾಡುತ್ತದೆ. ಈ ಅಪ್ಲಿಕೇಶನ್ ರೈತರಿಗೆ ಅಪಾಯದ ಮುನ್ಸೂಚನೆಯನ್ನು ಮುಂಚಿತವಾಗಿ ತಿಳಿಸಿ, ಸೂಕ್ತವಾದ ನಿರ್ಧಾರಗಳನ್ನು ಕೈಗೊಂಡು ಉಂಟಾಗಬಹುದಾದ ಬೆಳೆ ಹಾನಿಯನ್ನು ತಡೆಯಲು ಬಹಳ ಉಪಯುಕ್ತ ಸಾಧನವಾಗಿದೆ.

**11. ಫಾರ್ಮ್ ಒ–ಪಿಡಿಯಾ ಆ್ಯಪ್ :** ಸ್ಥಳ ನಿರ್ದಿಷ್ಟ ಮಣ್ಣಿನ ಸ್ವರೂಪ ಮತ್ತು ಋತುವಿನ ಆಧಾರದ ಮೇಲೆ ಬೆಳೆ ಶಿಫಾರಸ್ಸುಗಳನ್ನು ನೀಡುತ್ತದೆ. ಹೀಗಾಗಿ, ರೈತರು ಎಚ್ಚರಿಕೆಯಿಂದ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಲು ಸೂಕ್ತವಾದ ಬೆಳೆಗಳನ್ನು ಆಯ್ಕೆ ಮಾಡಲು ಅನುವು ಮಾಡಿಕೊಡುತ್ತದೆ. ಇದಲ್ಲದೇ, ಬೆಳೆಗಳ ಬೆಳವಣಿಗೆಯ ಆಧಾರದ ಮೇಲೆ ರಸಗೊಬ್ಬರ ಮತ್ತು ಕಳೆನಾಶಕಗಳ ಬಳಕೆಯ ಸೂಚನೆಗಳನ್ನು ಒದಗಿಸುತ್ತದೆ. ಹೀಗಾಗಿ, ಸಮತೋಲಿತ ಪೋಷಕಾಂಶಗಳ ನಿರ್ವಹಣೆಗೆ ಸಹಾಯ ಮಾಡುತ್ತದೆ ಮತ್ತು ಕಳೆಗಳಿಂದ ಉಂಟಾಗುವ ಹಾನಿಯನ್ನು ತಡೆಗಟ್ಟಿ ಉತ್ತಮ ಇಳುವರಿ ಪಡೆಯಲು ನೆರವು ಮಾಡುತ್ತದೆ. ಕೀಟ ಮತ್ತು ರೋಗ ನಿರ್ವಹಣೆಗೆ ಶಿಫಾರಸ್ಸು ಮಾಡಲಾದ ರಾಸಾಯನಿಕಗಳ ಪಟ್ಟಿಯನ್ನು ಒದಗಿಸುತ್ತದೆ ಮತ್ತು ನಿಷೇಧಿತ ಅಥವಾ ನಿರ್ಬಂಧಿತ ರಾಸಾಯನಿಕಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ, ಇದರಿಂದ ಸುರಕ್ಷಿತ ರಾಸಾಯನಿಕಗಳನ್ನು ಬಳಸಲು ಸುಲಭವಾಗುತ್ತದೆ ಮತ್ತು ಮಾನವನ ಆರೋಗ್ಯ ಮತ್ತು ಪರಿಸರಕ್ಕೆ ಉಂಟಾಗಬಹುದಾದ ಅಪಾಯವನ್ನು ತಪ್ಪಿಸುತ್ತದೆ. ಮಣ್ಣು ಆಧಾರಿತ ಶಿಫಾರಸ್ಸುಗಳನ್ನು ಮಾಹಿತಿಗಳೊಂದಿಗೆ ಸಂಯೋಜಿಸುವ ಮೂಲಕ ಫಾರ್ಮ್ ಒ–ಪಿಡಿಯಾ ಸುಸ್ಥಿರತೆ ಮತ್ತು ಪರಿಸರ ಸ್ನೇಹಿ ಕೃಷಿಯ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತಿದೆ. ಈ ಆ್ಯಪ್‌ನ್ನು ಸುಧಾರಿತ ಕಂಪ್ಯೂಟಿಂಗ್ ಅಭಿವೃದ್ಧಿ ಕೇಂದ್ರ, ಮುಂಬಯಿ ಅಭಿವೃದ್ಧಿಪಡಿಸಿದೆ.

**ಸಾರಾಂಶ :** ಮೊಬೈಲ್ ಅಪ್ಲಿಕೇಶನ್‌ಗಳು ಕೀಟಗಳ ಹಾವಳಿಯನ್ನು, ರೋಗಗಳಿಂದ ಉಂಟಾಗುವ ಬೆಳೆ ಹಾನಿಯನ್ನು ತಡೆಗಟ್ಟವುದು, ಹವಾಮಾನ ಮುನ್ಸೂಚನೆ, ಬೆಳೆಗಳ ಬೆಳವಣಿಗೆ ಆಧಾರಿತ ಸಲಹೆಗಳನ್ನು ನೀಡುವ ಮೂಲಕ ಭಾರತೀಯ ಕೃಷಿಯಲ್ಲಿ ಹೊಸ ಕ್ರಾಂತಿಯನ್ನು ಮೂಡಿಸಿವೆ. ಕೃಷಿ ಜಾಗರಣ್ ಮತ್ತು ಕಿಸಾನ್ ಸುವಿಧಾದಂತಹ ಸರ್ಕಾರದ ಬೆಂಬಲಿತ ಅಪ್ಲಿಕೇಶನ್‌ಗಳು ಮತ್ತು ಪ್ಲಾಂಟಿಕ್ಸ್, ಮೈ ಐಪಿಎಂ ಮತ್ತು ಎ.ಜಿ. ಪಿ.ಎಚ್‌ಡಿ. ಗಳಂತಹ ವಿಶೇಷ ಸಾಧನಗಳು ರೈತರಿಗೆ ಸಂಶೋಧನೆ ಆಧಾರಿತ ಕೃಷಿ ಜ್ಞಾನದ ವಿಸ್ತರಣೆಗೆ ಅನುವು ಮಾಡಿ ಕೊಡುತ್ತಿವೆ. ತಂತ್ರಜ್ಞಾನಗಳ ಪ್ರಗತಿಯೊಂದಿಗೆ ಇಂತಹ ಅಪ್ಲಿಕೇಶನಗಳನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳುವುದರಿಂದ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಬಹುದು, ಆಹಾರ ಭದ್ರತೆಯನ್ನು ಖಾತರಿಪಡಿಸಬಹುದು ಮತ್ತು ಗ್ರಾಮೀಣ ಜೀವನೋಪಾಯವನ್ನು ಸುಂದರಗೊಳಿಸಬಹುದು. ಇದಲ್ಲದೇ, ರೈತರಲ್ಲಿ ಮುಂದುವರಿದ ನಾವಿನ್ಯತೆ, ಹೊಸ ಆವಿಷ್ಕಾರಗಳು ಮತ್ತು ಅವುಗಳ ಲಭ್ಯತೆ ಮತ್ತು ಜಾಗೃತಿ ಭಾರತದ ಕೃಷಿ ವಲಯದ ಮೇಲೆ ಸಕರಾತ್ಮಕ ಪರಿಣಾಮ ಬೀರುತ್ತಿದೆ. ಇಂತಹ ಹೊಸ ಅಪ್ಲಿಕೇಶನ್‌ಗಳ ಬಳಕೆಯಿಂದ ಬೆಳೆ ಹಾನಿಯಿಂದ ಉಂಟಾಗುತ್ತಿರುವ ನಷ್ಟವನ್ನು ಕಡಿಮೆಗೊಳಿಸಿ ರೈತರ ಆಧಾಯುವನ್ನು ದ್ವಿಗುಣಗೊಳಿಸಬಹುದು.

**"ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ;**
**ಕೀಳರಿಗಲ್ಲದೆ ಹಯನಕರೆವುದೇ?**
**ಮೇಲಾಗಿ ನರಕದೊಳೋಲಾಡಲಾರೆನು,**
**ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು"**

**– ಬಸವಣ್ಣನವರು**

# ಶರಣರ ನುಡಿ ನಮನ

ಸೃಷ್ಠಿಯ ಸಕಲ 80 ಸಾವಿರ ಜೀವ ಸಂಕುಲಗಳಿಗೆ ನರಜನ್ಮ ಶ್ರೇಷ್ಠ. ಮಾನವನಿಗೆ, ಮಾತನಾಡುವ, ನಗುವ, ಅಳುವ, ಓದುವ, ಬರೆಯುವ ಕಲ್ಪನೆಯನ್ನ ಕಾರ್ಯ ರೂಪಿತಗೊಳಿಸುವ ಕಲೆ ವೈಜ್ಞಾನಿಕ, ವೈಚಾರಿಕ, ಆಧ್ಯಾತ್ಮಿಕ, ಪರಿಜ್ಞಾನವುಳ್ಳ ಅವಸ್ಥಾತ್ರಯಗಳನ್ನು ಅನುಭವಿಸುವ ಸಾಮರ್ಥ್ಯ ಹೊಂದಿದ್ದಾನೆ.

"ಸ್ಥಾವರಕ್ಕೆ ಸುಪ್ತಿ – ಪಶುಜೀವರ್ಗ ಸ್ವಪ್ನ–ದೇವಜಾಲಕ್ಕೆ ಜಾಗ್ರ, ಮನುಜಗೆ ಅನುಭವಸಲವಸ್ತೆ. ಮಾನವ" ಶ್ರೀ ಗುರು ವಚನೋಪದೇಶವನ್ನಾಲಿಸಿದಾಗಳಹುದು ನರರಿಗೆ ಸಾರಸ್ವತ ಬದುಕು. ಮನುಜ ತಾಮಾಡುವ, ತೊಡಗಿಸಿಕೊಳ್ಳುವ ಸತ್ಕಾರ್ಯ, ದಾನ, ಧರ್ಮ, ಪರೋಪಕಾರ, ಮಾನವೀಯ ನೆಲೆಗಟ್ಟಿನ ಪುಣ್ಯ ಕಾರ್ಯಗಳಿಂದ ಶಿವಮಂತ್ರ ಇಷ್ಠಲಿಂಗ ಪೂಜೆಯ ಮೂಲಕ ಉನ್ನತ ಆದರ್ಶ ಜನ್ಮ ಸಾರ್ಥಕಗಳನ್ನು ಪೂರೈಸಿಕೊಳ್ಳುವ ಶ್ರೇಷ್ಠಜೀವಿಯಾಗಿದ್ದಾನೆ. ಇಷ್ಠಲಿಂಗೋಪಾಸನೆಯಿಂದ ಆತ್ಮಶುದ್ದ ಜ್ಞಾನ ಮಾತ್ರವಲ್ಲದೆ ಜಾತ್ಯಾತೀತ ಮನೋವೈಶಾಲ್ಯ ಮೆರೆದು ನಿಜಾತ್ಮವನ್ನರಿತ ಪುಣ್ಯಸಾಧನೆಗಾಗಿ ಕಾಯಕ, ದಾಸೋಹ, ಅನೇಕ ಶಕ್ತಿ ಸಾಮರ್ಥ್ಯಗಳಲ್ಲಿ ತೊಡಗಿಸಿಕೊಳ್ಳುವವರೆ ನಿಜ ಶರಣರು.

ಮನುಷ್ಯನು ತಾನು ಮಾಡಿರುವ ವಿಸೇಷ ಸೇವೆಗಳಿಂದ ಲಭ್ಯವಾಗಿರುವ ಪವಿತ್ರವಾದ ಹಾಗೂ ದುರ್ಲಭ ಭಾವದ ಮಾನವ ಜನ್ಮವನ್ನು ಅನ್ನ, ವಸ್ತ್ರ, ಗೃಹ, ಸತಿ, ಪತಿ, ಸಂತಾನ, ಧನ, ಕನಕ, ವೃದ್ಧಿಗಾಗಿಯೇ ಜೀವನವನ್ನು ಮೀಸಲಾಗಿರಿಸದೆ ಲೋಕಕಲ್ಯಾಣಕ್ಕಾಗಿ ತಮ್ಮ ವಚನ ಶ್ರೇಷ್ಠ ಸಂದೇಶಗಳ ಮೂಲಕ ಸಾರ್ಥಕಗೊಳಿಸಿಕೊಳ್ಳಬೇಕೆಂಬ ಅಂಬಲದಿಂದ ಅರ್ಥ ಸಹಿತ ಮಹತ್ವ ನುಡಿಗಳನ್ನಾಡಿ "ಸರ್ವೇಜನ ಸುಖಿನೋಭವಂತು'' ಪ್ರಕ್ರಿಯೆಯಲ್ಲಿ ವಿಶ್ವಮಾನ್ಯ ಸಂದೇಶನಿಡಿರುವುದನ್ನು ಮನಗಾಣಬಹುದು.

ಪ್ರಸ್ತುತ ಸನ್ನಿವೇಶದಲ್ಲಿ ರಾಜಕೀಯ ಪಟುಗಳು, ಧಾರ್ಮಿಕ ಗುರುಗಳು, ಸೇವಾ ವಲಯದ ನೌಕರಶಾಹಿಗಳು, ಮಿಗಿಲಾಗಿ ಪ್ರಜ್ಞಾನಾವಂತರೆನಿಸಿದ ಮಹಿಮರು ತಾವಾಡುವುದು, ಹೇಳುವುದು, ವೇದೋಕ್ತಿ, ತಾವು ನಡೆಯುವುದು ಕುಯುಕ್ತಿ ತತ್ವ ಪ್ರಾದಾನ್ಯವಾಗಬಾರದು. ನುಡಿದಂತೆ ನಡೆಯದಿದ್ದರೆ ಮೆಚ್ಚನಾ ಪರಮಾತ್ಮನು? ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬ ಸೂಕ್ತಿಯಂತೆ ನುಡಿಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ ಉಪದೇಶ, ಉಪನ್ಯಾಸ, ಮಾರ್ಗದರ್ಶನ ನೀಡುವುದು ಒಳಿತು.



**ಮಲ್ಲೇಶಪ್ಪ ಟಿ.ಎಸ್.**
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ ತಾ.
ತುಮಕೂರು ಮೊ : 8050074810

ನುಡಿ ಎಷ್ಟು ಔಚಿತ್ಯ ಪೂರ್ಣವೋ ಹಾಗೇಯೇ ಎಲ್ಲರು ನುಡಿಯಂತೆ–ನಡೆದು ಮುಂದಿನ ಯುವ ಜನಾಂಗದ ಜೀವ ಸಂಕುಲಕ್ಕೆ ಮಾದರಿ (ಆದರ್ಶ) ಯಾಗಬೇಕು. ನಾಲಿಗೆ ಜಾರಿ ಮಾತು ಹೊರಬಂದರೆ ಹಿಂದಕ್ಕೆ ಬಾರದು ನಾಲಿಗೆಯಿಂದ ಬಂದ ಗಾಯ ಗುಣ ವಾಗದು ಹಾಗೂ ಎಲುಬಿಲ್ಲದ ನಾಲಿಗೆಯಿಂದ ಸ್ವಾರ್ಥ ಸಹಿತ ಉದ್ದೇಶಗಳ ಸಾದನೆಯ ಹಿನ್ನಲೆಯಲ್ಲಿ ಪ್ರಾಮಾಣಿಕತೆ, ಮಾತಿನಲ್ಲಿ ನಿಷ್ಠೆ, ಸತ್ಯ, ನಿತ್ಯ ಮರೆಮಾಚಿ ಪರರ ಸಂಕಷ್ಟದಲ್ಲಿ ವಿಕೃತ ಸಂತೋಷ ಸುಖ, ಶಾಂತಿ, ಮೋಜು, ನಿರೀಕ್ಷಿಸುವುದು ಸಲ್ಲದು. ನುಡಿದಂತೆ ನಡೆಯದೆ ಕೇವಲ ಆಶ್ವಾಸನೆ ಭರವಸೆಗಳ ಮಹಾಪೂರದ ಆಮಿಷವೊಡ್ಡಿ ಅಮಾಯಕರು, ದುರ್ಬಲರು, ಜನಸಾಮಾನ್ಯರನ್ನು ಶೋಷಿಸುವ, ನಂಬಿಸಿ ಕತ್ತುಕೊಯ್ಯುವ ಹಾಗೂ ಜೀವ ತೆಗೆಯುವ ನುಡಿ (ಸಾದನ) ನಾಲಿಗೆಯಾಗಬಾರದು. ದಟ್ಟ ದಪ್ಪಸುಳ್ಳಿನ ಪರ್ವತ ನಿರ್ಮಿಸಿ ಪ್ರಾಮಾಣಿಕರರನ್ನು ಶಿಕ್ಷಿಸುವುದು ಎಷ್ಟುಸರಿ? ಬ್ರಷ್ಟರು, ದುರುಳರು, ಅವಿವೇಕಿಗಳನ್ನು ಸರಿದಾರಿಗೆ ತರಲು ಶರಣರು ಜನಪದ ಅನುಭಾವಿಗಳ ನುಡಿಗಳನ್ನು ಅವಲೋಕಿಸೋಣ.

ನಡೆ ನುಡಿ ಮಹತ್ವವನ್ನು ಬಸವೇಶ್ವರರು – ತಮ್ಮ ವಚನದಲ್ಲಿ – ನುಡಿದರೆ ಮುತ್ತಿನಹಾರದಂತಿರಬೇಕು. ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಹೌದು ಹೌದು ಎನ್ನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಪರಮಾತ್ಮ ಮೆಚ್ಚುವುದಿಲ್ಲ ಎಂಬ ಸಲಹೆ, ಸರ್ವಮಾನ್ಯ ಸಂದೇಶ, ಇದು ಎನ್ನಬಹುದು. ಮಾತು ಬೆಳ್ಳಿ ಮೌನ ಬಂಗಾರ ಹೇಳಿಕೆಗಳಲ್ಲಿ ನಂಬಿಕೆಹೊಂದಿ ಸುವರ್ಣದಷ್ಟೆ ನುಡಿ ಮೌಲ್ಯಯುತವಾಗಿರಬೇಕು. ತಾವಾಡುವ ಮಾತು ಪರರಿಗೆ ನೋವಾಗ ಬಾರದಲ್ಲವೇ. ಕೈಕೆಯ ಮಾತಿನಿಂದ ಶ್ರೀರಾಮನ ವನವಾಸ, ಸೀತಾಳ ಅಗ್ನಿ ಪರೀಕ್ಷೆ, ಬೀಷ್ಮ ಪರೀಕ್ಷೆ, ಕರುಣ ಕೊಟ್ಟ ಮಾತುಗಳು ಎಂತಹ ಪರಿಣಾಮ ಬೀರಿದ ಸಂಗತಿಗಳನ್ನ ಅರಿತು ನುಡಿಯ ಬೇಕು. ಮೌನದಲುಂಬಿಸುವುದು ಆಚಾರ ವಲ್ಲ ಶರಣರ ವಚನಾಮೃತ ಅರಿತು ಲೌಕಿಕ ಭೋಗ–ಭಾಗ್ಯಗಳ ವ್ಯಾಮೋಹ ತೊರೆದು, ಭಗವಂತನ ಧ್ಯಾನದಲ್ಲಿ ಮನಸ್ಸನ್ನು ಕೇಂದ್ರೀಕರಿಸಬೇಕಿದೆ. ನಡೆನುಡಿಗಳೊಂದಾದವರಿಗೊಲಿವೆ. ಕಂಡಯ್ಯ ಮಾನವನ ಅತಿ ಜಾಣತನಕ್ಕಿಂತ ತಾವಾಡುವ ನುಡಿಗಳಂತೆ ನಡೆದುಕೊಳ್ಳುವವರಿಗೆ ಮಾತ್ರ ದೇವರ ಅನುಗ್ರಹ ಸಾಧ್ಯ ಎಂಬುದು ಅಂಬಿಗರ ಚೌಡಯ್ಯರವರ ಅಭಿಮತ.

# ಮರೆಯಾಗುತ್ತಿರುವ ಸಂಸ್ಕೃತಿ

21ನೇ ಶತಮಾನದಲ್ಲಿರುವ ನಾವು ಹಿಂದಿನ ಸಂಸ್ಕೃತಿ ಪ್ರಾಮಾಣಿಕತೆ, ರಾಜಕೀಯ ವ್ಯವಸ್ಥೆ, ಆಡಳಿತ ವ್ಯವಸ್ಥೆ, ಕಾಯಕ ಮತ್ತು ಮಾನವೀಯ ಮೌಲ್ಯಗಳ ಕುರಿತು ಅವಲೋಕನ ಮಾಡಿಕೊಂಡಾಗ ಇಂದಿನ ಸಮಾಜದಲ್ಲಿ ಆಡಳಿತ, ಸಂಸ್ಕೃತಿ ಮತ್ತು ಆರ್ಥಿಕ ವ್ಯವಸ್ಥೆ, ಇವುಗಳು ತಮ್ಮ ಮೂಲ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಆ ಕಾಲಘಟ್ಟದ ಅನನ್ಯ ಜೀವನ, ಪ್ರೀತಿಯ ವ್ಯಕ್ತಿಗಳನ್ನು, ನಂಬಿಕೆಗಳನ್ನು ಅವರುಗಳು ಮಾಡುತ್ತಿದ್ದ ಕಾಯಕಗಳನ್ನು ನೆನೆಸಿಕೊಂಡಾಗ ಅವೆಲ್ಲವೂ ಇಂದಿನ ನಾಗರೀಕ ಮತ್ತು ಅರ್ಥವಿಲ್ಲದಿರುವ ಸಮಾಜದಲ್ಲಿ ಜಾಗತೀಕರಣದ ಹೊಡೆತಕ್ಕೆ ಸಿಲುಕಿ ಮರೆಯಾಗುತ್ತಿವೆ. ಮನುಷ್ಯನ ಸ್ವಾರ್ಥತೆ ಹೆಚ್ಚಾದಾಗ ಅವನಲ್ಲಿರುವ ಪ್ರಾಮಾಣಿಕತೆ, ನಿಸ್ವಾರ್ಥ ಸೇವೆಯ ಮಹತ್ವವನ್ನು ಕಳೆದುಕೊಳ್ಳುತ್ತದೆ. ಶೇ.20 ರಷ್ಟು ಜನ ನಂಬಿಕೆ, ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇಂದಿನ ಯುವಜನತೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಅನ್ಯಾಯ, ಅಧರ್ಮ, ಅಸಮಾನತೆ, ಜಾತಿಭೇದ, ಇವಗಳ ವಿರುದ್ಧ ಹೋರಾಡುವಂತಹ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಸಂವಿಧಾನವು ಪ್ರತಿಯೊಬ್ಬ ನಾಗರೀಕನಿಗು ಸಮಾನ ಹಕ್ಕುಗಳನ್ನು ನೀಡಿದ್ದು ಯುವ ಜನತೆ ಇದನ್ನು ಅರ್ಥ ಮಾಡಿಕೊಂಡು ಸಮಾನತೆಯ ಬಗ್ಗೆ ಮಾನವೀಯ ಮೌಲ್ಯಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗಿದೆ.

12ನೇ ಶತಮಾನದಲ್ಲಿ ಶರಣರುಗಳು ತಾವು ಮಾಡುತ್ತಿದ್ದ ಕಾಯಕದಲ್ಲಿ ಕೈಲಾಸ ಕಾಣುತ್ತಿದ್ದರು. ಅವರುಗಳಲ್ಲಿ ಪ್ರಾಮಾಣಿಕತೆ, ನಿಷ್ಠೆ ಮತ್ತು ಬದ್ಧತೆಯನ್ನು ಕಾಣಬಹುದಿತ್ತು. ಸತ್ಯದ ದುಡಿಮೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದರು. ಕಾಯಕವೇ ಅವರ ಮಾತಾಗಿದ್ದು ಪ್ರತಿಯೊಬ್ಬರು ಶ್ರಮವಹಿಸಿ ದುಡಿದು ದೈನಂದಿನ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದರು. ಅಂದಿನ ನಾಗರೀಕತೆ ಮತ್ತು ಸಂಸ್ಕೃತಿ ಈಗ ಬದಲಾಗಿದೆ. ಯಾವುದೇ ಕ್ಷೇತ್ರದಲ್ಲಿ ನೋಡಿದರೂ ಜಾತೀಯತೆ, ಜಾತಿ ಸಂಘರ್ಷಗಳು, ಭ್ರಷ್ಟಾಚಾರ, ನಂಬಿಕೆ ದ್ರೋಹ, ಇವುಗಳು ಹೆಚ್ಚಾಗಿ ಕಾಣುತ್ತಿವೆ.

ಇಂತಹ ಅನೇಕ ಸಮಸ್ಯೆಗಳನ್ನು ನಿವಾರಿಸುವ ಮೂಲಕ ಸಮಾಜದಲ್ಲಿ ಉತ್ತಮ ವ್ಯವಸ್ಥೆಯನ್ನು ತರುವಂತಹ ಶಕ್ತಿ ಶಿಕ್ಷಕರುಗಳಿಗೆ ಮತ್ತು ಮಾಧ್ಯಮಗಳಿಗಿದೆ. ಮಾಧ್ಯಮಗಳು ಮತ್ತು ಶಿಕ್ಷಕರುಗಳು ಸಾಮಾಜಿಕ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಪೂರಕವಾದಂತಹ ವಿಷಯಗಳ ಬಗ್ಗೆ ಹೆಚ್ಚು ಮಹತ್ವ ಕೊಟ್ಟಾಗ ಬದಲಾವಣೆ ಸಾಧ್ಯವಾಗುತ್ತದೆ. ಕೃಷಿ ಕ್ಷೇತ್ರವು ದೇಶದ ಅತ್ಯುತ್ತಮವಾದ ಹಾಗು ದೇಶಕ್ಕೆ ಅನ್ನ ನೀಡುವ ಕ್ಷೇತ್ರವಾಗಿರುತ್ತದೆ. ಆದರೆ ಈ ಕ್ಷೇತ್ರವು ಸಹ ದಿನೇ ದಿನೇ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಇಂದಿನ ಯುವ ಸಮುದಾಯವು ಕೃಷಿ ಕಾಯಕದ ಕಡೆ ಹೆಚ್ಚಿನ ಒಲವನ್ನು ತೋರಿಸುತ್ತಿಲ್ಲ. ಕೆಲವೇ ಕೆಲವು ಯುವಕರು ಮಾತ್ರ ಕೃಷಿಯನ್ನು ನಂಬಿ ಬದುಕುತ್ತಿದ್ದಾರೆ. ಕೃಷಿ ಸ್ವತಂತ್ರ ಮತ್ತು ಪವಿತ್ರವಾದ ಉದ್ಯೋಗವಾಗಿರುತ್ತದೆ. ಆದರೆ ಇಂದಿನ ಯುವಜನಾಂಗ ಹೆಚ್ಚು ಆಸಕ್ತಿ ಹೊಂದದೇ ಇರುವುದು ಬೇಸರದ ಸಂಗತಿಯಾಗಿದ್ದು, ಭೂಮಿ, ನೀರು, ಗಾಳಿ, ಸೂರ್ಯ, ಚಂದ್ರ ಮೊದಲಾದ ಪಂಚಭೂತಗಳು ಬೇಸರ ವ್ಯಕ್ತಪಡಿಸದೇ ಯಾವ ನಿರೀಕ್ಷೆಗೂ, ಯಾರ ಅದೇಶಕ್ಕೂ ಕಾಯದೆ ಪ್ರತಿನಿತ್ಯ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಜನೋಪಕಾರಿಯಾಗಿವೆ. ಗಾಳಿ, ಬೆಳಕು, ನೀರು ಮತ್ತು ಭೂಮಿಯಿಂದ ಕೊಟ್ಟ ಬೆಳೆಯನ್ನು ಅನುಭವಿಸುತ್ತಿರುವ ನಾವು ಜನೋಪಕಾರಿಗಳಾಗಿ ಬದುಬೇಕಾಗಿರುತ್ತದೆ.

ಧರ್ಮ ಗುಡಿಗಳು, ಚರ್ಚುಗಳು, ಮಸೀದಿಗಳು, ಗುರುದ್ವಾರ ಮುಂತಾದ ಪವಿತ್ರ ಕ್ಷೇತ್ರಗಳಲ್ಲಾಗಲಿ ಸಿಗುವುದಿಲ್ಲ. ಇಲ್ಲ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ಸಿಗಬಹುದು. ಆದರೆ ಕಾಯಕದಲ್ಲಿ ಸಿಗುವ ಪ್ರತಿಫಲ ಕಾಯಕದ ಮಹತ್ವ ಸಿಗುವುದು ಶ್ರಮದಿಂದ ಮಾತ್ರ ಸಾಧ್ಯ. ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಶರಣರ ಕಾಯಕ ಮತ್ತು ನಿತ್ಯ ದಾಸೋಹದ ಆದರ್ಶ ಮೂರ್ತಿಗಳಾಗಿ ಮತ್ತು ಪೂಜ್ಯರ ಕಾಯಕದ ಫಲವಾಗಿ ಶ್ರೀ ಸಿದ್ದಗಂಗಾ ಮಠದ ಕೀರ್ತಿಯನ್ನು ಹಿಮಾಲಯದ ಎತ್ತರಕ್ಕೆ ಕೊಂಡೊಯ್ಯುವುದರ ಮೂಲಕ ಮಠದ ಇತಿಹಾಸವನ್ನು ನಿರ್ಮಿಸಿದ್ದಾರೆ. ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಬದುಕಿರುವ ತನಕ ಕಾಯಕವನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. 10000 ಮಕ್ಕಳುಗಳ ಯೋಗಕ್ಷೇಮ, ಪ್ರಸಾದ, ಶಿಕ್ಷಣ, ಆರೋಗ್ಯ ಮತ್ತು ಪೂಜೆ ಹಾಗೂ ಮಠಕ್ಕೆ ಆಗಮಿಸುವ ಭಕ್ತರ ಯೋಗಕ್ಷೇಮ ಇವು ಪೂಜ್ಯರ ದಿನನಿತ್ಯದ ಕಾಯಕವಾಗಿತ್ತು.

ಇವರದು ಒಂದು ರೀತಿಯ ಕಾಯಕವಾದರೆ, ಪೂಜ್ಯ ಶ್ರೀ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರ ಕಾಯಕ ತಮ್ಮ

**43ನೇ ಪುಟಕ್ಕೆ**



**ಆರ್.ರಂಗನಾಥ್**
ಬೆಂಗಳೂರು.
ಮೊ : 7829999060

# ತುಮಕೂರು ವಿವಿಯಲ್ಲಿ
# ಲಿಂಗಾಯತ ನೊಳಂಬ ಸಂಸ್ಕೃತಿ ಅಧ್ಯಯನ ಪೀಠ ಉದ್ಘಾಟನೆ

ತುಮಕೂರು ವಿವಿಯಲ್ಲಿ ಲಿಂಗಾಯತ ನೊಳಂಬ ಸಂಸ್ಕೃತಿ ಅಧ್ಯಯನ ಪೀಠ ಉದ್ಘಾಟನೆ ಹಾಗೂ ನೊಳಂಬ ಲಿಂಗಾಯತರ ಸಂಸ್ಕೃತಿ, ಇತಿಹಾಸ, ಸಾಹಿತ್ಯ ಮತ್ತು ಸಮುದಾಯದ ಬಗ್ಗೆ ಸಮಗ್ರ ಅಧ್ಯಯನ ನಡೆಸುವ ಸಲುವಾಗಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು 14.05.2026 ಗುರುವಾರ ಉದ್ಘಾಟಿಸಲಾಯಿತು.

ಬೆಂಗಳೂರಿನ ನೊಳಂಬ ಲಿಂಗಾಯತ ಸಂಘದ ಮೂಲಕ ಪೀಠ ಸ್ಥಾಪಿಸಲಾಗಿದ್ದು, ನೊಳಂಬ ಲಿಂಗಾಯತ ಸಮುದಾಯದ ಶಾಸಕರು, ಮಾಜಿ ಮಂತ್ರಿಗಳು, ಮಾಜಿ ಸಂಸದರು, ಸಮುದಾಯದ ಮುಖಂಡರು ರಾಜ್ಯಾದಂತ ಆಗಮಿಸಿದ್ದ ಜನಾಂಗದವರು ಇದಕ್ಕೆ ಸಾಕ್ಷಿಯಾದರು.

ಉದ್ಘಾಟನೆಯ ನಂತರ ನೊಳಂಬ ಸಂಸ್ಕೃತಿ ಸಂಪದ ವಿಚಾರ ಸಂಕಿರಣ ನಡೆದು ಆ ಮೂಲಕ ಸಮುದಾಯದ ಬಗ್ಗೆ ಚಿಂತನೆ, ಇತಿಹಾಸ, ಸಂಸ್ಕೃತಿಯ ಕುರಿತು ಇತಿಹಾಸ ತಜ್ಞರಿಂದ ಪ್ರಬಂಧ ಮಂಡನೆ ನಡೆಯಿತು.

ಅಧ್ಯಯನ ಪೀಠದ ಪ್ರೇರಣಾ ಲಾಂಛನ ಬಿಡುಗಡೆ ಮಾಡಿ ಮಾಜಿ ಸಚಿವರಾದ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಯಾರನ್ನೂ ದ್ವೇಷಿಸಲು ಸಂಘ ಮತ್ತು ಪೀಠವನ್ನು ಆರಂಭಿಸಿಲ್ಲ. ಲಿಂಗಾಯತ ಧರ್ಮ ಹಾಗೂ ಸಮಾಜಕ್ಕೆ ಶಕ್ತಿ ತುಂಬುವ ಉದ್ದೇಶ ಹೊಂದಲಾಗಿದೆ. ವಿವಿಧ ಕವಲುಗಳಾಗಿರುವ ಸಮುದಾಯ ಒಗ್ಗೂಡಿ ಬಂದು ಶಕ್ತಿಯವಾಗಿ ರೂಪುಗೊಳ್ಳಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ನೊಳಂಬರ ಇತಿಹಾಸವನ್ನು ಕೇವಲ ಕಥೆಯಾಗಿ ಕೇಳಿ, ಹೇಳುವ ಬದಲು ಇಂದಿನ ಪೀಳಿಗೆಗೆ ಅನುಗುಣವಾಗಿ ಸಂಶೋಧನೆ ನಡೆಯಬೇಕು. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವಿಚಾರ ಸಂಕಿರಣ, ಸಂಶೋಧನಾ ಕಾರ್ಯಗಳ ಮೂಲಕ ಪೀಠಕ್ಕೆ ಮೀಸಲಿಟ್ಟ ಹಣವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ಪೀಠದಿಂದ ಆರ್ಥಿಕ ನೆರವು ನೀಡಬೇಕು. ಇತಿಹಾಸವನ್ನು ಪುನರುತ್ಥಾನ ಮಾಡಬೇಕು. ಪ್ರಚಾರೋಪನ್ಯಾಸ ಮಾಲೆ ಹಮ್ಮಿಕೊಂಡು ದಾನಿಗಳ ಸಹಕಾರವನ್ನು ಪಡೆದು ಲಘು ಕೃತಿಗಳನ್ನು ಪ್ರಕಟಿಸಬೇಕು. ಇವೆಲ್ಲ ಪೀಠದ ಗುರಿಯಾಗಬೇಕೆಂದು ಸಲಹೆ ನೀಡಿದರು.

ತುಮಕೂರು ವಿಶ್ವವಿದ್ಯಾನಿಲಯವೇನೂ ಸ್ವಯಂಪ್ರೇರಿತವಾಗಿ ಪೀಠ ಆರಂಭಿಸಲಿಲ್ಲ. ನೊಳಂಬ ಇತಿಹಾಸದ ಬಗ್ಗೆ ಅಧ್ಯಯನ ನಡೆಸಿ ಸಂಶೋಧನೆ ಮಾಡಿರುವ ಇತಿಹಾಸ ತಜ್ಞರಾದ ಡಾ. ಡಿ.ವಿ. ಪರಮ ಶಿವಮೂರ್ತಿ, ಡಾ. ಡಿ.ಎನ್. ಯೋಗೀಶ್ವರಪ್ಪ ಮತ್ತು ಡಾ. ರಾಕೇಶ್ ಬಿ.ಸಿ. ಅವರಂತಹ ಶಿಕ್ಷಣತಜ್ಞರ ಕಾಳಜಿಯ ಫಲವಾಗಿ ಮತ್ತು ಸುನಿಲ್ ಪ್ರಸಾದ ಹಾಗೂ ನೊಳಂಬ ಸಂಘದವರ ಶ್ರಮಸಹಿತ ಎಲ್ಲರೂ ಒಟ್ಟುಗೂಡಿ ವಿಶ್ವವಿದ್ಯಾನಿಲಯದ ನಿಯಮಗಳಿಗೆ ಅನುಗುಣವಾಗಿ ನಿಧಿಯನ್ನು ಸ್ಥಾಪಿಸುವುದರ ಮೂಲಕ ಪೀಠವನ್ನು ಸ್ಥಾಪಿಸಲಾಗಿದೆ ಎಂದು ಮಾಧುಸ್ವಾಮಿ ಹೇಳಿದರು.

ತಿಪಟೂರಿನ ಶಾಸಕರಾದ ಕೆ. ಷಡಕ್ಷರಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ನಮ್ಮ ನೊಳಂಬ ಸಮುದಾಯದ ಇತಿಹಾಸದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳ ಮೂಲಕ ಜನರಿಗೆ ತಲುಪಿಸುವ ಕಾರ್ಯ ಜರೂರಾಗಿ ನಡೆಯಬೇಕು. ನೊಳಂಬ ಲಿಂಗಾಯತರಿಗೆ ತಮ್ಮ ಗತವೈಭವದ ಬಗ್ಗೆ ಅರಿವೇ ಇಲ್ಲದಿರುವುದು ವಿಷಾದನೀಯ ಎಂದರು.

ಸಂಶೋಧನೆಗಳು ಬೆಳಕಿಗೆ ಬರಬೇಕು. ಸಂಶೋಧನೆಯ ಫಲಿತಾಂಶಗಳನ್ನು ಮುಂದಿನ ಪೀಳಿಗೆಗೆ ಅರಿವು ಮೂಡಿಸಲು ಬಳಸಿಕೊಳ್ಳಬೇಕು. ನೊಳಂಬ ಸಮುದಾಯವು ಸುಮಾರು 30 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಬಲಿಷ್ಠ ಸಮುದಾಯವಾಗಿದೆ. ಈ ಸಮುದಾಯದಿಂದ ಹಿಂದೆ ಟಿ.ಎಂ. ಮಂಜುನಾಥ ಅವರು ಪ್ರಮುಖ ಮಂತ್ರಿಯಾಗಿದ್ದರು. ನಂತರ ಮಾಧುಸ್ವಾಮಿಯವರು ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ರಾಜಕೀಯದಲ್ಲಿ ಸೋಲು ಗೆಲುವು ಸಾಮಾನ್ಯವಾಗಿದ್ದರೂ ಅವರು ಸಮಾಜಕ್ಕೆ ಕೊಡುಗೆ ನೀಡುವುದು ಮುಖ್ಯ ಎಂದರು.

ವಿಶ್ವವಿದ್ಯಾನಿಲಯದ ಉತ್ತಮ ಪರಿಸರದಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳು ಜರುಗುತ್ತಿರುವುದನ್ನು ಕಂಡು ಸಂತೋಷವಾಗಿದೆ ಎಂದ ಅವರು, ನೊಳಂಬ ಸಂಸ್ಕೃತಿ ಅಧ್ಯಯನ ಪೀಠಕ್ಕೆ ಐದು ಲಕ್ಷ ರೂಗಳ ದೇಣಿಗೆ ನೀಡುವುದಾಗಿ ಘೋಷಿಸಿದರು.

ತುಮಕೂರು ನಗರ ಶಾಸಕರಾದ ಜಿ.ಬಿ. ಜ್ಯೋತಿಗಣೇಶ ಮಾತನಾಡಿ, ನಮ್ಮ ಇತಿಹಾಸವನ್ನು ಮುಂದಿನ ಪೀಳಿಗೆಗಾಗಿ ದಾಖಲಿಸುವ ಸಲುವಾಗಿ ಪುಸ್ತಕಗಳನ್ನು ಪ್ರಕಟಿಸುವ ಮೂಲಕವಲ್ಲದೆ ಆ ದಾಖಲೆಗಳನ್ನು ಡಿಜಿಟಲೀಕರಣ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡುವ ಅತ್ಯಗತ್ಯವಿದೆ.

–ದಯಾನಂದಸ್ವಾಮಿ .ಎಂ

ನೊಳಂಬರು ಕಲಾಪ್ರವೀಣರಾಗಿದ್ದು ಆ ಕಾಲದ ದೇವಾಲಯಗಳು, ಶಿಲ್ಪಗಳು, ಶಾಸನಗಳು ಹಾಳಾಗುವ ಹಂತ ತಲುಪಿದ್ದು ಅವುಗಳ ಸಂರಕ್ಷಣೆ ಆಗಬೇಕಾಗಿದೆ. ಅವುಗಳ ಛಾಯಾ ಚಿತ್ರಗಳನ್ನು ತೆಗೆದು ಅವುಗಳ ಪ್ರದರ್ಶನವನ್ನು ಏರ್ಪಡಿಸಬೇಕು. ಈ ಕಾರ್ಯಗಳನ್ನು ಕೈಗೆತ್ತಿಕೊಂಡು ನೊಳಂಬ ಅಧ್ಯಯನ ಪೀಠ ಕೆಲಸ ಮಾಡಬೇಕು. ಈ ಕಾರ್ಯಕ್ಕಾಗಿ ಐದು ಲಕ್ಷ ರೂಗಳನ್ನು ಪೀಠಕ್ಕೆ ದೇಣಿಗೆಯಾಗಿ ನೀಡುತ್ತೇನೆ ಎಂದು ಘೋಷಿಸಿದರು.

ದಿಕ್ಸೂಚಿ ಭಾಷಣ ಮಾಡಿದ ಹಂಪಿ ಕನ್ನಡ ವಿ.ವಿ. ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ, ಅಧ್ಯಯನ ಪೀಠಗಳು ಕಾಲಕಾಲಕ್ಕೆ ವಿಶೇಷ ಉಪನ್ಯಾಸಗಳನ್ನು ತಜ್ಞರಿಂದ ಏರ್ಪಡಿಸಿ, ನೊಳಂಬರ ಕಾಲದ ಕೃಷಿ, ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಅಧ್ಯಯನ ನಡೆಯಬೇಕು. ತುಮಕೂರು ವಿ.ವಿ.ಯಲ್ಲಿ ನೊಳಂಬ ಅಧ್ಯಯನ ಪೀಠ ಸ್ಥಾಪಿತವಾಗಿರುವುದು ಐತಿಹಾಸಿಕ ಸಂಗತಿಯಾಗಿದ್ದು, ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಸಮುದಾಯದ ಕಾಲಗರ್ಭದಲ್ಲಿ ಹುದುಗಿ ಹೋಗಿರುವ ಸತ್ಯ ಸಂಗತಿಗಳನ್ನು ಹೊರ ತೆಗೆಯುವ ಕಾರ್ಯವಾಗಬೇಕು.

ಏಳು ವರ್ಷಗಳ ಪ್ರಯತ್ನ ಇಂದು ಕಾರ್ಯರೂಪಕ್ಕೆ ಬಂದಿದೆ. ಕೇವಲ ತೋಳ್ಬಲ, ಕೃಷಿ ಕಾರ್ಯದಿಂದ ರಾಜ್ಯ ಕಟ್ಟಿದ ಯಾವುದಾದರೂ ಸಮುದಾಯವೊಂದಿದ್ದರೆ ಅದು ನೊಳಂಬ ಸಮುದಾಯ ಮಾತ್ರ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ ವಿ.ವಿ. ಕುಲಪತಿಗಳಾದ ವೆಂಕಟೇಶ್ವರ ಅವರು ಮಾತನಾಡಿ, 2022ರಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪೀಠ ಸ್ಥಾಪನೆಗೆ 5 ಕೋಟಿ ರೂಪಾಯಿ ಅನುದಾನ ಘೋಷಿಸಿದ್ದರು, ತಾಂತ್ರಿಕ ಕಾರಣಗಳಿಂದ ಹಣ ಬರಲಿಲ್ಲ. ಆದರೆ ಈಗ ಉದ್ದೇಶ ಸಾಕಾರಗೊಂಡಿದೆ ಎಂದ ಅವರು ನೊಳಂಬ ಸಮುದಾಯದ ಮುಖಂಡರು 26 ಲಕ್ಷ ರೂ ದೇಣಿಗೆ ಸಂಗ್ರಹಿಸಿ ನೀಡಿದ್ದಾರೆ. ವಿಶ್ವವಿದ್ಯಾನಿಲಯವು 15 ಲಕ್ಷ ನೀಡಿ ಒಟ್ಟು 41 ಲಕ್ಷ ನಿಧಿಯೊಂದಿಗೆ ಈ ಪೀಠ ಕಾರ್ಯಾರಂಭ ಮಾಡಿದೆ.

ಶಾಸಕರಾದ ಷಡಕ್ಷರಿ ಕೆ. ಮತ್ತು ಜಿ.ಬಿ. ಜ್ಯೋತಿಗಣೇಶ ಅವರು ತಲಾ ಐದು ಲಕ್ಷ ರೂ. ದೇಣಿಗೆ ನೀಡುತ್ತೇವೆಂದು ಭರವಸೆ ನೀಡಿರುವುದರಿಂದ ಒಟ್ಟು 51 ಲಕ್ಷ ರೂ.ಗಳಿಗೆ ನಿಧಿ ಏರಿಕೆಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ನೊಳಂಬ ಲಿಂಗಾಯತ ಸಂಘದ ಮಾಜಿ ಅಧ್ಯಕ್ಷರಾದ ಎಸ್.ಆರ್. ಪಾಟೀಲ, ಬೇಲೂರು ತಾಲ್ಲೂಕು ಮಾಜಿ ವಿಧಾನಸಭಾ ಸದಸ್ಯರಾದ ಲಿಂಗೇಶ ಉಪಸ್ಥಿತರಿದ್ದರು. ನೊಳಂಬ ಅಧ್ಯಯನ ಪೀಠದ ನಿರ್ದೇಶಕರಾದ ಡಾ. ನೀಲಕಂಠ ಎನ್.ಟಿ. ಸ್ವಾಗತಿಸಿದರು. ಪೀಠದ ಸಲಹಾ ಸಮಿತಿ ಸದಸ್ಯ ಸುನೀಲ ಪ್ರಸಾದ ಎಸ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷರಾದ ಬಿ.ಕೆ. ಚಂದ್ರಶೇಖರ ವಂದಿಸಿದರು. ರವೀಂದ್ರಕುಮಾರ ಬಿ. ನಿರೂಪಿಸಿದರು.

ನಂತರ ಇತಿಹಾಸ ಸಂಶೋಧಕ ಡಾ. ಡಿ ಎನ್ ಯೋಗೀಶ್ವರಪ್ಪ ನವರ ಅಧ್ಯಕ್ಷತೆಯಲ್ಲಿ ಜರುಗಿದ ಮೊದಲನೇ ಗೋಷ್ಠಿಯಲ್ಲಿ ಡಾ. ಪವನಕುಮಾರ್ ಮೌರ್ಯ ನೊಳಂಬರ ಪ್ರಾಚೀನ ಇತಿಹಾಸ ಕುರಿತು ಮತ್ತು ಡಾ. ಸುಂಕಂ ಗೋವರ್ಧನ ಅವರು ನೊಳಂಬರ ಕಲೆ ಮತು ವಾಸ್ತುಶಿಲ್ಪ ಕುರಿತು ಪ್ರಬಂಧ ಮಂಡಿಸಿದರು.

ಎರಡನೇ ಗೋಷ್ಠಿಯಲ್ಲಿ ಡಾ.ಸಿ. ಜಿ. ಶಿವಕುಮಾರ ನೊಳಂಬರ ಆಚರಣೆಗಳ ವೈಶಿಷ್ಟತೆ ಕುರಿತು ಮತ್ತು ಸಾಗರದ ನಟರಾಜ್ ಅವರು ಆಧುನಿಕ ಕಾಲದ ನೊಳಂಬರ ಸಾಧನೆಗಳ ಕುರಿತು ಪ್ರಬಂಧ ಮಂಡಿಸಿದರು. ಡಾ. ಎಲ್.ಪಿ. ರಾಜು ಅಧ್ಯಕ್ಷತೆ ವಹಿಸಿದ್ದರು. ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಎಂ.ಪಿ. ಪ್ರಸನ್ನಕುಮಾರ, ನರಸಿಂಹ ಮೂರ್ತಿ ಕೆ.ಜಿ, ಶಶಿಧರ ಬಿ. ಕುಬೇರಪ್ಪ ಭಾಗವಹಿಸಿದ್ದರು. ಪ್ರೊ. ಎಂ. ಕೋಟ್ರೇಶ ಸಮಾರೋಪ ನುಡಿಗಳನ್ನಾಡಿದರು. ಕುಲಸಚಿವರಾದ ಪ್ರೊ. ಮೋಹನ್ ಹೆಚ್.ಎಸ್. ಅಧ್ಯಕ್ಷತೆ ವಹಿಸಿದ್ದರು.

---

**41ನೇ ಪುಟದಿಂದ ಮುಂದುವರೆದಿದೆ.**

ಜ್ಞಾನಶಕ್ತಿಯಿಂದ ಮತ್ತು ಪ್ರವಚನಾದಿಗಳನ್ನು ನೀಡುವುದರ ಮೂಲಕ ಭಕ್ತರನ್ನು ಸಂತೋಷಗೊಳಿಸುತ್ತಿದ್ದರು. ಪೂಜ್ಯ ಶ್ರೀಗಳವರು ಮಾಡುತ್ತಿದ್ದ ಪ್ರವಚನಗಳನ್ನು ಕೇಳದ ಲಕ್ಷಾಂತರ ಭಕ್ತರು ತಮ್ಮ ಮನಃಪರಿವರ್ತನೆ ಮಾಡಿಕೊಂಡಿದ್ದಾರೆ. ಪೂಜ್ಯ ಶ್ರೀಗಳ ಪ್ರವಚನ ತುಂಬಾ ಮೌಲ್ಯಾಧಾರಿತವಾಗಿದ್ದು ಸಾಮಾಜಿಕ ಬದಲಾವಣೆಗೆ ಪೂರಕವಾಗಿದ್ದವು. ಈ ಇಬ್ಬರೂ ಪೂಜ್ಯರುಗಳ ಜೀವನವೇ ಸಮಾಜಕ್ಕೆ ಒಂದು ಆದರ್ಶ ವಾಗಿದ್ದು ಇತರರಿಗೆ ಮಾದರಿಯಾಗಿತ್ತು. ಪೂಜ್ಯರುಗಳಿದ್ದ ಸರಳತೆ, ಮೃದುವಾದ ಮಾತು, ನಿಸ್ವಾರ್ಥ ಸೇವೆ ತುಂಬಾ ಅತ್ಯುತ್ತಮವಾಗಿದ್ದವು. ಪೂಜ್ಯರುಗಳಲ್ಲಿ ಆಡಂಬರವಾಗಲಿ, ಅಹಂ ಆಗಲಿ ಕಾಣಲು ಸಾಧ್ಯವಿರಲಿಲ್ಲ. ಅಧಿಕಾರ, ಹಣಕ್ಕಾಗಲಿ ಎಂದೂ ಯಾರನ್ನು ಬೇಡಲಿಲ್ಲ. ನಿಜಕ್ಕೂ ಒಬ್ಬ ನಿಜವಾದ ಸಂತ ಹೇಗಿರಬೇಕೆಂಬುದನ್ನು ಈ ಇಬ್ಬರು ಪೂಜ್ಯರುಗಳನ್ನು ಇತರರು ಅನುಸರಿಸಬೇಕು. ಪೂಜ್ಯ ಶ್ರೀಗಳವರು ಸಮಾಜದ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು.

# ಉದ್ಯಮಿಯಾಗು ಉದ್ಯೋಗ ಕೊಡು : ನಾವೀನ್ಯತೆಯ ಉದ್ಯಮಶೀಲತಾ ಕಾರ್ಯಾಗಾರ – ಡಾ. ರಾಕೇಶ್ ಬಿ.ಸಿ

ನೋಳಂಬ ಉದ್ಯಮಿದಾರರ ಸಹಕಾರ ಸಂಘ, ಬೆಂಗಳೂರು ಹಾಗೂ ನೊಳಂಬ ಲಿಂಗಾಯತ ಸಮಾಜ, ದಾವಣಗೆರೆ ಮತ್ತು ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕೇಂದ್ರ, ರಾಜ್ಯ ಸರ್ಕಾರದ ಸವಲತ್ತುಗಳೊಂದಿಗೆ ಕೈಗಾರಿಕೆ, ಸೇವೆ ಮತ್ತು ವ್ಯಾಪಾರ ಪ್ರಾರಂಭಿಸಲು ದಿ.03.05.2026ರ ಭಾನುವಾರದಂದು ಬೆಳಿಗ್ಗೆ 09:30 ಗಂಟೆಗೆ ಒಂದು ದಿನದ ನಾವಿನ್ಯತೆಯ ಉದ್ಯಮಶೀಲತಾ ಕಾರ್ಯಕ್ರಮವನ್ನು ವಾಸವಿ ಕಲ್ಯಾಣ ಮಂಟಪ, ಮಲೇಬೆನ್ನೂರು, ಹರಿಹರ ತಾಲೂಕು, ದಾವಣಗೆರೆ ಜಿಲೆಯಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಪಿ.ಜಯರಾಜ ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಹಾಗೂ ದಾವಣಗೆರೆ ನೊಳಂಬ ಲಿಂಗಾಯತ ಸಮಾಜದ ಮುಖಂಡರಾದ ಜಿ.ಎಮ್.ರುದ್ರಗೌಡರು ಆಂಜನೇಯ ಸಹಕಾರಿ ಸಂಘ ಕುಕ್ಕವಾಡದ ಅಧ್ಯಕ್ಷರು, ವಕೀಲರಾದ ಕೆ.ಜಿ. ಶಾಂತರಾಜ, ಪ್ರಾಧ್ಯಪಕರಾದ ಡಾ. ಅಶೋಕಕುಮಾರ್ ವಿ ಪಾಳೇದ, ಪ್ರಾಧ್ಯಪಕರಾದ ಡಾ. ರಾಕೇಶ್ ಬಿ.ಸಿ. ನಿವೃತ್ತ ಇಂಜಿನಿಯರ್ ಭುವನೇಶ್ವರ ಎಮ್.ಸಿ, ವೈದ್ಯರಾದ ಡಾ. ದಿನೇಶ್ ಕುಮಾರ್ ಎನ್,ಅರ್, ಮೌನೇಶ್ವರಪ್ಪ, ಮಲೇಬೆನ್ನೂರು ಪುರಸಭೆ ಸದಸ್ಯರಾದ ವೀರಯ್ಯ ಬಿ, ಮಲೇಬೆನ್ನೂರು ಪುರಸಭೆ ಸದಸ್ಯರಾದ ಮಿನಾಕ್ಷಮ್ಮ ಜಿಗಳೇರ ಹಾಲೇಶಪ್ಪ, ಬ್ಯಾಂಕ್ ಮ್ಯಾನೇಜರ್ ಹನಮಗೌಡ ಐ, ವಕೀಲರಾದ ತಿಮ್ಮನಗೌಡ ಎನ್,ಪಿ, ಹಳ್ಳಿಹಾಳ್ ವೀರನಗೌಡ, ಪರಮೇಶ್ವರಪ್ಪ ಜಿಗಳಿರವರುಗಳು ಹಾಗೂ ಸಮಾಜದ ಗಣ್ಯರಿಂದ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಡಾ. ನಿಧಿಶ್ರೀ ರವರು ಉದ್ಯಮವನ್ನು ಸ್ಥಾಪಿಸಲು ಉದ್ದಿಮೆದಾರರ ಮಾನಸಿಕ ಹಾಗೂ ದೈಹಿಕ ಸಿದ್ಧತೆ ಕುರಿತು ವಿವರವಾಗಿ ತಿಳಿಸಿದರು. ನಂತರ ಉದ್ಯಮಶೀಲತೆ ಹೇಗೆ ಪ್ರಾರಂಭ ಮಾಡಬೇಕು. ಉದ್ಯಮಶೀಲರಾಗಲು ಇರುವ ಮುಖ್ಯವಾದ ಗುಣಲಕ್ಷಣಗಳ ಬಗ್ಗೆ ವಿವರವಾಗಿ ಪಿ.ಜಯರಾಜರವರು ತಿಳಿಸಿದರು. ನಂತರ, ಕಾರ್ಯಕ್ರಮದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಬಳಸಿಕೊಂಡು ಉದ್ಯಮವನ್ನು ಪ್ರಾರಂಭಿಸುವ ಬಗ್ಗೆ ತಾರಕೇಶ್ವರ ಉಪನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ರವರು ಸಂಕ್ಷಿಪ್ತವಾಗಿ ತಿಳಿಸಿದರು. ಮುಂದುವರೆದಂತೆ, ಬೆಂಗಳೂರಿನ ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್‌ನ ಹಿರಿಯ ವಿಜ್ಞಾನಿಗಳಾದ ಡಾ.ಧನಂಜಯ ರವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ಉತ್ಪನ್ನಗಳನ್ನು ಪ್ರಾರಂಭಿಸುವ ಬಗ್ಗೆ ಸವಿವರವಾಗಿ ತಿಳಿಸಿದರು. ನಂತರ,

ಸುಧಾಕರ, ಮಾಲಿಕರು ಸುರಕ್ಷಾ ಕಾರ್ ಕೇರ್ ಬೆಂಗಳೂರುರವರು ನಡೆದು ಬಂದ ದಾರಿ, ಹಾಗೂ ಅವರ ಯಶೋಗಾಥೆಯ ಬಗ್ಗೆ ಭಾವಿ ಉದ್ಯಮದಾರರಿಗೆ ತಿಳಿಸಿ. ಉತ್ತೇಜನವನ್ನ ನೀಡಿದರು. ಹಾಗೆ ಹಾವೇರಿ ಜಿಲ್ಲೆಯವರಾದ ಮಾದಾಪುರದ ಕಾಗಿನೆಲೆ ಪರಮೇಶ್ವರಪ್ಪರವರು ಪ್ರಸ್ತುತ ಹೈದಾರಾಬಾದಿನಲ್ಲಿ ಕೈಗಾರಿಕೋದ್ಯಮಿಯಾಗಿ ಅವರ 40 ವರ್ಷಗಳ ಅನುಭವಗಳ ಬಗ್ಗೆ ಉದ್ದಿಮೆದಾರರಿಗೆ ತಿಳಿಸಿ ಪ್ರಾರಂಭದಿಂದ ಕೊನೆಯವರೆಗೆ ಆಗುವ ಕಷ್ಟಸುಖಗಳನ್ನು ತಿಳಿಸಿದರು. ಅರವಿಂದ ಭಟ್, ವಿಟಿಪಿಸಿ, ಗೋಕಾಕ್, ವಿರುಪಾಕ್ಷಪ್ಪ, ಕೆಎಎಸ್. ಕೃಷಿ ಚಿಂತಕ ಭೈರೇಶ್ ವಿ.ಸಿ, ವೈದ್ಯರಾದ ಡಾ. ವಿರುಪಾಕ್ಷಪ್ಪ ಈ, ಗಿರೀಶ್ ಚಂದ್ರಪ್ಪ, ರೇಣುಕರಾಧ್ಯ ಎಂ.ಎನ್. ಕುರಿತು ಮುಂತಾದವರು ಉದ್ಯಮ ಪ್ರಾರಂಭಿಸುವ ಬಗ್ಗೆ ಆಸಕ್ತರು ಸರ್ಕಾರದಿಂದ ಪಡೆಯುವ ಸವಲತ್ತುಗಳ ಬಗ್ಗೆ ತಿಳಿಸಿದರು.

ಕೊನೆಯದಾಗಿ ನೊಳಂಬ ಲಿಂಗಾಯತ ಸಮಾಜದ ಹಿರಿಯಾರದ ಜಿ.ಎಂ. ರುದ್ರಗೌಡರು ನೆರೆದಿದ್ದ ಎಲ್ಲಾ ಸಮಾಜ ಬಾಂಧವರಿಗೆ ಮತ್ತು ಫಲಾನುಭವಿಗಳಿಗೆ ಹಿತವಚನವನ್ನು ನೀಡಿ, ಒಳ್ಳೆಯ ಉದ್ಯಮಿದಾರರಾಗಲು ಶುಭ ಹಾರೈಸಿದರು. ಕಾರ್ಯಗಾರದಲ್ಲಿ ನೆರೆದಿರುವಂತಹ ಎಲ್ಲಾ ಹಿರಿಯರು, ಸಮಾಜದ ಮುಖಂಡರು, ಭಾವೀ ಉದ್ದಿಮೆದಾರರು ಈ ಒಂದು ದಿನದ ಕಾರ್ಯಕ್ರಮದಲ್ಲಿ ದೊರೆತಂತಹ ಅನುಕೂಲಗಳ ಬಗ್ಗೆ ಮುಕ್ತ ಚರ್ಚೆಯೊಂದಿಗೆ ಕಾರ್ಯಾಗಾರವನ್ನು ಮುಕ್ತಾಯಗೊಳಿಸಿ, ನಂತರ ಉಪಹಾರ ಸೇವಿಸಿ ಆಸಕ್ತ ಭಾಂದವರಿಗೆ ವೈಯುಕ್ತಿಕವಾಗಿ ವಿಚಾರ ವಿನಿಮಯ ಮಾಡಲಾಯಿತು. ನೂರಾಐವತ್ತಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗು ಆಸಕ್ತರು ಭಾಗವಹಿಸಿ, ಇದರಲ್ಲಿ 40ಕ್ಕು ಹೆಚ್ಚು ಜನ ಅಂದೇ ಕೈಗಾರಿಕೆ ಸೇವೆ, ಕೃಷಿ ಆಧಾರಿತ ಉದ್ದಿಮೆ ಮತ್ತು ವ್ಯವಹಾರ–ವ್ಯಾಪಾರ ಸ್ಥಾಪಿಸಲು, ವಿವಿಧ ಇಲಾಖೆಗಳ ಆನ್‌ಲೈನ್ ಅರ್ಜಿಗಳ ಮುಖಾಂತರ ನೋಂದಾಯಿಸಲಾಯಿತು.

# ನೊಳಂಬ ಲಿಂಗಾಯತ ಸಂಘ ಬೆಂಗಳೂರು ಹಾಗೂ ಉಪಸಮಿತಿ ಹಾವೇರಿ.

**"ಅಂಕಗಳ ಜೊತೆ ಚಾರಿತ್ರ್ಯ ಮತ್ತು ಕೌಶಲ್ಯತೆ ಅತೀ ಅವಶ್ಯಕ" – ಡಾ॥ ಮಹದೇವಪ್ಪ ಎಂ.ದಡ್ಡಿಕೊಪ್ಪ,** ದಾವಣಗೆರೆ, ಪ್ರಾಧ್ಯಾಪಕರು ಇವರ ಆಶಯದಂತೆ ಹಾವೇರಿ ನಗರದ ಶ್ರೀ ಗುರು ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ದಿನಾಂಕ:07–06–2026ರಂದು ಹಾವೇರಿ, ದಾವಣಗೆರೆ, ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ 2026ರ ಮಾರ್ಚ–ಏಪ್ರೀಲ್ ವಾರ್ಷಿಕ ಪರೀಕ್ಷೆಯಲ್ಲಿ SSLC & PUC ಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಪಡೆದ ನೊಳಂಬ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್.ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ॥ ಮಹದೇವಪ್ಪ ಎಮ್ ದಡ್ಡಿಕೊಪ್ಪ ಇವರು ಉಪನ್ಯಾಸ ನೀಡುತ್ತಾ ಮಾತನಾಡಿದರು.

ಇಂದು ಜಗತ್ತು ಕೇವಲ ಜ್ಞಾನಕ್ಕೆ ಮಾತ್ರ ಸೀಮಿತವಾಗಿಲ್ಲ ಅದನ್ನು ಸಮಯಕ್ಕೆ ತಕ್ಕಂತೆ ಬಳಸುವ ಕೌಶಲ್ಯತೆ ಇರಬೇಕು. ಸಮಯ ಪಾಲನೆಗೆ ಹೆಚ್ಚಿನ ಮಹತ್ವ ನೀಡಬೇಕು. ಸ್ಪಡಿ ಪ್ಲಾನ್ ಜೊತೆಗೆ ಕಮ್ಯುನಿಕೇಶನ್ ಸ್ಕಿಲ್ ಬೆಳೆಸಿಕೊಳ್ಳಲು ಹೇಳಿದರು. ಇಂದು ಫಿಂಗರ್ ಪ್ರಿಂಟ್ನಲ್ಲಿ ಜ್ಞಾನವಿದೆ. ಸಮರ್ಥವಾಗಿ ಬಳಸಿಕೊಳ್ಳಲು ಹೇಳಿದರು.


ಅಂಕಗಳಿಸುವುದೇ ಜೀವನದ ಗುರಿಯಾಗಿದೆ ಅದರೊಟ್ಟಿಗೆ ನಿಮ್ಮ ವ್ಯಕ್ತಿತ್ವ ಹಾಗೂ ಕಾರ್ಯ ಕುಶಲತೆ ಅದಕ್ಕಿಂತ ಮಹತ್ವದ್ದು ಎಂದು ತಿಳಿಸಿದ ಸುಪ್ರೀಮ್ ಕೋರ್ಟಿನ ಖ್ಯಾತ ವಕೀಲ ಹಾಗೂ ಸಮಾಜ ಸೇವಕರಾದ ಶ್ರೀ ಸಂದೀಪ ಪಾಟೀಲ್ ಮಕ್ಕಳು ತಾವು ಬೆಳೆದು ಸಾಧಕರಾದ ಮೇಲೆ ಜೊತೆಗಿರುವ 90% ಇವರನ್ನು ಮರೆಯಕೂಡದು ಎಂದು ಸೂಚ್ಯವಾಗಿ ತಿಳಿಹೇಳಿದರು.

ಕಾರ್ಯಕ್ರಮದ ಧಿವ್ಯ ಸಾನಿಧ್ಯವನ್ನು ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ 1108 ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವೃಷಭಪುರಿ ಮಹಾ ಸಂಸ್ಥಾನಮಠ ನಂದಿಗುಡಿ–ಅತ್ತಿಕಟ್ಟಿ ಇವರು ವಹಿಸಿಕೊಂಡು ಆಶೀರ್ವಚನ ನೀಡುತ್ತಾ ಮಕ್ಕಳಲ್ಲಿ ಅವಿತಿರುವ ಪ್ರತಿಭೆಯನ್ನು ಹೊರತರಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದ್ದು ಸಂಘದ ಕಾರ್ಯಕ್ರಮಗಳು ಉತ್ತಮ ರೀತಿಯಿಂದ ಸಮಾಜದ ಶ್ರಯೋಭಿವೃದ್ಧಿಗೆ ಅನುಕೂಲಕರವಾಗಿದೆ. ಮಕ್ಕಳು ದೊರೆತ ಅವಕಾಶವನ್ನು ಬಳಸಿಕೊಂಡು ಉನ್ನತ ಸ್ಥಾನ ತಲುಪಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ದೇವರಾಜ ಎಸ್.ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹಾನಗಲ್. ಇವರು ನೆರವೇರಿಸಿ ಮಕ್ಕಳಿಗೆ ಅತ್ಯುತ್ತಮ ಭವಿಷ್ಯವಿದೆ ಸತತ ಪರಿಶ್ರಮ ಹಾಗೂ ಶ್ರದ್ಧೆಯ ಅವಶ್ಯಕತೆ ಇದೆ. ಅದಕ್ಕಾಗಿ ಡಿಟರ್ಮಿನೇಶನ್ ಹಾಗೂ 21ನೇ ಶತಮಾನದ ಕೌಶಲಗಳನ್ನು ಕರಗತಗೊಳಿಸಿಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಸಂಘಟಿಸಿದ ನೊಳಂಬ ಸಂಘವನ್ನು ಅಭಿನಂದಿಸಿದ ಅವರು ನನ್ನಂತ ಕಿರಿಯನಿಂದ ಉದ್ಘಾಟನೆ ಮಾಡಿಸಿರುವುದು ಯುವಪೀಳಿಗೆಗೆ ಹೆಮ್ಮೆಯನ್ನು ತರುತ್ತದೆ. ಎಲ್ಲರೂ ಸೇರಿ ಸಮಾಜದ ಅಭಿವೃದ್ಧಿಗೆ ಶ್ರಮಿಸೋಣವೆಂದರು.

ಪ್ರಾಸ್ತಾವಿಕ ನುಡಿ ನುಡಿದ ಶ್ರೀ ಶಶಿಧರ ಕೆ.ಬಿ. ಗೌರವ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನೊಳಂಬ ಲಿಂಗಾಯತ ಸಂಘ ಬೆಂಗಳೂರು ಇವರು ರಾಜ್ಯದ 9 ಜಿಲ್ಲೆಗಳಲ್ಲಿ ನಮ್ಮ ಸಮಾಜದ ವಿದ್ಯಾರ್ಥಿ ನಿಲಯಗಳು ಹಾಗೂ ಸಮುದಾಯ ಭವನಗಳಿದ್ದು, ಸಮಾಜ ಸಂಘಟನೆಯನ್ನು ಕಂಬಿ ಸಿದ್ಧರಾಮಣ್ಣನಿಂದ ಆರಂಭಿಸಿ ಇಂದು ಹೆಮ್ಮರವಾಗಿ ಬೆಳೆದಿರುವುದು ಹೆಮ್ಮೆಯ ವಿಚಾರ ಎಂದರು ಅಲ್ಲದೇ ಹಾವೇರಿ ಉಪ ಸಮಿತಿಯು ಉತ್ತರ ಕರ್ನಾಟಕ ಭಾಗದಲ್ಲಿ ನಮ್ಮ ಸಮಾಜದ ಅಸ್ಮಿತೆಯನ್ನು ಹೆಚ್ಚಿರುವುದಕ್ಕೆ ನಮ್ಮ ಸಮುದಾಯ ಭವನದಲ್ಲಿ ನಮ್ಮ ಕಾರ್ಯಕ್ರಮ ನಡೆದಿರುವುದೇ ಸಾಕ್ಷಿ ಎಂದರು. ಹಾಗೂ ಸಮಾಜದ ಮಕ್ಕಳು ನಮ್ಮ ವಿದ್ಯಾರ್ಥಿ ನಿಲಯಗಳನ್ನು ಬಳಸಿಕೊಂಡು ಬೆಳೆಯಬೇಕು ಹಾಗೂ ಸಮಾಜಕ್ಕೆ ಕೊಡುಗೆ ನೀಡಬೇಕೆಂದು ತಿಳಿಸಿದರು.

ಡಾ.ರಾಕೇಶ ಬಿ.ಸಿ ಮುಖ್ಯ ಸಂಪಾದಕರು ನೊಳಂಬವಾಣಿ ಇವರು ಮಾತನಾಡುತ್ತಾ ನೊಳಂಬ



**ಸಿದ್ಧರಾಮಪ್ಪ ಅಜಗೊಂಡ್ರ**
ಚಿಕ್ಕಬಾಸೂರು, ಬ್ಯಾಡಗಿ ತಾ.
ಹಾವೇರಿ ಜಿಲ್ಲೆ. ಮೊ : 9972977407

ವಾಣಿ ಪತ್ರಿಕೆಯು 3 ತಿಂಗಳಿಗೊಮ್ಮೆ ಬರುವ ತ್ರೈಮಾಸಿಕ ಪತ್ರಿಕೆಯಾಗಿದ್ದು ಉತ್ತಮ ಲೇಖನದೊಂದಿಗೆ ಜನಮಾನಸದಲ್ಲಿ ಸಮಾಜದ ಮುಖವಾಣಿಯಾಗಿದೆ. ಇಂತಹ ಪತ್ರಿಕೆಗೆ ತಾವೆಲ್ಲರೂ ಛಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಲು ಕೋರಿದರು ಹಾಗೂ ಮಕ್ಕಳಿಗೆ ಕಿವಿಮಾತು ಹೇಳಿದರು.

ರಾಜ್ಯ ನೊಳಂಬ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಹಾಗೂ ಹಿರಿಯರಾದ ಎಸ್.ಆರ್.ಪಾಟೀಲ್ ಮಾತನಾಡಿ ಸಂಘದ ಬೆಳವಣಿಗೆಗೆ ಸಹಕರಿಸಿದ ಮಹನೀಯರನ್ನು ನೆನೆದರು ಹಾಗೂ ಮಕ್ಕಳಿಗೆ ಶುಭ ಹಾರೈಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿಯಾದ ಹಾಗೂ ನೊಳಂಬ ಸಂಘದ ರಾಜ್ಯ ಉಪಾಧ್ಯಕ್ಷರಾದ ನಟರಾಜ ಸಾಗರನಹಳ್ಳಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಸರ್ವರನ್ನು ಅಭಿನಂದಿಸಿದರು. ಹಾಗೂ ಮಕ್ಕಳಿಗೆ ಎ.ಐ ತಂತ್ರಜ್ಞಾನದ ಈ ಯುಗದಲ್ಲಿ ನೀವೂ ಸಹ ವೇಗವಾಗಿ ಬೆಳವಣಿಗೆ ಹಾಗೂ ವಿಕಾಸ ಹೊಂದಿ ಎಂದು ಸಲಹೆ ನೀಡಿದರು. ಕೇವಲ ನೌಕರಿಗಾಗಿ ಓದದೆ ಸಮಾಜಕ್ಕೆ ದೇಶಕ್ಕೆ ಕೊಡುಗೆ ನೀಡುತ್ತೇವೆ ಎಂಬ ಮಹದಾಶೆಯಿಂದ ಮಹೋನ್ನತ ಗುರಿಗಳೊಂದಿಗೆ ಓದಿ ಆಗ ನಿಮ್ಮಿಂದ ಇನ್ನಷ್ಟು ಕೊಡುಗೆ ಸಮಾಜಕ್ಕೆ ಬರಲು ಸಾಧ್ಯವೆಂದು ಹೇಳಿದರು.

ಸಂಘದ ಹಿರಿಯ ಉಪಾಧ್ಯಕ್ಷರಾದ ರಾಮಲಿಂಗಪ್ಪನವರು ಮಾತನಾಡುತ್ತಾ ಕಂಬಿ ಸಿದ್ದರಾಮಣ್ಣನವರಿಂದ ಪ್ರಾರಂಭಿಸಿ ಸಂಘಕ್ಕೆ ಕೊಡುಗೆ ನೀಡಿದ ಮಹನೀಯರ ಉದಾರತೆಯನ್ನು ಸ್ಮರಿಸಿದರು, ಶ್ರೀ ಗುರು ಸಿದ್ಧರಾಮೇಶ್ವರರು ನಮ್ಮ ಸಮಾಜದ ಅಸ್ಮಿತೆ ಅವರು ಪ್ರಾರಂಭಿಸಿದ ಕರ್ಮಯೋಗ-ಕಾಯಕ-ಶಿವಯೋಗ ಪರಂಪರೆಯಲ್ಲಿ ಮುಂದುವರೆಯೋಣ ಎಂದು ಮಾರ್ಮಿಕವಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಕೆ.ಚಂದ್ರಶೇಖರ. ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ನೊಳಂಬ ಲಿಂಗಾಯತ ಸಂಘ ಬೆಂಗಳೂರು ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕಳೆದ 2024ರಲ್ಲಿ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರಿನಲ್ಲಿ ಜರುಗಿದ ಶ್ರೀ ಗುರು ಸಿದ್ಧರಾಮೇಶ್ವರರ 851ನೇ ಜಯಂತಿ ಅತ್ಯದ್ಭುತವಾಗಿ ಜರುಗಿದ್ದು, ಜಯಂತಿಯ ಸವಿನೆನಪಿಗಾಗಿ ಅಲ್ಲಿ ನೂತನ ಶಿಲಾ ದೇವಸ್ಥಾನವನ್ನು ಅಂದಾಜು 5 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿದ್ದು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ದೇಣಿಗೆ ಸಲ್ಲಿಸುವ ಮೂಲಕ ಸ್ವಾಮಿಯ ಕೃಪೆಗೆ ಪಾತ್ರರಾಗುವಂತೆ ವಿನಂತಿಸಿದರು. ಅತ್ಯುತ್ತಮವಾಗಿ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಹಾವೇರಿ ಉಪಸಮಿತಿಯವರನ್ನು ಅಭಿನಂದಿಸಿದರು, ನೆರದ ಪ್ರತಿಭಾವಂತ ಮಕ್ಕಳನ್ನು ಅಭಿನಂದಿಸಿ ಅವರ ಭವಿಷ್ಯ ಉಜ್ವಲವಾಗಲಿ ನಿಮ್ಮಿಂದ ಸಮಾಜಕ್ಕೆ ದೇಶಕ್ಕೆ ಅಮೋಘ ಕೊಡುಗೆ ದೊರಕುವಂತಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ 61 ಹಾಗೂ ಪಿ.ಯು.ಸಿ. 58 ಒಟ್ಟು 119 ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪುರಸ್ಕರಿಸಲಾಯಿತು. ಹಾಗೂ 2026ರಲ್ಲಿ ಹೊಳಲ್ಕೆರೆಯಲ್ಲಿ ಅದ್ದೂರಿಯಾಗಿ ನಡೆಸಿಕೊಟ್ಟ 853ನೇ ಶ್ರೀ ಗುರು ಸಿದ್ಧರಾಮೇಶ್ವರರ 853ನೇ ಜಯಂತಿಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶಶಿಧರ ಹಾಗೂ ಖಜಾಂಚಿ ಕುಬೇರಪ್ಪ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನೊಳಂಬ ಲಿಂಗಾಯತ ಸಂಘದ ಜಂಟೀ ಕಾರ್ಯದರ್ಶಿ ಸಿದ್ಧರಾಮೇಗೌಡ, ಖಜಾಂಚಿ ಕುಬೇರಪ್ಪ, ಧನಂಜಯ, ಹಾವೇರಿ ಉಪ ಸಮಿತಿಯ ಅಧ್ಯಕ್ಷ ಎಸ್ ಕೆ ಮೆಣಸಿನಹಾಳ, ಕಾರ್ಯದರ್ಶಿ ಮಂಜಣ್ಣ ಬೇವಿನಹಳ್ಳಿ, ಜಗದೀಶ ಕಣಗಲಬಾವಿ, ಸಿ.ಬಿ. ಈಶ್ವರಪ್ಪ, ಆರ್.ಎಸ್.ಪಾಟೀಲ್, ವಿರೇಶ ಗಡಾದ, ಎಮ್.ಪಿ. ಮೂಡೂರ, ಮಂಜಪ್ಪ ಗಿಡ್ಡಪ್ಪಳವರ, ವೀರಣ್ಣ ಕಡ್ಲಿ, ಆನಂದಯ್ಯ ದೇವರಮನಿ, ಸುರೇಶಗೌಡ ಪಾಟೀಲ್, ನಿಂಗಪ್ಪ ಕೊಪ್ಪದ, ಸೋಮಣ್ಣ ಕಿರವಾಡಿ, ಬಿ.ಎಸ್ ಭರಮಗೌಡ್ರ, ಜಯಣ್ಣ ಮಲ್ಲಿಗಾರ, ಶಂಕರಗೌಡ ಪಾಟೀಲ, ಇಂದುಧರ ಎನ್.ಆರ್. ತಿಮ್ಮನಗೌಡ, ಶಂಕ್ರಪ್ಪ ಹಾದಿಮನಿ, ಎಸ್.ಬಿ.ಮೂಲೇರ, ನಾಗನಗೌಡ ಸಣ್ಣಗೌಡ್ರ, ಅಜ್ಜಪ್ಪ ಯಮನೂರ, ಕೆ.ಪಿ.ಬೆಣಗೇರಿ, ಸಿ.ಎನ್.ಹುರುಳಿ, ಆರ್.ಎನ್.ಹುರುಳಿ, ಬಿ.ವಿ ಕುಲುಮಿ, ಪ್ರಭುಗೌಡ ಪಾಟೀಲ್, ವಿ.ಎಮ್. ನಾಡಗೌಡ್ರ, ಪ್ರಭು ಹಿತ್ತಲಮನಿ , ಚಾಮರಾಜ ಕುಲುಮಿ, ಪ್ರವೀಣ ಬಿಸ್ಟಾಂಡೇರ, ಸಿದ್ಧರಾಮಗೌಡ ಚನ್ನಗೌಡ್ರ, ಎನ್. ಹೆಚ್. ಸಣ್ಣಗೌಡ್ರ, ಮಹಾಂತೇಶ ಮರಿಗೂಳಪ್ಪನವರ ಇನ್ನೂ ಮುಂತಾದವರು ಪಾಲ್ಗೊಂಡಿದ್ದರು.

ಕು. ಕೇಶವ ಮರಿಗೂಳಪ್ಪನವರ ಪ್ರಾರ್ಥಿಸಿದರು ಪ್ರಭುಲಿಂಗ ದೊಡ್ಡಮನಿ ಸ್ವಾಗತಿಸಿದರು, ಸಿದ್ಧರಾಮೇಶ ಅಜಗೊಂಡ್ರ ಹಾಗೂ ಚನ್ನಬಸವ ದಳವಾಯಿ ಪ್ರತಿಭಾ ಪುರಸ್ಕಾರ ನೆರವೇರಿಸಿದರು, ಶ್ರೀಮತಿ ಭಾಗ್ಯಾ ಎಮ್.ಕೆ ಶಿಕ್ಷಕರು, ಹಾಗೂ ಪರಮೇಶ ಉಪ್ಪುಣಸಿ, ಕಾರ್ಯಕ್ರಮ ನಿರೂಪಿಸಿದರು ಸುಜೇಂದ್ರ ಶ್ಯಾಡಗುಪ್ಪಿ ಹಾಗೂ ಪರಮೇಶ ತಿಪಗೊಂಡ್ರ ವೇದಿಕೆ ನಿರ್ವಾಹಣೆ ಮಾಡಿದರು.

# ಯುದ್ಧದ ಆಟ

ಯುದ್ಧದ ಆಟ ಒಂದೇ ಒಂದು ಒಳ್ಳೆಯದಿದೆ. ಅದೇ ಅಜ್ಞಾನ ಜಗತ್ತಿಗೆಲ್ಲ ನೀತಿ ಪಾಠ ಬೋಧಿಸುವ ತನಗೆ ತಾನೆ ದೊಡ್ಡವನು ಎಂದುಕೊಂಡಿರುವ ದುರ್ನೀತಿಗಳನ್ನು ಅನುಸರಿಸುವ ರಾಷ್ಟ್ರ ಒಂದು ಈ ಜಗತ್ತಿನಲ್ಲಿದ್ದರೆ, ಅದು ಅಮೆರಿಕ ಸದಾ ಮಾನವ ಹಕ್ಕುಗಳ ಬಗ್ಗೆ ಮಾತನಾಡುತ್ತಿರುತ್ತದೆ.


ಅಕ್ರಮಣವನ್ನು ದೇಶಗಳ ನಡುವಿನ ಯುದ್ಧವೆಂದು ಮಾತ್ರವಲ್ಲದೆ ಅದನ್ನು ಯುದ್ಧ ಅಪರಾಧವೆಂದು ನೋಡಬೇಕು. ಇತಿಹಾಸದಿಂದಲೂ ಅಮೆರಿಕಾದ ಯುದ್ಧಾಟವನ್ನು ನೋಡಿಕೊಂಡು ಬಂದರೆ 60–70ರ ದಶಕದಲ್ಲಿ ನಡೆದ ವಿಯೆಟ್ನಾಂ ಯುದ್ಧ ಅಮೆರಿಕ ಸೇನೆ ಬಳಸಿದ ಏಜೆಂಟ್ ಆರೆಂಜ್ ಎಂಬ ರಾಸಾಯನಿಕವು ಸುಮಾರು 30 ಲಕ್ಷ ಹೆಚ್ಚು ಅರಣ್ಯವನ್ನು ನಾಶ ಮಾಡಿತು.

ಈ ವಿಷಕಾರಿ ಇಂದ ಸಾವಿರಾರು ಜನರು ಕ್ಯಾನ್ಸರ್ ಮತ್ತು ಅಂಗವಿಕಲದಿಂದ ಬಳಲಿದರು ಅನೇಕ ಪ್ರಾಣಿ ಮತ್ತು ಪಕ್ಷಿ ಪ್ರಭೇದಗಳು ಸಂಪೂರ್ಣವಾಗಿ ನಾಶವಾದವು. ಅದೇ ರೀತಿ ಜಪಾನ್‌ನ ಹಿರೋಶೀಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬ್ ದಾಳಿ ಅದರ ವಿಕಿರಣದಿಂದ ಅನೇಕ ಜನರು ತಮ್ಮ ಜೀವವನ್ನೇ ಕಳೆದುಕೊಂಡರು ಎಂದಿಗೂ ಕೂಡ ಅಲ್ಲಿ ಜೀವಿಸುವ ಮಕ್ಕಳು ಅಂಗವಿಕಲತೆಯಿಂದ ಹುಟ್ಟುತ್ತಾರೆ.

2022 ರಿಂದ ನಡೆಯುತ್ತಿರುವ ರಷ್ಯಾ ಮತ್ತು ಉಕ್ರೇನ್ ಯುದ್ಧದಿಂದ ಹಲವಾರು ಸಂರಕ್ಷಿತ ಅರಣ್ಯ ಪ್ರದೇಶಗಳು ಹಾನಿಯಾಗಿದೆ ಯುದ್ಧ ನಿಲ್ಲಿಸುವ ಮಾತನಾಡುವ ಅಮೆರಿಕ ಶಸ್ತ್ರಾಸ್ತ್ರಗಳ ಸಹಾಯವನ್ನು ಉಕ್ರೇನ್‌ಗೆ ಮಾಡಿತು ಇಂದಿಗೂ ಇದ್ದ ನಡೆಯುತ್ತದೆ 20ರಿಂದ 30ರಷ್ಟು ಸಂರಕ್ಷಿತ ಪ್ರದೇಶಗಳು ಹಾನಿಗೊಳಗಾಗಿದೆ. ಈ ಯುದ್ಧದಿಂದ 150 ದಶಲಕ್ಷ ಟನ್‌ಗಿಂತ ಹೆಚ್ಚು ವಾತಾವರಣಕ್ಕೆ ಬಿಡುಗಡೆಯಾಗಿದೆ.

ಇಂಗಾಲದ ಆವ್ಲ ಇತ್ತೀಚಿಗೆ ಪೆಹಲ್ಗಾಂ ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರ ಭಾರತವು ಮೇ 2025 ರಲ್ಲಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉಗ್ರರನ್ನು ಗುರಿಯಾಗಿಸಿಕೊಂಡು ಆಪರೇಷನ್ ಸಿಂಧೂರನ್ನು ಪ್ರಾರಂಭಿಸಿತು ಈ ಘಟನೆಯು ಭಾರತ ಮತ್ತು ಪಾಕಿಸ್ತಾನದ ನಡುವೆ ಐದು ದಿನಗಳ ಸೇನಾ ಸಂಘಕ್ಕೆ ಕಾರಣವಾಯಿತು. ನಮ್ಮ ದಾಳಿಗೆ ಹೆದರಿ ಯುದ್ಧ ನಿಲ್ಲಿಸುವಂತೆ ಕರೆ ಮಾಡಿ ಬೇಡಿಕೊಂಡಿದ್ದು, ಪಾಕಿಸ್ತಾನ ಆದರೆ ಅಮೆರಿಕವು ನಾವೇ ಇದನ್ನು ನಿಲ್ಲಿಸಿದ್ದು ಎಂದು ಹೇಳಿಕೊಂಡು ಓಡಾಡುತ್ತಿದ್ದರು. ಆದರೆ ಭಾರತವು ಸ್ಪಷ್ಟವಾಗಿ ಹೇಳಿದೆ ಯುದ್ಧಕ್ಕೆ ನಾವೇ ವಿರಾಮ ನೀಡಿದ್ದೇವೆ ಎಂದು ಅನೇಕ ಕಡೆ ನಡೆಯುತ್ತಿರುವ ಯುದ್ಧಗಳಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣವಾಗಿರುವ ಅಮೆರಿಕವು ರಷ್ಯಾ ಉಕ್ರೇನ್ ಇರಾನ್ ಜೊತೆಗಿನ ಯುದ್ಧವನ್ನು ನಿಲ್ಲಿಸಲಿ. ಅನೇಕ ರಾಷ್ಟ್ರಗಳ ಮೇಲೆ ಭಾರತವು ಸೇರಿ ಹಾಕಿರುವ ಸುಂಕವನ್ನು ಕಡಿತಗೊಳಿಸಲು ಜಗತ್ತು ನನ್ನ ಇಷ್ಟದಂತೆ ನಡೆಯಬೇಕು. ನಾನು ಹೇಳಿದರೆ ಕೇಳಬೇಕು ಅಂದುಕೊಂಡಿದ್ದೆ. ಅಮೆರಿಕ ಬದಲಾದ ಭಾರತ ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ತನ್ನನ್ನು ತಾನು ಅರಿಯುವುದು ವಿಶ್ವ ಜೀವನ ಅವಿಭಾಜ್ಯ ಅಂಗವಾಗಲು ಯತ್ನಿಸುವುದು ಇದೆ ಮಾನವನ ಗುರಿ ಮಹಾತ್ಮ ಗಾಂಧೀಜಿಯವರೇ ಹೇಳಿದ್ದಾರೆ.

ಅಮೇರಿಕ ಇಸ್ರೇಲ್ ಮತ್ತು ಇರಾನ್ ನಡುವೆ ಇದ್ದ ಆರಂಭವಾದಾಗ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಬಗ್ಗೆ ಮತ್ತು ತೈಲಬೆಲೆ ಏರಿಕೆಯಾಗುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಆತಂಕ ಉಂಟಾಗಿತ್ತು ಅಡುಗೆ ಮನೆಯವರೆಗು ಅದರ ಬಿಸಿ ತಟ್ಟಿದೆ ಹೋಟೆಲ್ ಉದ್ಯಮದಲ್ಲಿ ಗೊಂದಲದ ಸ್ಥಿತಿ ಏರ್ಪಟ್ಟಿದೆ. ಭಾರತವು ತನ್ನ ತೈಲಜಾತದ ಶೇಕಡ 85ರಷ್ಟು ಆಮದನ್ನೇ ಅವಲಂಬಿಸಿದೆ. ಅಮೆರಿಕ ಪಶ್ಚಿಮ ಆಫ್ರಿಕಾ ರಷ್ಯಾ ಮತ್ತು ಲ್ಯಾಟಿನ್ ಅಮೆರಿಕ ಸೇರಿದಂತೆ 45 ದೇಶಗಳಿಂದ ಭಾರತವು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ ಇರಾನ್ ಕರಾವಳಿಯ ಭಾಗವಾಗಿರುವ ಹರ್ಮುಜ್ ಜಲಸಂಧಿಯ ಮೂಲಕವೇ ಭಾರತದ ಶೇಕಡ 40 ಶೇಕಡ 50ರಷ್ಟು ಸಾಧನೆ ನಡೆಯುತ್ತದೆ ಜೊತೆಗೆ ಶೇಕಡ 50 ಶೇಕಡ 60ರಷ್ಟು ದ್ರವಿಕೃತ ನೈಸರ್ಗಿಕ ಅನಿಲ ಮತ್ತು ಶೇಕಡ 80% 85% ರಷ್ಟು ಅಡುಗೆ ಅನಿಲ ಕೂಡ ಇದೆ ಮಾರ್ಗದ ಮೂಲಕ ಭಾರತಕ್ಕೆ ತಲುಪುತ್ತಿತ್ತು. ಆದರೆ ಹರ್ಮುಜ್ ಜಲಸಂಧಿಯನ್ನು ತಡೆದು ತೈಲ ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಆದರೂ ಭಾರತದ




**ಕಿರಣ್ .ಎಸ್.ಬಿ**
ಹಿರೇಗೋಣಿಗೆರೆ,
ಹೊನ್ನಾಳಿ ತಾ. ದಾವಣಗೆರೆ
ಮೊ : 7760178577

ವಿದೇಶಾಂಗ ನೀತಿಯ ಮೂಲಕ ಮಾತುಕತೆ ನಡೆಸಿ, ಅದೇ ಹರ್ಮುಜ್ ಜಲಸಂಧಿಯ ಮೂಲಕ ಭಾರತಕ್ಕೆ ಬರಬೇಕಾದ ಅನಿಲ ಹಡಗುಗಳನ್ನು ತರಿಸಿಕೊಂಡಿದೆ, ಇದು ಭಾರತ ವಿದೇಶಾಂಗ ನೀತಿಗೆ ಯಶಸ್ವಿಯಾಗಿದೆ. ಆದರೂ ವ್ಯವಹಾರ ನಡೆಯಬೇಕಲ್ಲವೇ ಕುವೈತ್ ಸೌದಿ ಅರೇಬಿಯಾ ಇರಾಕ್ ಮತ್ತು ಯುಎಇ ತಮ್ಮ ಉತ್ಪಾದನೆ ಕಡಿಮೆಗೊಳಿಸಿದ್ದಾರೆ.

ಇರಾನ್ ಅವರ ಮೇಲೆಯೂ ದಾಳಿ ಮಾಡಿದೆ, ಇದು ಭಾರತಕ್ಕೆ ಸಂಕಷ್ಟ ತಂದು ಒಡ್ಡಿದೆ, ದೇಶದಲ್ಲಿ ಒಟ್ಟು 33 ಕೋಟಿಗು ಹೆಚ್ಚು ಎಲ್ಪಿಜಿ ಗ್ರಾಹಕರಿದ್ದಾರೆ ಪ್ರಸ್ತುತ ಅಡುಗೆ ಅನಿಲ ಪೂರೈಕೆಗೆ ಮೊದಲ ಪ್ರಶಸ್ತಿ ನೀಡಲಾಗಿದೆ ರಸಗೊಬ್ಬರ ವಲಯಕ್ಕೆ ಎರಡನೆಯ ಟೀ ಪ್ಲಾಂಟೇಶನ್ ಉತ್ಪಾದನಾ ವಲಯ ಮತ್ತು ಉದ್ಯಮ ವಲಯಕ್ಕೆ ಮೂರನೇ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಆದರೆ ಅಡುಗೆ ಅನಿಲದ ಬೆಲೆ ಹೆಚ್ಚಳ ಮಾಡಲಾಗಿದೆ. ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳಲಾಗುತ್ತಿದೆ ಆದರೆ ಇದು ತಾತ್ಕಾಲಿಕ ಪರಿಹಾರ ಭಾರತದ ಇಂಧನ ಅಮದು ಬಳಕೆ ರಷ್ಯಾ ಸೌದಿ ಅರೇಬಿಯಾ ಯುಎಇ ಮೊದಲಾದ ದೇಶಗಳಿಂದ ಖರೀದಿಸಲಾಗುತ್ತಿತ್ತು ಈಗ ಈ ಸಂಖ್ಯೆಯನ್ನು 40 ದೇಶಗಳಿಗೆ ಹೆಚ್ಚಿಸಲಾಗಿದೆ.

ಅಂದಾಜಿನ ಪ್ರಕಾರ ದಿನ ಒಂದಕ್ಕೆ 50 ಲಕ್ಷ ಬ್ಯಾರೆಲ್ ತೈಲವನ್ನು ಬಳಸುತ್ತದೆ ಸದ್ಯ ದೇಶದಲ್ಲಿ ನಾಲ್ಕು ಸೊನ್ನೆ ಸೊನ್ನೆ ಕೋಟಿ ಲೀಟರ್‌ಗಳಷ್ಟು ತೈಲ ಲಭ್ಯವಿದೆ ತುರ್ತು ಅವಶ್ಯಕತೆಗೆ ಬೆಳಸಲು ನಿರ್ಮಿಸಲಾಗಿರುವ ತೈಲ ಸಂಗ್ರಹಕಾರಗಳಲ್ಲಿ 53.3 ಲಕ್ಷ ಟನ್‌ಗಳಷ್ಟು ತೈಲ ಇದೆ. ದೇಶದಾದ್ಯಂತ 33 ಕೋಟಿ ಎಲ್.ಪಿ.ಜಿ ಬಳಕೆದಾರರಿದ್ದಾರೆ. ವರ್ಷದ ಎಲ್ಪಿಜಿ ಬಳಕೆ 3 ಲಕ್ಷ ಟನ್‌ಗಳಷ್ಟಿದೆ ದೇಶವು ವಾರ್ಷಿಕವಾಗಿ 5.4 ಕೋಟಿ ಟನ್‌ಗಳು ಅರ್ಧದಷ್ಟು ದೇಶದಲ್ಲಿ ಉತ್ಪಾದನೆ ಆಗುತ್ತಿದ್ದರೆ ಉಳಿದ ಅರ್ಧವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ವರ್ಷಕ್ಕೆ ಸರಾಸರಿ 2.5 ಕೋಟಿ ಟನ್‌ಗಳಷ್ಟು ಅನಿಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಪ್ರಮಾಣದಲ್ಲಿ ಆಮದು ಮಾಡಿಕೊಂಡರೆ ಅಮೆರಿಕ ಆಸ್ಟ್ರೇಲಿಯಾ ರಷ್ಯಾ ಕೂಡ ನೈಸರ್ಗಿಕ ಅನಿಲವನ್ನು ಕರಗಿಸುತ್ತದೆ. ಬೆಂಗಳೂರಿನ ಪ್ರತಿಷ್ಠಿತ ಹಾಸ್ಟೆಲ್ ಕಂಬಿ ಸಿದ್ದರಾಮಣ್ಣ ವಿದ್ಯಾರ್ಥಿ ನಿಲಯದ ಮೇಲೆ ಪರಿಣಾಮ ಬೀರಿ ಕಟ್ಟಿಗೆ ಒಲೆಯಿಂದ ವಿದ್ಯಾರ್ಥಿಗಳಿಗೆ ಆಹಾರವನ್ನು ತಯಾರಿಸುತ್ತಿದ್ದಾರೆ.

ಭೂಮಿಯ ಮಣ್ಣು ನೀರು ಮತ್ತು ವಾಯುಮಂಡಲದ ಮೇಲೆ ಉಂಟಾಗುವ ಪರಿಣಾಮಗಳು ದಶಕಗಳ ಕಾಲ ಮುಂದುವರೆಯುತ್ತದೆ. ಆರೋಗ್ಯ ಸೇವೆಗಳು ಮತ್ತು ಸುರಕ್ಷತೆ ಎಲ್ಲವೂ ಕುಸಿದು ಬೀಳುತ್ತದೆ. ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಬಡ ರಾಷ್ಟ್ರಗಳ ಮೇಲು ಗಂಭೀರ ಪರಿಣಾಮ ಬೀರಿ ವ್ಯಾಪಾರ ವಹಿವಾಟು ಸ್ಥಗಿತವಾಗಿದೆ ಮಹಾವೀರ ಬಸವಣ್ಣನಂತಹ ವ್ಯಕ್ತಿಗಳು ಹುಟ್ಟಿದ ಈ ನಾಡಿನಲ್ಲಿ ಮಾನವ ಕುಲವೋ ಅಹಂಕಾರವನ್ನು ಬಿಟ್ಟು ಮಾನವೀಯತೆಯ ದಾರಿಗೆ ತಿರುಗಬೇಕಾದ ಸಮಯ ಇದು ಶಾಂತಿ ಸಹಕಾರ ಮತ್ತು ಪರಿಸರ ಸಂರಕ್ಷಣೆಗೆ ಎಂಬ ಮೌಲ್ಯಗಳು ಮಾತ್ರ ಭೂಮಿಯ ಭವಿಷ್ಯವನ್ನು ಉಳಿಸಬಲ್ಲವೋ ಯುದ್ಧಗಳಿಂದ ಯಾವ ದೇಶವು ಶಾಶ್ವತ ಜಯವನ್ನು ಸಾಧಿಸಿದ ಉದಾಹರಣೆ ಇಲ್ಲ.

ನಾಗರಿಕತೆಗಳು ನಾಶವಾಗುವೆ ಮಾನವನ್ನು ತನ್ನ ಬುದ್ಧಿಶಕ್ತಿಯನ್ನು ವಿನಾಶಕ್ಕೆ ಬಳಸುವದನ್ನು ಬಿಟ್ಟು ಜೀವ ಜಗತ್ತಿನ ರಕ್ಷಣೆಗೆ ವಿನಿಯೋಗಿಸಿದರೆ, ಭೂಮಿಯ ಭವಿಷ್ಯ ಸುರಕ್ಷಿತವಾಗುತ್ತದೆ. ಜಗತ್ತನ್ನು ಗೆಲ್ಲಬೇಕೆಂದು ಕೊಂಡಿದ್ದ ಅಲೆಕ್ಸಾಂಡರ್ ಹಿಟ್ಲರ್ ಕೋಣೆಗೆ ತಾವೇ ಅಂತ್ಯವಾದರೂ ಭಾರತದ ಮೊದಲ ಸಾಮ್ರಾಜ್ಯದ ಚಕ್ರವರ್ತಿ ಅಶೋಕನ ಕೂಡ ಶಾಂತಿಯನ್ನು ಅನುಸರಿಸಿ ವಿಶ್ವವಿಖ್ಯಾತನಾದ ಗಾಂಧಿ ಶಾಂತಿ ಅಹಿಂಸೆಯಿಂದಲೇ ಸ್ವತಂತ್ರವನ್ನು ಪಡೆದದ್ದು. ಯುದ್ಧದಿಂದ ವಿನಾಶವೇ ಹೊರತು ಯಾವುದೇ ಅವಕಾಶವಿಲ್ಲ.

**20ನೇ ಪುಟದಿಂದ ಮುಂದುವರೆದಿದೆ.**

ಕೊಡು' ಎಂದಿದ್ದಾರೆ. ಕಾಯಕ ಒಂದು ದೈವ ಪೂಜೆ ಎನ್ನುತ್ತಿದ್ದ ಮನಸ್ಸುಗಳು ತಾಂತ್ರಿಕತೆಯ ತಾಕಲಾಟಕ್ಕೆ ಸಿಲುಕಿದ್ದಾರೆ. ಕೃಷಿ ಕುಟುಂಬ ಎಂದಾಕ್ಷಣ ಮೂಗು ಮುರಿವವರು ಹೆಚ್ಚಾಗಿದ್ದಾರೆ.

ಕೃಷಿಕ ಯುವಕರಿಗೆ ಕನ್ಯೆಯರು ದೊರಕುತ್ತಿಲ್ಲ. ಇದೊಂದು ವಿಷಾದನೀಯ ವಿಚಾರ. ನೂತನ ಯೋಜನೆಗಳ ನೆಪದಲ್ಲಿ ಹಸಿರು ಭೂಮಿಯನ್ನು ಬಯಲು ಮಾಡುತ್ತಿದ್ದಾರೆ. ಕೃಷಿಗೆ ಮೂಲವಾದ ಮಣ್ಣು ಬರಕೆಯಾಗುತ್ತಿದೆ. ನೌಕರರಿಗೆ ಕೊಡುವ ಬೆಲೆ ಗೌರವ ಕೃಷಿಕರಿಗೆ ದೊರೆಯುತ್ತಿಲ್ಲ. ಕೃಷಿಮಾಡಿ ಬೆಳೆಬೆಳೆದು ಇಡೀ ಲೋಕಕ್ಕೆ ಅನ್ನ ಆಹಾರದ ಮೂಲಕ ಜೀವ ಚೈತನ್ಯ ನೀಡುತ್ತಿರುವ ರೈತರ ಬದುಕು ನಿಜವಾದ ಸಾರ್ಥಕ ಬದುಕು. ಕೃಷಿ ಪ್ರಧಾನವಾದ ನಮ್ಮ ದೇಶದ ಬೆನ್ನೆಲುಬು ರೈತನೇ. ಆದರಿಂದು ಉಳುವ ಈ ಯೋಗಿಗಳ ಆತ್ಮಹತ್ಯೆ ಪ್ರಕರಣಗಳು ಸಮಾಜವನ್ನು ಕಂಗೆಡಿಸುತ್ತಿವೆ. ದೇಶದ ಜೀವನಾಡಿ ಯಾಗಿರುವ ರೈತರು ಆಯಾ ದೇಶದ ಪ್ರಗತಿಯ ದ್ಯೋತಕ. ಶರಣರು ಕಟ್ಟ ಬಯಸಿದ ನೂತನ ಸಮಾಜಕ್ಕೆ ಸಿದ್ದರಾಮರ ಕಾಯಕ ನಿಷ್ಠೆ ಕೃಷಿ ಪ್ರಜ್ಞೆ ಕೊಡುಗೆಯು ಮಹತ್ತರವಾದದ್ದು.

# ಸಮಾಜ ಸಂಘಟನೆ

ಎಂ.ಕೆ. ಸ್ವಾಮಿ
ಜಿಗಳಿ, ಹರಿಹರ

ನಮ್ಮ ಸಮಾಜದಲ್ಲಿ ಸಂಘಟನೆಯ ಕೊರತೆ ಹಾಗೂ ಮಠದ ಗುರುಗಳು ಮತ್ತು ಭಕ್ತರ ನಡುವೆ ಭಿನ್ನಾಭಿಪ್ರಾಯಗಳು ಸರಿಹೋಗಬೇಕಾದರೆ ಒಂದು ಮತ್ತು ಎರಡನೇ ತಲೆಮಾರಿನ ದುರೀಣರು ತಮ್ಮ ಪೂರ್ವನಿರ್ಧರಿತ ಸ್ವಾರ್ಥಪೂರ್ಣ ಯೋಚನೆಗಳನ್ನು ಮತ್ತು ಯೋಜನೆಗಳನ್ನು (Selfish and outdated things) ಬದಿಗೊತ್ತಿ, ಮೂರನೇ ಮತ್ತು ನಾಲ್ಕನೇ ತಲೆಮಾರಿನ ಯುವಕರ ಮತ್ತು ಮಕ್ಕಳ ಭವಿಷ್ಯವನ್ನು ಕೇಂದ್ರೀಕರಿಸಿ ತಳಮಟ್ಟದಿಂದ ಮತ್ತು ಕೆಳಸ್ಥರದಿಂದ ನಮ್ಮ ಸಮಾಜವನ್ನು ಈ ಕೆಳಗಿನ ಅಂಶಗಳ ಆಧಾರದ ಮೇಲೆ ಸಂಘಟಿಸಲು ಪ್ರಯತ್ನಿಸಬೇಕು.

**ಪೀಠ ಕೇಂದ್ರಿತ ಸಂಘಟನೆ**

◆ ಕರ್ನಾಟಕದಾದ್ಯಂತ ಹರಿದು ಹಂಚಿ ಹೋಗಿರುವ ನಮ್ಮ ಸಮಾಜ ಶಾಶ್ವತವಾಗಿ ಸಂಘಟಿತವಾಗಬೇಕಾದರೆ, ಸಮಾಜದ ಎಲ್ಲಾ ಪೀಠಗಳನ್ನು (ಮಠಗಳನ್ನು) ಕೇಂದ್ರವಾಗಿಟ್ಟುಕೊಂಡು ತಳಮಟ್ಟದಿಂದ ಸಂಘಟನೆಯನ್ನು ನಿರ್ಮಿಸಬೇಕು.

◆ ಪೀಠವೇ ಮೊದಲು; ನಂತರ ಗುರುಗಳು ಹಾಗೂ ಸಮಾಜದ ದುರೀಣರು. ವ್ಯಕ್ತಿಗಳು ಬದಲಾಗಬಹುದು, ಆದರೆ ಪೀಠಗಳು ಮತ್ತು ಅವುಗಳ ಪರಂಪರೆ ಶಾಶ್ವತವಾಗಿರುತ್ತವೆ. ಆದ್ದರಿಂದ ಸಂಘಟನೆಯ ಅಡಿಪಾಯ ವ್ಯಕ್ತಿಗಳಿಗಿಂತ ಪೀಠಗಳ ಮೇಲೆ ನಿರ್ಮಾಣವಾಗಬೇಕು.

◆ ವ್ಯಕ್ತಿ ಕೇಂದ್ರಿತ ಸಂಘಟನೆಗಳು ಶಾಶ್ವತವಾಗಿರುವುದಿಲ್ಲ. ವ್ಯಕ್ತಿಯ ಪ್ರಭಾವ ಅಥವಾ ನಾಯಕತ್ವದ ಅವಧಿಯವರೆಗೆ ಮಾತ್ರ ಅವು ಸೀಮಿತವಾಗುವ ಸಾಧ್ಯತೆ ಇರುತ್ತದೆ. ಆದರೆ ಪೀಠ ಕೇಂದ್ರಿತ ಸಂಘಟನೆ ಪೀಳಿಗೆಯಿಂದ ಪೀಳಿಗೆಗೆ ನಿರಂತರವಾಗಿ ಸಾಗುವ ಸಾಮರ್ಥ್ಯ ಹೊಂದಿರುತ್ತದೆ.

◆ ನಮ್ಮ ಸಮಾಜದ ಎಲ್ಲಾ ಮಠಗಳು ಏಕೀಕರಣ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸಿ, ಸಮಾಜದ ಹಿತಾಸಕ್ತಿಗಾಗಿ ಪರಸ್ಪರ ಸಹಕಾರ, ಸಮನ್ವಯ ಮತ್ತು ಸಾಮೂಹಿಕ ನಾಯಕತ್ವವನ್ನು ಬೆಳೆಸಬೇಕು.

◆ ಪೀಠಗಳ ನಡುವೆ ಸಮನ್ವಯ, ಸಮಾಜದ ನಡುವೆ ಸೌಹಾರ್ದತೆ ಮತ್ತು ಯುವಕರಲ್ಲಿ ಸೇವಾ ಮನೋಭಾವ ಬೆಳೆಸುವ ಮೂಲಕ ಬಲಿಷ್ಠ ಹಾಗೂ ಶಾಶ್ವತ ಸಂಘಟನೆಯನ್ನು ನಿರ್ಮಿಸಲು ಸಾಧ್ಯವಾಗುತ್ತದೆ.

**1. ಸಮಾಜದ ಏಕತೆಯನ್ನು ಮೊದಲ ಗುರಿಯನ್ನಾಗಿ ಮಾಡಬೇಕು.**

◆ ವ್ಯಕ್ತಿ ಅಥವಾ ಗುಂಪು ಕೇಂದ್ರಿತವಾಗದೆ ಸಮಾಜ ಕೇಂದ್ರಿತ ಚಿಂತನೆ ಬೆಳೆಸಬೇಕು.

◆ "ನಾವು ಎಲ್ಲರೂ ಮೊದಲು ನೊಳಂಬರು" ಎಂಬ ಸಂದೇಶವನ್ನು ಹರಡಬೇಕು.

◆ ಹಳೆಯ ವೈಮನಸ್ಸುಗಳನ್ನು ಕೆದಕುವ ಬದಲು ಭವಿಷ್ಯದ ಗುರಿಗಳ ಮೇಲೆ ಗಮನಹರಿಸಬೇಕು.

◆ ಸಮಾಜದ ರಾಜಕೀಯ ಮುಖಂಡರು ತಮ್ಮ ವ್ಯಕ್ತಿಕ ರಾಜಕೀಯ ಏನೇ ಇರಲಿ ಪೀಠ ಹಾಗೂ ಸಮಾಜ ಅಂತ ಬಂದಾಗ ಪಕ್ಷತೀತವಾಗಿ ಒಗ್ಗೂಡಬೇಕು.

**2. ಯುವಕರು ಮತ್ತು ಮಕ್ಕಳನ್ನು ಕೇಂದ್ರೀಕರಿಸಿ ಸಂಘಟನಾ ಚಟುವಟಿಕೆಗಳು**

◆ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಯುವಕರ ಸಂಘಟನೆ ರೂಪಿಸಬೇಕು.

◆ ಸಮಾಜದ ವಿದ್ಯಾವಂತರು, ಉದ್ಯಮಿಗಳು, ಸರ್ಕಾರಿ ಹಾಗೂ ನೌಕರರನ್ನು ಒಂದೇ ವೇದಿಕೆಗೆ ತರಬೇಕು.

◆ ಸಮಾಜದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನಬದ್ಧ ವೇದಿಕೆಯೊಂದನ್ನು ರೂಪಿಸಬೇಕು

◆ ಸಾಮಾಜಿಕ ಜಾಲತಾಣಗಳ ಮೂಲಕ ನಿರಂತರ ಸಂಪರ್ಕದಲ್ಲಿರಬೇಕು.

**3. ಮಠ ಮತ್ತು ಸಮಾಜದ ನಡುವೆ ಸೇತುವೆಯಾಗಬೇಕು**

◆ ಯಾವುದೇ ಪಕ್ಷಪಾತವಿಲ್ಲದೆ ಗುರುಗಳು ಮತ್ತು ಭಕ್ತರೊಂದಿಗೆ ಸಂವಾದ ನಡೆಸಬೇಕು.

◆ ಸಮಸ್ಯೆಗಳನ್ನು ಸಾರ್ವಜನಿಕವಾಗಿ ಚರ್ಚಿಸುವ ಬದಲು ಸಮಾಲೋಚನೆಯ ಮೂಲಕ ಪರಿಹರಿಸಲು ಪ್ರಯತ್ನಿಸಬೇಕು.

◆ ಮಠದ ಗೌರವ ಮತ್ತು ಸಮಾಜದ ಹಿತ ಎರಡನ್ನೂ ಕಾಪಾಡುವ ನಿಲುವು ಹೊಂದಬೇಕು.

◆ ಸಮಾಜದ ಕೆಳಸ್ಥರದ ಮತ್ತು ಸಣ್ಣ ರೈತಾಪಿ ಜನರನ್ನು ಕಡೆಗಣಿಸಬಾರದು (ಸಮಾಜ ಗಟ್ಟಿಗೊಳ್ಳುವುದೇ ಈ ಹಂತದದ ಸಮಾಜ ಬಾಂಧವರಿಂದ. ಸಮಾಜದ ದುರೀಣರಿಂದಲ್ಲ)

◆ ಹೀಗಿರುವ ನಂದಿಗುಡಿ ಗುರುಗಳ ಯೋಚನೆಯ ಜಾಗದಲ್ಲಿ ನವ ಚಿಂತನೆಯನ್ನು ಬಿತ್ತಬೇಕು.

◆ ಬದಲಾವಣೆ ಕಾಲ ಮತ್ತು ಸ್ಥಳವನ್ನು ಅವಲಂಭಿಸಿದೆ ಸೂಕ್ಷ್ಮವಾಗಿ ಸಮಾಜದ ಅವನತಿಯ ಕಾರಣಗಳನ್ನು ಅವಲೋಕಿಸಿ ಗುರುಗಳು ಮತ್ತು ಭಕ್ತರು ಬದಲಾವಣೆಗೆ ದಾರಿ ಮಾಡಿಕೊಡಬೇಕು.

**4. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು**

◆ ವಿದ್ಯಾರ್ಥಿವೇತನ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ,

ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳನ್ನು ನಡೆಸಬೇಕು.
- ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು.
- ಶಿಕ್ಷಣದ ಮೂಲಕ ಸಮಾಜದ ಪ್ರಭಾವ ಮತ್ತು ನಾಯಕತ್ವವನ್ನು ಹೆಚ್ಚಿಸಬೇಕು.

**5. ಸಮಗ್ರ ದತ್ತಾಂಶ ಸಂಗ್ರಹಿಸಬೇಕು**

- ಸಮಾಜದ ಕುಟುಂಬಗಳು, ವಿದ್ಯಾರ್ಥಿಗಳು, ಉದ್ಯೋಗ ಸ್ಥರು, ಉದ್ಯಮಿಗಳ ವಿವರಗಳನ್ನು ಸಂಗ್ರಹಿಸಬೇಕು.
- ಇದರಿಂದ ಸಮಾಜದ ನೈಜ ಸ್ಥಿತಿ ಮತ್ತು ಅಗತ್ಯತೆಗಳು ಸ್ಪಷ್ಟವಾಗುತ್ತವೆ.

**6. ವಾರ್ಷಿಕ ಸಮಾಜ ಸಮ್ಮೇಳನ ಆಯೋಜಿಸಬೇಕು**

- ಎಲ್ಲಾ ಪಂಗಡದ ಜನರನ್ನು ಒಂದೇ ವೇದಿಕೆಗೆ ತರಬೇಕು.
- ಸಾಧಕರನ್ನು ಸನ್ಮಾನಿಸಿ ಯುವಕರಿಗೆ ಮಾದರಿಯಾಗಿಸ ಬೇಕು.
- ಸಣ್ಣ ಸಣ್ಣ ಸಾಧನೆಗಳನ್ನು ಗುರುತಿಸಿ ಪ್ರೋತ್ಸಹಿಸಬೇಕು
- ಸಮಾಜದ ಅಭಿವೃದ್ಧಿ ಕುರಿತ ಚರ್ಚೆಗಳನ್ನು ನಡೆಸಬೇಕು.

**7. ಹೊಸ ನಾಯಕತ್ವವನ್ನು ಬೆಳೆಸಬೇಕು**

- ಯುವಕರಿಗೆ ಜವಾಬ್ದಾರಿಗಳನ್ನು ನೀಡಬೇಕು.
- ನಾಯಕತ್ವ ತರಬೇತಿ, ಸಾರ್ವಜನಿಕ ಭಾಷಣ, ಸಂಘಟನೆ ಕೌಶಲ್ಯಗಳ ಬಗ್ಗೆ ಕಾರ್ಯಾಗಾರಗಳನ್ನು ಆಯೋಜಿಸಬೇಕು.
- ಹುದ್ದೆಗಾಗಿ ಅಲ್ಲ, ಸೇವೆಗಾಗಿ ಕೆಲಸ ಮಾಡುವ ಮನೋಭಾವ ಬೆಳೆಸಬೇಕು.

**8. 10 ವರ್ಷದ ಕಾರ್ಯಸೂಚಿ (Vision Document)** ಸಿದ್ಧಪಡಿಸಬೇಕು

- ಶಿಕ್ಷಣ
- ಸಮಾಜದ ಇತಿಹಾಸದ ಬಗ್ಗೆ ತಿಳುವಳಿಕೆ
- ಆರ್ಥಿಕ ಸಬಲೀಕರಣ
- ಮಹಿಳಾ ಸಬಲೀಕರಣ
- ಯುವಜನ ಅಭಿವೃದ್ಧಿ
- ಮಠ-ಸಮಾಜ ಸಮನ್ವಯ
- ಸಾಂಸ್ಕೃತಿಕ ಸಂರಕ್ಷಣೆ

ಇವುಗಳ ಸ್ಪಷ್ಟ ಗುರಿಗಳನ್ನು ನಿರ್ಧರಿಸಬೇಕು.

**ಹಿರಿಯರ ಮತ್ತು ಯುವಕರ ಪಾತ್ರ**

"ಹಿರಿಯರು ನ್ಯಾಯಾಧೀಶರಾಗಿ ತೀರ್ಪು ನೀಡುವವರಾಗದೆ, ಸಮನ್ವಯಕಾರರಾಗಿ ಮಾರ್ಗದರ್ಶನ ನೀಡುವವರಾಗಬೇಕು. ಅವರ ಅನುಭವ ಮತ್ತು ಯುವಕರ ಉತ್ಸಾಹ, ಶಕ್ತಿ ಹಾಗೂ ಹೊಸ ಚಿಂತನೆಗಳು ಒಂದಾದಾಗ ಮಾತ್ರ ಸಮಾಜದಲ್ಲಿ ಶಾಶ್ವತ ಸಂಘಟನೆ, ಸೌಹಾರ್ದತೆ ಮತ್ತು ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ತಲೆಮಾರುಗಳ ನಡುವಿನ ಸಹಕಾರವೇ ಬಲಿಷ್ಠ ಸಮಾಜದ ಅಡಿಪಾಯವಾಗಿದೆ."

"ವ್ಯಕ್ತಿಗಳಿಗಿಂತ ಸಮಾಜ ದೊಡ್ಡದು, ಭಿನ್ನಾಭಿಪ್ರಾಯಗಳಿಗಿಂತ ಏಕತೆ ದೊಡ್ಡದು, ಇಂದಿನ ಭಾವನೆಗಳಿಗಿಂತ ಮುಂದಿನ ತಲೆಮಾರಿನ ಭವಿಷ್ಯ ದೊಡ್ಡದು."

**ನಮ್ಮ ಸಮಾಜ ಸಂಘಟನೆಗೆ ಸಮಗ್ರ ನೀಲನಕ್ಷೆ ಬೇಕು –**

"ನಮ್ಮ ಸಮಾಜ ಶಾಶ್ವತವಾಗಿ ಸಂಘಟಿತವಾಗಬೇಕಾದರೆ, ಸ್ಪಷ್ಟವಾದ ಗುರಿ ಮತ್ತು ಸಮಗ್ರ ನೀಲನಕ್ಷೆಯೊಂದಿಗೆ ಪ್ರತಿಯೊಬ್ಬರೂ ಶ್ರಮದಾನ ಮಾಡುವುದು ಅನಿವಾರ್ಯ.



# ಶ್ರದ್ಧಾಂಜಲಿ

84 ವರ್ಷದ ಇಂದಿರಾ ಲಂಕೇಶ್ ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಬೆಂಗಳೂರಿನ ಉತ್ತರಹಳ್ಳಿಯಲ್ಲಿರುವ ತಮ್ಮ ಪುತ್ರಿ ಕವಿತಾ ಲಂಕೇಶ್ ಅವರ ನಿವಾಸದಲ್ಲಿ ಲಿಂಗೈಕ್ಯರಾಗಿದ್ದಾರೆ.

ಇಂದಿರಾ ಲಂಕೇಶ್ ಅವರು ಪುತ್ರಿ ಕವಿತಾ ಲಂಕೇಶ್ ಮತ್ತು ಪುತ್ರ ಇಂದ್ರಜಿತ್ ಲಂಕೇಶ್ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ಇತಿಹಾಸ ಸೃಷ್ಟಿಸಿದ 'ಲಂಕೇಶ್ ಪತ್ರಿಕೆ'ಯ ಆರಂಭದ ದಿನಗಳಿಂದಲೂ ಪಿ. ಲಂಕೇಶ್ ಅವರಿಗೆ ಇಂದಿರಾ ಲಂಕೇಶ್ ಅವರು ದೊಡ್ಡ ಬೆಂಬಲವಾಗಿ ನಿಂತಿದ್ದರು. ಲಂಕೇಶ್ ಅವರ ನಿಧನದ ನಂತರವೂ ಪತ್ರಿಕೆ ಮುನ್ನಡೆಸುವಲ್ಲಿ ಹಾಗೂ ಲಂಕೇಶ್ ಪ್ರಕಾಶನದ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಸರಳ ಸಜ್ಜನಿಕೆ ಮತ್ತು ದಿಟ್ಟ ವ್ಯಕ್ತಿತ್ವ ಹೊಂದಿದ್ದ ಇಂದಿರಾ ಲಂಕೇಶ್ ಅವರು ಸಾಹಿತ್ಯ ಮತ್ತು ಪತ್ರಿಕೋದ್ಯಮ ವಲಯದ ಅನೇಕ ಗಣ್ಯರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಇಂದಿರಾ ಅವರು 'ಹುಳಿ ಮಾವು ಮತ್ತು ನಾನು' ಎಂಬ ಆತ್ಮಕಥನವನ್ನೂ ಬರೆದಿದ್ದರು.

ವಿ.ವಿ. ಪ್ರೊಫೆಸರ್ ಆಗಿದ್ದ ಪಿ. ಲಂಕೇಶ್ ಅವರು ಕೆಲಸಕ್ಕೆ ರಾಜೀನಾಮೆ ನೀಡಿದಾಗ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. "ನೀನು ಕೇವಲ ಪಿಯುಸಿ ಓದಿದ್ದಾಕೆ, ನಿನಗೆ ಯಾರು ಕೆಲಸ ಕೊಡ್ತಾರೆ?" ಎಂದು ಲಂಕೇಶರು ಲೇವಡಿ ಮಾಡಿದ್ದನ್ನೇ ಸವಾಲಾಗಿ ಸ್ವೀಕರಿಸಿದ ಇಂದಿರಾ, ಬ್ಯಾಂಕ್ ಮತ್ತು ಸ್ನೇಹಿತರಿಂದ ಸಾಲ ಪಡೆದು ಬೆಂಗಳೂರಿನಲ್ಲಿ ಸೀರೆ ಅಂಗಡಿಯನ್ನು ಆರಂಭಿಸಿ ಕುಟುಂಬಕ್ಕೆ ನೆರವಾಗಿದ್ದರು. ನೊಳಂಬ ಲಿಂಗಾಯತ ಸಂಘ ಮತ್ತು ನೊಳಂಬವಾಣಿ ಪತ್ರಿಕಾ ಬಳಗದಿಂದ ಶ್ರದ್ಧಾಂಜಲಿ.

# 108, 1008 ಮತ್ತು 1108

ಲಿಂಗಾಯತ ಸಂಪ್ರದಾಯದಲ್ಲಿ ಮತ್ತು ವಿಶಾಲವಾದ ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಸ್ವಾಮಿಗಳ ಅಥವಾ ಜಗದ್ಗುರುಗಳ ಹೆಸರಿನ ಮುಂದೆ '108' (ನೂರ ಎಂಟು) '1008' (ಒಂದು ಸಾವಿರದ ಎಂಟು) ಮತ್ತು 1108 ಹ(ಹನ್ನೆರಡು ನೂರಾ ಎಂಟು) ಎಂಬ ಸಂಖ್ಯೆಗಳನ್ನು ಬಳಸುವುದನ್ನು ಗಮನಿಸಿರಬಹುದು.

ಇದು ಬಹಳ ಪುರಾತನವಾದ ಮತ್ತು ಅರ್ಥಪೂರ್ಣ ವಾದ ಪದ್ಧತಿ. ಇವು ಕೇವಲ ಸಂಖ್ಯೆಗಳಲ್ಲ, ಬದಲಿಗೆ ಒಬ್ಬ ವ್ಯಕ್ತಿಯು ತಲುಪಿರುವ ಆಧ್ಯಾತ್ಮಿಕ ಎತ್ತರ, ಅವರು ಹೊಂದಿರುವ ಜ್ಞಾನ ಮತ್ತು ಅವರ ನಾಯಕತ್ವದ ಸಂಕೇತಗಳಾಗಿವೆ. ಲಿಂಗಾಯತ ಮಠಗಳ ಮತ್ತು ಪೀಠಾಧಿಪತಿಗಳ ಸಂದರ್ಭದಲ್ಲಿ ಇವುಗಳಿಗೆ ಮಹತ್ವ.

**ಹಾಗಾದರೆ ಸಂಖ್ಯೆಗಳ ವಿಸ್ತೃತ ರೂಪ ಮತ್ತು ಅರ್ಥವೇನು?**

ಧಾರ್ಮಿಕ ಪಠ್ಯಗಳ ಪ್ರಕಾರ, ಈ ಸಂಖ್ಯೆಗಳನ್ನು ಕೇವಲ ಅಂಕೆಗಳಾಗಿ ಓದುವುದಿಲ್ಲ. ಇವುಗಳನ್ನು ಬಿರುದುಗಳಾಗಿ ಬಳಸಲಾಗುತ್ತದೆ. 108 ನ್ನು 'ಅಷ್ಟೋತ್ತರ ಶತ' ಎನ್ನಲಾಗುತ್ತದೆ. (8+100=108). ಇನ್ನು 1008ನ್ನು 'ಸಹಸ್ರ ಎಂಟು' ಅಥವಾ 'ಅಷ್ಟೋತ್ತರ ಸಹಸ್ರ' ಎನ್ನಲಾಗುತ್ತದೆ. ಸಾಮಾನ್ಯವಾಗಿ, ವಿರಕ್ತ ಮಠಗಳ ಸ್ವಾಮಿಗಳಿಗೆ ಅಥವಾ ಪಟ್ಟಾಧ್ಯಕ್ಷರಿಗೆ 108 ಎಂದು ಬಳಸಿದರೆ, ಪಂಚಪೀಠಗಳ ಜಗದ್ಗುರುಗಳಿಗೆ ಅಥವಾ ಅತ್ಯುನ್ನತ ಧಾರ್ಮಿಕ ಸ್ಥಾನದಲ್ಲಿರುವವರಿಗೆ 1008 ಎಂದು ಬಳಸುವ ಸಂಪ್ರದಾಯವಿದೆ.

ಹಿಂದೂ ಮತ್ತು ಲಿಂಗಾಯತ ಧರ್ಮಶಾಸ್ತ್ರಗಳಲ್ಲಿ 108 ಎಂಬ ಸಂಖ್ಯೆಗೆ ವಿಶೇಷ ಪಾವಿತ್ರ್ಯವಿದೆ. ಇದರ ಹಿಂದೆ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಕಾರಣಗಳಿವೆ. ಯಾವುದೇ ಮಂತ್ರವನ್ನು ಸಿದ್ಧಿಸಿಕೊಳ್ಳಲು ಅಥವಾ ದೈವಿಕ ಕೃಪೆಗೆ ಪಾತ್ರರಾಗಲು 108 ಬಾರಿ ಜಪಿಸಬೇಕು ಎಂಬ ನಿಯಮವಿದೆ. ರುದ್ರಾಕ್ಷಿ ಮಾಲೆಯಲ್ಲಿಯೂ 108 ಮಣಿಗಳಿರುತ್ತವೆ. ಸ್ವಾಮಿಗಳು ಅಂಥ ಅಸಂಖ್ಯಾತ ಜಪ-ತಪಗಳನ್ನು ಮಾಡಿ 'ಸಿದ್ಧಿ' ಪಡೆದವರು ಎಂಬ ಗೌರವ ಸೂಚಿಸಲು ಇದನ್ನು ಬಳಸಲಾಗುತ್ತದೆ. ಒಬ್ಬ ಆದರ್ಶ ಯತಿಯು ಹೊಂದಿರಬೇಕಾದ ದೈವಿಕ ಗುಣಗಳನ್ನು ಇದು ಪ್ರತಿನಿಧಿಸುತ್ತದೆ. ಇಂದ್ರಿಯಗಳನ್ನು ಗೆದ್ದವನು, ಅರಿಷಡ್ವರ್ಗಗಳನ್ನು ಹತೋಟಿಯಲ್ಲಿಟ್ಟವನು ಎಂಬ ಅರ್ಥ ಇದರಲ್ಲಿದೆ. ಸೂರ್ಯನ ವ್ಯಾಸವು ಭೂಮಿಯ ವ್ಯಾಸಕ್ಕಿಂತ 108 ಪಟ್ಟು ದೊಡ್ಡದಾಗಿದೆ. ಹಾಗೆಯೇ ಸೂರ್ಯ ಮತ್ತು ಭೂಮಿಯ ನಡುವಿನ ಅಂತರವು ಸೂರ್ಯನ ವ್ಯಾಸದ 108 ಪಟ್ಟು ಇದೆ. ಆಧ್ಯಾತ್ಮಿಕ ಗುರುಗಳು ಸೂರ್ಯನಂತೆ ಜ್ಞಾನದ ಬೆಳಕನ್ನು ನೀಡುವವರು ಎಂಬ ಭಾವನೆ ಇಲ್ಲಿ ಅಡಗಿದೆ. '1008' ಎಂಬುದು ಅತ್ಯುನ್ನತ ಗೌರವದ ಸೂಚಕ. ಇದು ಒಬ್ಬ ವ್ಯಕ್ತಿಯು ಕೇವಲ ವೈಯಕ್ತಿಕ ಮುಕ್ತಿಯನ್ನಷ್ಟೇ ಪಡೆಯದೇ, ಸಾವಿರಾರು ಜನರಿಗೆ ದಾರಿದೀಪವಾಗುವ ಶಕ್ತಿಯನ್ನು ಹೊಂದಿದ್ದಾನೆ ಎಂಬುದನ್ನು ತೋರಿಸುತ್ತದೆ. ಯೋಗಶಾಸ್ತ್ರದ ಪ್ರಕಾರ, ತಲೆಯ ಮೇಲ್ಭಾಗದಲ್ಲಿ 'ಸಹಸ್ರಾರು ಚಕ್ರ'ವಿರುತ್ತದೆ. ಯಾರು ತಪಸ್ಸಿನ ಮೂಲಕ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿ ಈ ಸಹಸ್ರಾರು ಸ್ಥಿತಿಯನ್ನು ತಲುಪುತ್ತಾರೋ, ಅಂಥವರು ಪರಶಿವನ ಸಾಕ್ಷಾತ್ಕಾರ ಪಡೆದವರು ಎಂದು ನಂಬಲಾಗುತ್ತದೆ.

ಈ 'ಸಹಸ್ರ' (ಸಾವಿರ) ಸ್ಥಿತಿಯನ್ನು ಸೂಚಿಸಲು 1008 ಬಳಸಲಾಗುತ್ತದೆ. ಲಿಂಗಾಯತ ಪಂಚಪೀಠಗಳಾದ ಕಾಶಿ, ರಾಮೇಶ್ವರ, ಉಜ್ಜಯಿನಿ, ಶ್ರೀಶೈಲ ಮತ್ತು ಬಾಳೆಹೊನ್ನೂರು ಪೀಠದ ಜಗದ್ಗುರುಗಳಿಗೆ ಈ ಬಿರುದನ್ನು ಅನ್ವಯಿಸಲಾಗುತ್ತದೆ. ಇವರು ಧರ್ಮದ ರಕ್ಷಕರು ಮತ್ತು ಲಕ್ಷಾಂತರ ಭಕ್ತರ ಆರಾಧ್ಯ ದೈವಗಳು ಎಂಬ ಗೌರವ ಇದರಲ್ಲಿದೆ. ಶರಣ ಸಂಸ್ಕೃತಿಯಲ್ಲಿ ಅಂತರಂಗದ ಶುದ್ಧಿಗೆ ಹೆಚ್ಚಿನ ಮಹತ್ವವಿದೆ.

ಬಸವಣ್ಣನವರ ತತ್ವದಂತೆ 'ನಡೆ-ನುಡಿ' ಒಂದಾದವರು ನಿಜವಾದ ಜ್ಞಾನಿಗಳು. ಪತ್ರಿಕೆಗಳಲ್ಲಿ ಅಥವಾ ಆಮಂತ್ರಣಗಳಲ್ಲಿ ಬರೆಯುವಾಗ 'ಶ್ರೀ ಶ್ರೀ ಶ್ರೀ 1008 ಜಗದ್ಗುರು...' ಎಂದು ಬರೆಯುವುದು ರೂಢಿ. ಇಲ್ಲಿ ಮೂರು ಬಾರಿ 'ಶ್ರೀ' ಬಳಸುವುದು ಲಕ್ಷ್ಮಿ (ಸಂಪತ್ತು), ಸರಸ್ವತಿ (ಜ್ಞಾನ) ಮತ್ತು ಪಾರ್ವತಿ (ಶಕ್ತಿ) ಎಂಬ ಮೂರೂ ಅಂಶಗಳು ಅವರಲ್ಲಿವೆ ಅಥವಾ ಅವರು ಲೌಕಿಕ ಆಶೆಗಳನ್ನು ಮೀರಿದವರು ಎಂಬ ಅರ್ಥ ನೀಡುತ್ತದೆ. ಭಕ್ತರು ತಮ್ಮ ಗುರುಗಳನ್ನು ಸಾಕ್ಷಾತ್ ಪರಶಿವನ ಸ್ವರೂಪವೆಂದು ಕಾಣುತ್ತಾರೆ.

ಹೆಸರಿನ ಮುಂದೆ ಈ ಸಂಖ್ಯೆಗಳನ್ನು ಹಾಕುವುದರಿಂದ ಭಕ್ತರಲ್ಲಿ ಆ ಗುರುವಿನ ಬಗ್ಗೆ ಇರುವ ಶ್ರದ್ಧೆ ಮತ್ತು ಭಕ್ತಿ ವ್ಯಕ್ತವಾಗುತ್ತದೆ. ಸಂಖ್ಯಾಶಾಸ್ತ್ರದ ಪ್ರಕಾರ 108ನ್ನು ಕೂಡಿಸಿದರೆ (1+0+8) ಒಂಬತ್ತು (9) ಬರುತ್ತದೆ. 9 ಎಂಬುದು ಪೂರ್ಣತ್ವದ ಸಂಕೇತ. ಯಾವುದೇ ಸಂಖ್ಯೆಯನ್ನು 9 ರಿಂದ ಗುಣಿಸಿದರೂ ಅದರ ಮೊತ್ತ ಮತ್ತೆ 9 ಕ್ಕೇ ಬರುತ್ತದೆ. ಅಂದರೆ, ಜ್ಞಾನಿಯು ಎಷ್ಟೇ ಹಂಚಿದರೂ ಅವನ ಜ್ಞಾನ ಕುಂದದು, ಅವನು ಸದಾ ಪೂರ್ಣನಾಗಿಯೇ ಇರುತ್ತಾನೆ ಎಂಬುದು ಇದರ ತಾತ್ಪರ್ಯ.

ಸ್ವಾಮಿಗಳ ಹೆಸರಿನ ಮುಂದೆ 108, 1008 ಅಥವಾ 1108 ಎಂದು ಬರೆಯುವುದು ಅವರ ವೈರಾಗ್ಯ, ಜ್ಞಾನ, ತಪಸ್ಸು ಮತ್ತು ಸಮಾಜಕ್ಕೆ ಅವರು ನೀಡುವ ಮಾರ್ಗದರ್ಶನಕ್ಕೆ ಸಲ್ಲಿಸುವ ಗೌರವವಾಗಿದೆ. ಇದು ಆ ವ್ಯಕ್ತಿಯು ಲೌಕಿಕ ಪ್ರಪಂಚದ ತುರ್ತುಗಳಿಗಿಂತ ಭಿನ್ನವಾಗಿ, ಉನ್ನತವಾದ ಆಧ್ಯಾತ್ಮಿಕ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಜಗತ್ತಿಗೆ ಸಾರುವ ಒಂದು ಸಂಕೇತ. ಲಿಂಗಾಯತ ಮಠಗಳು ಕಾಯಕ ಮತ್ತು ದಾಸೋಹದ ಮೂಲಕ ಸಮಾಜವನ್ನು ಮುನ್ನಡೆಸುತ್ತಿವೆ. ಅಂಥ ಮಠಾಧೀಶರಿಗೆ ಈ ಬಿರುದುಗಳು ಅವರ ಜವಾಬ್ದಾರಿಯನ್ನು ನೆನಪಿಸುವ ಮತ್ತು ಭಕ್ತರಿಗೆ ಅವರ ಶ್ರೇಷ್ಠತೆಯನ್ನು ತಿಳಿಸುವ ಸಂಕೇತಗಳಾಗಿವೆ. **(ಸಂಗ್ರಹ)**

# ನೊಣವಿನಕೆರೆ ಕಾಡುಸಿದ್ದೇಶ್ವರ ಮಠ ಅಜ್ಜಯ್ಯ
# ಪಾಶುಪತ ಪರಂಪರೆ ತಿಪಟೂರು

**ನೊಣವಿನಕೆರೆ ಕಾಡುಸಿದ್ದೇಶ್ವರರ ಮಹಿಮೆ**

"**ಭಕ್ತಿ, ಸೇವೆ ಮತ್ತು ಸತ್ಯದ ಮಾರ್ಗದಲ್ಲಿ ನಡೆಯುವವರಿಗೆ ದೈವಾನುಗ್ರಹ ಖಚಿತ**" ಎಂಬ ಸಂದೇಶವನ್ನು ತಮ್ಮ ಜೀವನದ ಮೂಲಕ ಸಾರಿದ ಮಹಾನ್ ಸಂತರು ನೊಣವಿನಕೆರೆ ಕಾಡುಸಿದ್ದೇಶ್ವರರು.

ತುಮಕೂರು ಜಿಲ್ಲೆಯ ನೊಣವಿನಕೆರೆ ಕ್ಷೇತ್ರವು ಭಕ್ತರ ಪಾಲಿಗೆ ಪವಿತ್ರ ತಪೋಭೂಮಿಯಾಗಿದೆ. ಇಲ್ಲಿ ನೆಲೆಸಿರುವ ಕಾಡುಸಿದ್ದೇಶ್ವರರ ಸ್ಮರಣೆ ಸಾವಿರಾರು ಭಕ್ತರ ಹೃದಯದಲ್ಲಿ ಭಕ್ತಿ, ನಂಬಿಕೆ ಮತ್ತು ಧರ್ಮದ ಜ್ಯೋತಿಯನ್ನು ಬೆಳಗಿಸುತ್ತಿದೆ. ಅನೇಕ ವರ್ಷಗಳಿಂದ ಈ ಕ್ಷೇತ್ರವು ಅನ್ನದಾಸೋಹ, ಧರ್ಮಪ್ರಚಾರ, ಜನಸೇವೆ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳ ಮೂಲಕ ಸಮಾಜದ ಒಳಿತಿಗೆ ಶ್ರಮಿಸುತ್ತಿದೆ.

ಕಾಡುಸಿದ್ದೇಶ್ವರರ ಉಪದೇಶದ ಸಾರವೆಂದರೆ ಮಾನವನು ಸತ್ಯ, ಧರ್ಮ ಮತ್ತು ಸೇವೆಯ ಮಾರ್ಗದಲ್ಲಿ ನಡೆಯಬೇಕು. ಸಂಪತ್ತು, ಅಧಿಕಾರ ಮತ್ತು ಕೀರ್ತಿಗಿಂತ ಮಾನವೀಯತೆ ಹಾಗೂ ಭಕ್ತಿಯೇ ಶ್ರೇಷ್ಠ ಎಂಬ ಸಂದೇಶವನ್ನು ಅವರ ಜೀವನ ಬೋಧಿಸುತ್ತದೆ.

ಇಂದಿಗೂ ಲಕ್ಷಾಂತರ ಭಕ್ತರು ನೊಣವಿನಕೆರೆ ಕ್ಷೇತ್ರಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆಯುತ್ತಾರೆ. ಭಕ್ತರ ಕಷ್ಟಗಳಿಗೆ ಧೈರ್ಯ ತುಂಬುವ, ಸಂಕಷ್ಟದ ಸಮಯದಲ್ಲಿ ಆಶಾಕಿರಣವಾಗುವ ಈ ಪವಿತ್ರ ಕ್ಷೇತ್ರವು ಕರ್ನಾಟಕದ ಪ್ರಮುಖ ಆಧ್ಯಾತ್ಮಿಕ ಕೇಂದ್ರಗಳಲ್ಲಿ ಒಂದಾಗಿದೆ.

"ಧರ್ಮದಲ್ಲಿ ನಂಬಿಕೆ, ಹೃದಯದಲ್ಲಿ ಭಕ್ತಿ, ಜೀವನದಲ್ಲಿ ಸೇವೆ ಇದ್ದರೆ ದೈವಕೃಪೆ ಸದಾ ಜೊತೆಯಿರುತ್ತದೆ" ಇದೇ ಕಾಡುಸಿದ್ದೇಶ್ವರರ ಸಂದೇಶ.

800 ವರ್ಷದ ಪರಂಪರೆ, ಪಾಶುಪತ ಸಿದ್ಧರ ತಪೋಭೂಮಿ ನೊಣವಿನಕೆರೆ ಕಾಡಸಿದ್ದೇಶ್ವರ ಮಠ ಸಾಕ್ಷಾತ್ ಮಾತನಾಡುವ ಅಜ್ಜಯ್ಯನ ಸನ್ನಿಧಿ". ಶ್ರೀ ಕಾಡಸಿದ್ದೇಶ್ವರ ಸ್ವಾಮಿಗೆ ಶರಣು.

**ಇತಿಹಾಸ ಏನು?**

**1. ಹೆಸರು ಹೇಗೆ ಬಂತು :** ನೊಳಂಬ ರಾಜರು ಕಟ್ಟಿಸಿದ "ನೊಳಂಬಕೆರೆ" ಅಪಭ್ರಂಶವಾಗಿ "ನೊಣವಿನಕೆರೆ" ಆಯ್ತು.

**2. ಪರಂಪರೆ :** 12ನೇ ಶತಮಾನದಲ್ಲಿ ಪಾಶುಪತ–ಕಾಳಾಮುಖ ಶೈವ ಶಾಖೆಗಳ ಪ್ರಬಲ ಕೇಂದ್ರ. ನೊಳಂಬ ರಾಜ ಇರಿವನೊಳಂಬ ಇಲ್ಲಿನ ಮಠಗಳಿಗೆ ಭೂಮಿ ದಾನ ಕೊಟ್ಟಿದ್ದಾನೆ.

**3. ಮಠದ ವಯಸ್ಸು :** 800 ವರ್ಷಗಳ ಇತಿಹಾಸ ಇರೋ ಮಠ. 19 ಪೂಜ್ಯರ ತಪಸ್ಸಿನ ಫಲ.

**ಇಂದಿನ ಮಹಿಮೆ :**

**ಪೀಠಾಧಿಪತಿ :** ಶ್ರೀ ನಿರಂಜನ ಪ್ರಣವ ಸ್ವರೂಪಿ ಡಾ. ಕರಿಋಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ.

**ವಿಶೇಷ :** "ಸಾಕ್ಷಾತ್ ಮಾತನಾಡುವ ಅಜ್ಜಯ್ಯನ ಸ್ವರೂಪ" ಅಂತ ಭಕ್ತರ ನಂಬಿಕೆ.

**ಸೇವೆ :** ಗೋಶಾಲೆ, ವೇದ ಪಾಠಶಾಲೆ, ಪ್ರಾಥಮಿಕ ಶಿಕ್ಷಣ, ನಿರಂತರ ಅನ್ನದಾಸೋಹ, ಸಾಮೂಹಿಕ ವಿವಾಹ. ಜಾತ್ರಾ

**ವೈಭವ :** ಪ್ರತಿ ವರ್ಷ 3 ದಿನದ ಜಾತ್ರಾ ಮಹೋತ್ಸವ ನಡೆಯುತ್ತದೆ.

* ಕರಿಬಸವ ಸ್ವಾಮಿಗಳ 233ನೇ ವಾರ್ಷಿಕ ಸ್ಮರಣೋತ್ಸವ
* ಅಡ್ಡಪಲ್ಲಕ್ಕಿ ಉತ್ಸವ, ರಥೋತ್ಸವ, ಲಿಂಗದೀಕ್ಷೆ, ವಿದ್ಯಾಯಜ್ಞ
* ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ

**ತಿಪಟೂರು ಹೆಸರಿನ ಗುಟ್ಟು:** ಇಲ್ಲಿನ ಕಲ್ಲೇಶ್ವರ ದೇವಾಲಯದಲ್ಲಿ ನೊಳಂಬ ವಂಶದ ಮೂವರು ರಾಜರಿಗೆ ಪಟ್ಟ ಕಟ್ಟಿದ್ದರು. ಅದಕ್ಕೆ "ತ್ರಿಪಟ್ಟದೂರು" ಅದು ಈಗ ತಿಪಟೂರು ಆಯ್ತು.

**ಭಕ್ತರ ಅನುಭವ :** ರಾಜಕಾರಣಿಗಳಿಂದ ಸಾಮಾನ್ಯರವರೆಗೆ ಎಲ್ಲರೂ "ಅಜ್ಜಯ್ಯನ ಕೃಪೆಯಿಂದಲೇ ಒಳ್ಳೆಯದಾಗಿದೆ" ಅಂತಾರೆ. ಡಿಸಿಎಂ ಡಿ.ಕೆ. ಶಿವಕುಮಾರ್ ಕೂಡ "ಅಜ್ಜಯ್ಯನ ಆಶೀರ್ವಾದದಿಂದ ಸರ್ಕಾರ ಸುಭದ್ರ" ಅಂದಿದ್ದಾರೆ.

1. "ನಂಬಿದವರನ್ನು ಕೈಬಿಡದ ಅಜ್ಜಯ್ಯ, ನೊಣವಿನಕೆರೆಯ ಕಾಡಸಿದ್ದೇಶ್ವರ"
2. "ಗುರು ತೋರಿದ ದಾರಿಯಲ್ಲಿ ನಡೆದರೆ ಜೀವನ ಸುಖಮಯ"
3. "800 ವರ್ಷದ ತಪಸ್ಸು, ಇಂದಿಗೂ ಜೀವಂತ ಧಾರ್ಮಿಕ ಪರಂಪರೆ."

**"ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ**
**ಆಕಾಶಗಂಗೆಯಲ್ಲಿ ಮಜ್ಜನ**
**ಹಣವಿಲ್ಲದ ಪರಿಮಳದ ಪೂಜೆ**
**ಹೃದಯ ಕಮಲದಲ್ಲಿ ಶಿವಶಿವಾ ಎಂಬ ಶಬ್ದ**
**ಇದು ಅದ್ವೈತ ಕಾಣಾ ಗುಹೇಶ್ವರಾ"**

**– ಅಲ್ಲಮಪ್ರಭುದೇವರು**

# ನೊಳಂಬ ಲಿಂಗಾಯತ ಸಂಘದ ಕಾರ್ಯಚಟುವಟಿಕೆಗಳು

















# ನೊಳಂಬ ಲಿಂಗಾಯತ ಸಂಘದ ಕಾರ್ಯಚಟುವಟಿಕೆಗಳು

















# ನೊಳಂಬ ಲಿಂಗಾಯತ ಸಂಘದ ಕಾರ್ಯಚಟುವಟಿಕೆಗಳು

















Vol-16 Issue No. : 2 Periodical

**RNI No. KARKAN-2012/53684/Dtd. 19-12-2013, Nolamba Vani - Kannada Quarterly**
**April, May, June 2026, Number of Pages 56**









ಅರಳಗುಪ್ಪೆಯಲ್ಲಿರುವ ಕಲ್ಲೇಶ್ವರ ದೇವಾಲಯ



ಹೆಂಜೇರು(ಹೇಮಾವತಿ)ನೊಳಂಬರ ರಾಜಧಾನಿ, ಇಲ್ಲಿನ **Museum** ನಲ್ಲಿರುವ ಏಕಶಿಲೆಯಲ್ಲಿರುವ ಸಪ್ತಮಾತೃಕೆ ಪಟ್ಟ

Published, Printer and Owner : B.K.Chandrashekar, NOLAMBA ADHYAYANA KENDRA
Owned by on behalf of Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Published from : Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Printed at : Kala Offset Printers, # 1203, 1st Main, 1st Cross, M.C.Layout, Vijayanagar, Bengaluru - 560 040.
Editor : Dr. Rakesh B.C.